ಕರ್ನಾಟಕ ವಿಧಾನ ಸಭೆ

ಗುರುವಾರ 30ನೇ ಮಾರ್ಚ್ 2000ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 9.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಂ. ವಿ. ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.
(ಸಭೆಯು 9-46 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು)

(1) ವಿತ್ತೀಯ ಕಾರ್ಯಕಲಾಪಗಳು :

(ಅ) 2000-2001ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ :

+ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು 10 ನಿಮಿಷಗಳ ಕಾಲ ಸಮಯಾವಕಾಶ ಕೊಟ್ಟಿದ್ದಕ್ಕೆ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮುಖ್ಯವಾಗಿ ಇವತ್ತು ನಮ್ಮ ಮಾನ್ಯ ಕಾನೂನು ಸಚಿವರು ಹಾಗೂ ಹಿರಿಯ ಸಚಿವರಾದ ಮಾನ್ಯ ಘೋರ್ಪಡೆಯವರು ಈ ಸಭೆಯಲ್ಲಿ ಇದ್ದಾರೆ. ಇಂತಹ ಮಹತ್ವವಾದ ವಿಷಯದ ಬಗ್ಗೆ ಚರ್ಚೆ ಮಾಡಲು ನಮಗೆ ವಾರಗಟ್ಟಲೆ ಸಮಯವನ್ನು ತಾವು ಕೊಡಬೇಕಾಗುತ್ತದೆ. ನಾವು ಅನೇಕ ಸಲಹೆ-ಸೂಚನೆಗಳನ್ನು ಸಹ ಕೊಡಬೇಕಾಗುತ್ತದೆ. ಇಲ್ಲಿ ಏನೋ ಅವಸರದಲ್ಲಿ ಅಸೆಂಬ್ಲಿಯನ್ನು ಕರೆದು, 10 ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ಹೇಳಿದರೆ ನಾವು ಏನು ಮಾತನಾಡುವುದು ? ಏನು ಸಲಹೆ-ಸೂಚನೆಗಳನ್ನು ಕೊಡುವುದು ? ಸರ್ಕಾರದವರು ತಪ್ಪು ಮಾಡಿದರೆ ಅಧ್ಯಕ್ಷರು ಏನು ಮಾಡಬೇಕು ? ಇವತ್ತು ಸಂಜೆಯೊಳಗಾಗಿ ತಾವು ಚರ್ಚೆಯನ್ನು ಮುಕ್ತಾಯಗೊಳಿಸಬೇಕಾಗಿದೆ. ಆ ದೃಷ್ಟಿಯಿಂದ ನಾವೂ ಸಹ ತಮಗೆ ಸಹಕಾರ ಕೊಡಬೇಕಾಗುತ್ತದೆ. ಮಾನ್ಯ ಕಾನೂನು ಸಚಿವರು ಕಾಯ್ದೆ ಪುಸ್ತಕವನ್ನು ತಿರುವುತ್ತಾ ಇರುತ್ತಾರೆ. ಅದಕ್ಕೆ ನಾನು ತಮಗೆ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಈ ಸಭೆಯಲ್ಲಿ ಮಂಡಿಸಿದ ಹಿಂದಿನ ಎಲ್ಲಾ ಬಜೆಟ್‌ಗಳಿಗಿಂತಲೂ ಇದು ರೂಪದಲ್ಲಿ ಬಹಳ ಸುಂದರವಾಗಿದೆ. ಬಣ್ಣ ಬಳಿಯುವುದರಲ್ಲಿ ಬಹಳ ಬುದ್ಧಿವಂತರು ಈ ಕಾಂಗ್ರೆಸ್ಸಿನವರು ! ತಾವು ನೋಡಿ ಎಷ್ಟು ಚೆನ್ನಾಗಿ ಮಾಡಿದ್ದಾರೆ. ಆದರೆ ಇದರಲ್ಲಿ ಏನೇನೂ ಇಲ್ಲ. ಇದರಲ್ಲಿ ಬಹಳ ವಿಚಾರಗಳನ್ನು ಹೇಳಿದ್ದಾರೆ. ಉತ್ತರ ಕರ್ನಾಟಕದ ಬಗ್ಗೆ ಬಹಳ ಹೊಗಳಿದ್ದಾರೆ, ಅದನ್ನು ಅಭಿವೃದ್ಧಿ ಮಾಡುತ್ತೇನೆ, ಇದನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದ್ದಾರೆ. ರೈತರಿಗೆ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇವೆಂದು ಹೇಳಿ 'ರೈತರೇ ಈ ದೇಶದ ಬೆನ್ನೆಲುಬು' ಅಂತ ಸಹ ಹೇಳಿದ್ದಾರೆ. ಆಮೇಲೆ ಇದರಲ್ಲಿ ಇನ್ನೊಂದು ವಿಚಾರ ಹೇಳಿದ್ದಾರೆ, 'ರೈತರು-ರೈತರಿಂದ-ರೈತರಿಗಾಗಿ ಈ ಸರ್ಕಾರ' - ಇದು ಅವರ ಹೊಸ ಘೋಷಣೆ. ಮಾನ್ಯ ಅಧ್ಯಕ್ಷರೇ, ರೈತರಿಗಾಗಿ ಈ ಸರ್ಕಾರದವರು ಏನು ಮಾಡಿದ್ದಾರೆಂದು ನಾನು ಹೇಳುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಹೆಚ್ಚು ಸಮಯ ತೆಗೆದುಕೊಂಡು ಮಾತನಾಡುವವನಿದ್ದೇನೆ. ಈಗ ಎಲ್ಲಾ ವಿಚಾರಗಳನ್ನು ಹೇಳಲು ನನಗೆ ಸಮಯವಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಒಂದು ರೀತಿಯಿಂದ ನಾನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ ಅವರು ಬೇರೆಯವರು

ಒಳ್ಳೆಯದನ್ನು ಮಾಡಿದ್ದರೂ ಕೂಡ ಮಾಡಿದ್ದಾರೆಂದು ಹೇಳುತ್ತಾರೆ. ಅದರೂ ಕೆಲವೊಂದನ್ನು ಬಿಟ್ಟಿದ್ದಾರೆ. ಅವರು ಇಲ್ಲಿ ಕೊಟ್ಟಿರುವ ಆಶ್ವಾಸನೆಗಳನ್ನೆಲ್ಲಾ ಈಡೇರಿಸಿದರೆ ನಾನು ಅವರಿಗೆ ಕೃತಜ್ಞನಾಗಿರುತ್ತೇನೆ. ಈ ಬಗ್ಗೆ ನಾನು ಹಿಂದಿನ ಉದಾಹರಣೆಗಳನ್ನು ನೋಡಿದರೆ ಇವರು ಮಾಡುತ್ತಾರೆನ್ನುವ ವಿಶ್ವಾಸ ನನಗೆ ಇಲ್ಲ. ಕಳೆದ 5 ವರ್ಷಗಳಲ್ಲಿ ಯಾವುದೇ ಒಂದು ಯೋಜನೆಗೆ ಒಬ್ಬರ ಮೇಲೆ ಒಬ್ಬರು ಅಡಿಗಲ್ಲು ಹಾಕಿದ ಉದಾಹರಣೆಗಳು ಇವೆ. ಬಹುಶಃ ಹುಲಿಗುಡ್ಡದಲ್ಲಿ ಎರಡು ಸಲ ಅಡಿಗಲ್ಲು ಹಾಕಿದರು.

ನಮ್ಮ ಮಾನ್ಯ ಸದಸ್ಯರಾದ ಬನ್ನಿಕೋಡ್‌ರವರು ಈಗ ತಮ್ಮ ಪಕ್ಷಕ್ಕೆ ಬಂದಿದ್ದಾರೆ, ಅವರು ಅಪ್ಪರ್‌ತುಂಗಾ ಯೋಜನೆ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ಕೇಳಬೇಕಾಗಿತ್ತು. ಸರ್ಕಾರದವರು ಎರಡು ಸಲ ಅಡಿಗಲ್ಲು ಹಾಕಿದರು, ಯಾವುದೂ ಚಾಲು ಆಗಲಿಲ್ಲ. ಆದ್ದರಿಂದ ಇವರು ಹೇಳಿದ್ದೆಲ್ಲಾ ಮಾಡುತ್ತಾರೆ ಎನ್ನುವ ವಿಶ್ವಾಸ ನಮಗೆ ಇಲ್ಲ. ತಾವು ಕೊಟ್ಟ ಆಶ್ವಾಸನೆಯನ್ನು ಈಡೇರಿಸುವ ಬುದ್ಧಿಯನ್ನು ಗಾಂಧೀಜಿಯವರು ತಮಗೆ ಕೊಟ್ಟರೆ ನಾನು ಬಹಳ ಸಂತೋಷಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನೂ ಹೊಗಳಿದ್ದಾರೆ, ಇದರಲ್ಲಿ ಕೆಲವನ್ನು ಮಾತ್ರ ಬಿಟ್ಟಿದ್ದಾರೆ. ಕರ್ನಾಟಕವು ಹಲವು ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಇದರ ಸಾಧನೆಗಳು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಮಾನ್ಯತೆಯನ್ನು ಗಳಿಸಿದೆ ಅಂತ ಹೇಳಿದ್ದಾರೆ. ಈ ಅದ್ಭುತ ಸಾಧನೆಗಳ ಬಗ್ಗೆ ಅವರು ಹೇಳುವಾಗ ಹಿಂದೆ ಒಂದು ಶಬ್ಧವನ್ನು ಸೇರಿಸಿದ್ದರೆ ಬಹಳ ಚೆನ್ನಾಗಿರುತ್ತಿತು. ಅವರು 'ಕಳೆದ 5 ವರ್ಷಗಳಿಂದ' ಅಂತ ಒಂದು ಶಬ್ಧವನ್ನು ಸೇರಿಸಿದ್ದರೆ ನಿಜವಾಗಿಯೂ ತಾವು ಅದನ್ನು ಹೊಗಳಿದಂತೆ ಆಗುತ್ತಿತ್ತು. ಇದ್ದದ್ದನ್ನು ಇದ್ದಂತೆ ಹೇಳಿದಂತೆ ಆಗುತ್ತಿತ್ತು. ಬಹುಶಃ ತಾವು ಅದನ್ನು ಒಪ್ಪುತ್ತೀರಿ ಎಂದು ನನಗೆ ಅನಿಸುತ್ತದೆ.

ಕಳೆದ ನಾಲ್ಕು ವರ್ಷಗಳಲ್ಲಿ ವಿಶ್ವಬ್ಯಾಂಕ್‌ನವರು ರಾಜ್ಯದ ಜೊತೆಗೆ ಆಗೊಮ್ಮೆ ಇಗೊಮ್ಮೆ ಮಾತುಕತೆ ನಡೆಸಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ನಿಯೋಗದೊಂದಿಗೆ ವಿಶ್ವಬ್ಯಾಂಕ್ ನವರಲ್ಲಿಗೆ ಹೋಗಿ ಮಾತನಾಡಿ, ಅದರ ಅಧ್ಯಕ್ಷರು ಇಲ್ಲಿಗೆ ಬಂದು ಮಾತನಾಡಿದಮೇಲೆ ಇದೆಲ್ಲವೂ ಒಂದು ಫೈನಲ್ ಸ್ಟೇಜ್‌ಗೆ ಬಂದಿತ್ತು. ವಸ್ತುಸ್ಥಿತಿ ಹೀಗೆ ಇರುವಾಗ 'ಆಗೊಮ್ಮೆ-ಇಗೊಮ್ಮೆ' ಎಂದು ಅವರು ತಪ್ಪು ಹೇಳಬಾರದಾಗಿತ್ತು. ಎಲ್ಲವನ್ನೂ ಹೇಳಿ ಈ ಮೂರು ನಾಲ್ಕು ವಿಚಾರಗಳನ್ನು ಬಿಟ್ಟಿದ್ದಾರೆ ಎಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ನಿಜವಾಗಿಯೂ ಕೂಡ ಇದರ ಕೀರ್ತಿಯು ನಮ್ಮ ಸರಕಾರಕ್ಕೆ ಮತ್ತು ನಮ್ಮ ಹಿಂದಿನ ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಹಿಳೆಯರ ಅಭಿವೃದ್ಧಿ ಯೋಜನೆಗಳ ಬಗ್ಗೆ ಇತ್ಯಾದಿಯಾಗಿ ಹೇಳಿದ್ದಾರೆ. ಇಲ್ಲಿ ಸಮಯದ ಅಭಾವದಿಂದಾಗಿ ನಾನು ಪ್ರಾಮುಖ್ಯವಾಗಿ ಒಂದು ವಿಚಾರ ಹೇಳಬಯಸುವುದೇನೆಂದರೆ, ನಮ್ಮ ಉತ್ತರ ಕರ್ನಾಟಕದ ಭಾಗಕ್ಕೆ ಬಹಳ ಅನ್ಯಾಯವನ್ನು ಉಂಟು ಮಾಡುವ ಯೋಜನೆಗಳನ್ನು ತಯಾರು ಮಾಡಿದ್ದಾರೆ. ಉತ್ತರ ಕರ್ನಾಟಕದ ಮಾನ್ಯ ಶಾಸಕರುಗಳು ಎಲ್ಲರೂ ಕೂಡ ಈ ಬಗ್ಗೆ ಬಹಳ ಎಚ್ಚರದಿಂದ ಇರಬೇಕಾಗುತ್ತದೆ. ನಾನು ಇದ್ದುದನ್ನು ಇದ್ದಹಾಗೆ ಹೇಳುತ್ತೇನೆ. ಯಾರಾದರೂ ಸಹ ಪಕ್ಷ ಬೇಧ ಮರೆತು ಇದನ್ನು ಹೇಳಬೇಕಾಗುತ್ತದೆ. ಸರಕಾರದವರು ಉತ್ತರ ಕರ್ನಾಟಕಕ್ಕೆ ಬಹಳ ಒಳ್ಳೆಯದನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಬಹಳ ಅನ್ಯಾಯ ಮಾಡತಕ್ಕಂಥ ಕೆಲವು ವಿಷಯಗಳು ಇಲ್ಲಿವೆ. ಅದರಲ್ಲಿಯೂ ಶಿಕ್ಷಣ ಖಾತೆಯಲ್ಲಿ ನಮಗೆ ಬಹಳ ಅನ್ಯಾಯವನ್ನು ಮಾಡುತ್ತಾ ಇದ್ದಾರೆ. ಮಾನ್ಯ

ಮುಖ್ಯಮಂತ್ರಿಯವರು ಒಂದು ವಿಚಾರವನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. "ಬಾಲಕನೊಬ್ಬ ಕಲಿತರೆ ಅವನೊಬ್ಬ ಕಲಿತಂತೆ, ಬಾಲೆಯೊಬ್ಬಳು ಕಲಿತರೆ ಕುಟುಂಬವೇ ಕಲಿತಂತೆ"- ಎಂದು ಹೇಳಿದ್ದಾರೆ. ಅದಕ್ಕೆ ನಾನು ಹೀಗೆ ಸೇರಿಸಿ ಎಂದು ಒಂದು ಸಲಹೆ ಮಾಡುತ್ತೇನೆ. "ಸರಕಾರಿ ಶಾಲೆಯಲ್ಲಿ ಕಲಿತರೆ..." ಎಂದು ಸೇರಿಸಿ ಹೇಳಿದರೆ ಅದು ಇನ್ನೂ ಉತ್ತಮವಾದೀತು. "ಇದನ್ನು ನಾವು ಕಾರ್ಯತಃ ಮಾಡಿ ತೋರಿಸಲು ನಾವು ಉದ್ದೇಶಿಸಿದ್ದೇನೆ. ಈ ನಿಟ್ಟಿನಲ್ಲಿ ನಾವು ಎಲ್ಲಾ ಹೆಣ್ಣು ಮಕ್ಕಳಿಗೆ ಸರಕಾರಿ ಶಾಲಾ ಕಾಲೇಜುಗಳಲ್ಲಿ ಪಿ.ಯು.ಸಿ. ವರೆಗೆ ಉಚಿತ ಶಿಕ್ಷಣವನ್ನು ನೀಡಲಿದ್ದೇವೆ." ಎಂದು ಹೇಳಿದ್ದಾರೆ. ತಮಗೆಲ್ಲರಿಗೂ ತಿಳಿದಿರುವ ಹಾಗೆ ಉತ್ತರ ಕರ್ನಾಟಕದಲ್ಲಿ ಶೇಕಡಾ 90ರಷ್ಟು ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳು ಇವೆ. ಇತ್ತೀಚೆಗೆ 5, 10 ವರ್ಷಗಳಲ್ಲಿ ಅಲ್ಲೊಂದು ಇಲ್ಲೊಂದು ಸರಕಾರಿ ಶಾಲೆಗಳು ಸ್ಥಾಪನೆ ಆಗಿರಬಹುದು. ಹಾಗಾದರೆ ಖಾಸಗಿ ಶಾಲೆಗಳಲ್ಲಿರತಕ್ಕಂಥ ಹೆಣ್ಣು ಮಕ್ಕಳು ಏನು ಮಾಡಬೇಕು ? ಇದೊಂದು ಬಹಳವಾಗಿ ವಿಚಾರ ಮಾಡತಕ್ಕಂಥ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕಾನೂನು ಮಂತ್ರಿಗಳಲ್ಲಿ ಈ ಬಗ್ಗೆ ನಾನು ಕೇಳಲಿಚ್ಛಿಸುತ್ತೇನೆ. ಇದನ್ನು ಬದಲಾವಣೆ ಮಾಡಿ ಎಲ್ಲಾ ಶಾಲೆಗಳಲ್ಲಿರತಕ್ಕಂಥ ಹೆಣ್ಣು ಮಕ್ಕಳಿಗೆ ಎಂದು ಮಾಡಬೇಕು. ಹೀಗೆ ಮಾಡದಿದ್ದರೆ ನಮಗೆ ಬಹಳ ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

ಈ ಬಗ್ಗೆ ಇನ್ನೂ ಹೆಚ್ಚಿನ ವಿವರಣೆಯನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡುವಾಗ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಇನ್ನೊಂದು ದೊಡ್ಡ ಆಘಾತದ ವಿಚಾರ ಅಂದರೆ ಉನ್ನತ ಶಿಕ್ಷಣಕ್ಕೆ ಕೊಡತಕ್ಕಂತಹ ಅನುದಾನದಲ್ಲಿ 15 ಪರ್‌ಸೆಂಟ್‌ನ್ನು ಬಜೆಟ್‌ನಲ್ಲಿ ಕಡಿಮೆ ಮಾಡಿದ್ದಾರೆ. ಇದೂ ಕೂಡ ಉತ್ತರ ಕರ್ನಾಟಕಕ್ಕೆ ಮಾಡಿದಂಥ ದೊಡ್ಡ ಅನ್ಯಾಯವಾಗಿದೆ. ಇದನ್ನು ತೆಗೆದು ಹಾಕುವುದು ಉತ್ತಮ. ಆ ಶಿಕ್ಷಣ ಸಂಸ್ಥೆಗಳನ್ನು ಧರ್ಮ ಸಂಸ್ಥೆಗಳು ಮತ್ತು ವಿಶೇಷತಃ ವೀರಶೈವ ಮಠಗಳವರು ಉನ್ನತ ಶಿಕ್ಷಣವನ್ನು ಕೊಡಲು ನಡೆಸುತ್ತಿದ್ದಾರೆ. ಅವರು ಕರ್ನಾಟಕದ ಎಲ್ಲೆಡೆಯಲ್ಲಿಯೂ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ತಾವು ಉನ್ನತ ಶಿಕ್ಷಣಕ್ಕೆ 15ರಷ್ಟು ಅನುದಾನವನ್ನು ಯಾವ ದೃಷ್ಟಿಯಿಂದ ಕಡಿತ ಮಾಡುತ್ತಾ ಇದ್ದೀರಿ ಎಂಬದನ್ನು ಹೇಳಿಲ್ಲ. ನೀವು ಒಂದು ವೇಳೆ ಶಿಕ್ಷಕರ ಸಂಬಳವನ್ನು ಏನಾದರೂ ಕಟ್ ಮಾಡಿದರೆ, ಖಂಡಿತವಾಗಿಯೂ ಅವರೆಲ್ಲರೂ ಶಾಲಾ-ಕಾಲೇಜುಗಳನ್ನು ಮುಚ್ಚುತ್ತಾರೆ. ಆಗ ಅವುಗಳನ್ನು ನಡೆಸುವುದಕ್ಕೆ ಸರಕಾರದವರು ತಯಾರಾಗಬೇಕಾಗುತ್ತದೆ. ಹಿಂದೆ ನಾವು ಅಧಿಕಾರದಲ್ಲಿದ್ದಾಗ ಇದೇ ಪ್ರಸ್ತಾಪ ಬಂದಿತ್ತು. ನಾವು ಅದನ್ನು ವಿರೋಧ ಮಾಡಿ ವಾಪಸ್ ಕಳುಹಿಸಿದ್ದೆವು. ಆದ್ದರಿಂದ ಉತ್ತರ ಕರ್ನಾಟಕದ ಶಾಸಕರೆಲ್ಲರೂ ಪಕ್ಷಭೇದ ಮರೆತು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇದರಿಂದ ಹೆಚ್ಚು ಹೊಡೆತವು ಉತ್ತರ ಕರ್ನಾಟಕದವರಿಗೆ ಆಗುತ್ತದೆ. ಉನ್ನತ ಮತ್ತು ಪ್ರಾಥಮಿಕ ಶಿಕ್ಷಣ ಸಚಿವರಲ್ಲಿ ತಾವುಗಳೆಲ್ಲರೂ ಚರ್ಚೆ ಮಾಡಬೇಕಾಗುತ್ತದೆ. ಈ ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರ ಆದ್ಯತೆಯನ್ನು ಕೊಡುವುದು ಬೇಡ ಎಂದು ನಾನು ಹೇಳುವುದಿಲ್ಲ. ಹಾಗೆಯೇ ಉನ್ನತ ಶಿಕ್ಷಣವನ್ನು ನಿರ್ಲಕ್ಷ್ಯ ಮಾಡಲು ಕೂಡ ಆಗುವುದಿಲ್ಲ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹೀಗೆ ಇದನ್ನು ವಾಪಸ್ ತೆಗೆದುಕೊಳ್ಳದಿದ್ದರೆ ನಮ್ಮ ಉತ್ತರ ಕರ್ನಾಟಕದವರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಾರೆ ಎಂಬ ಮಾತನ್ನು ನಾನು ಒತ್ತಿ ಹೇಳಬಯಸುತ್ತೇನೆ. ಹೀಗೆ ಆದ್ದದ್ದೇ ಆದರೆ ಎಲ್ಲಾ ಸಂಸ್ಥೆಗಳವರು ತಮ್ಮ ಶಾಲೆಗಳನ್ನು ಬಿಟ್ಟು ಕೊಡುತ್ತಾರೆ ಮತ್ತು ಆಗ ಸರಕಾರದವರೇ ಅವುಗಳನ್ನು ನಡೆಸುವ ಸ್ಥಿತಿ ಬರುತ್ತದೆ. ನಮ್ಮ ಭಾಗದಲ್ಲಿ ವಿಶೇಷತಃ ಕೆಎಲ್‌ಇ ಸೊಸೈಟಿಯವರು ಮತ್ತು

ಹಲವಾರು ಧಾರ್ಮಿಕ ಸಂಸ್ಥೆಗಳವರು ಜಾತಿಭೇದ ಇಲ್ಲದೆ ಆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾ ಇದ್ದಾರೆ. ಹೀಗಾದರೆ ಆ ಶಿಕ್ಷಣ ಸಂಸ್ಥೆಗಳನ್ನು ಅವರೆಲ್ಲರೂ ಬಿಟ್ಟು ಕೊಡುತ್ತಾರೆ. ಆಗ ಅದರ ಜವಾಬ್ದಾರಿಯು ಸರಕಾರಕ್ಕೆ ಬರುತ್ತದೆಯಾದ ಕಾರಣ ಈ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮೀಣ ಮಹಿಳೆಯರಿಗೆ ಕಿಟ್ ಕೊಡುವುದು, ಮತ್ತಿತರ ಯೋಜನೆಗಳ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಹೊಸತಾಗಿ ಏನಾದರೂ ಹೇಳಬೇಕಲ್ಲವೆ? ಹಾಗೆ ನೀವು ಹೇಳಿದ್ದೀರಿ. ಬಣ್ಣ ಹಚ್ಚುವುದರಲ್ಲಿ ಕಾಂಗ್ರೆಸ್‌ನವರು ಬಹಳ ಬುದ್ಧಿವಂತರು ಈ ಮೂಲಕ ಹೆಣ್ಣು ಮಕ್ಕಳಿಗೆ ಮೋಡಿ ಮಾಡಲು ಹವಣಿಸಿದ್ದೀರಿ ಎಂದು ಕಾಣುತ್ತದೆ. ಈ ಕೆಲಸವನ್ನು ನೀವು ಬಹಳ ಚೆನ್ನಾಗಿ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿನ ಯಾವ ಹಳ್ಳಿಗಳಿಗೆ ಹೋದರೂ ಕೂಡ ಯಾವ ದವಾಖಾನೆಗಳಲ್ಲಿಯೂ ಡಾಕ್ಟರ್‌ಗಳು ಇಲ್ಲ. ನಮ್ಮ ಸರಕಾರ ಇದ್ದಾಗಲೂ ಆ ಖಾಲಿ ಜಾಗಗಳನ್ನು ತುಂಬಲು ಆಗಲಿಲ್ಲ. ಆದ್ದರಿಂದ ಈ ಯೋಜನೆಗಳಿಗಾಗಿ ನೂರಾರು ಕೋಟಿ ರೂಪಾಯಿಗಳನ್ನು ತೆಗೆದು ಇಡುತ್ತಿದ್ದೀರಿ. ನೀವು ಕೊಡುತ್ತಿರುವ ಪಿಹೆಚ್‌ಸಿ ಮುಂತಾದವುಗಳು ಬೇಕಾಗಿಲ್ಲ, ನಮಗೆ ಆಯುರ್ವೇದ, ಯುನಾನಿ, ಹೋಮಿಯೋಪತಿ, ದವಾಖಾನೆಗಳನ್ನು ಕೊಡಿ. ಪ್ರತಿಯೊಂದು ಪಂಚಾಯತ್‌ಗೂ ಒಂದು ದವಾಖಾನೆಯನ್ನು ಕೊಟ್ಟರೆ ಅಲ್ಲಿ ಎಲ್ಲ ಆರೋಗ್ಯ ಉಂಟಾಗುತ್ತದೆ. ಅದಕ್ಕೆ ಸರಿಯಾದ ಡಾಕ್ಟರ್ ಮತ್ತಿತರ ಸಿಬ್ಬಂದಿಯನ್ನು ಕೊಟ್ಟುಬಿಡಿ. ಅದನ್ನು ಬಿಟ್ಟು ಜನಪ್ರಿಯ ಯೋಜನೆಗಳನ್ನು ಮಾಡಿ ಮತ ಕಬಳಿಸುವ ಕೆಲಸವನ್ನು ಮಾಡಬಾರದು. ತಾವುಗಳು ಆಯುರ್ವೇದಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕು. ನಮ್ಮ ಪಿಹೆಚ್‌ಸಿಗಳಲ್ಲಿ ಇವೊತ್ತು ಡಾಕ್ಟರ್‌ಗಳಿಲ್ಲ. ಎಲ್ಲ ಕಡೆಗಳಲ್ಲಿ ಅವರ ಖಾಲಿ ಹುದ್ದೆಗಳಿವೆ. ಮೆಡಿಕಲ್ ಕಾಲೇಜುಗಳನ್ನು ಸಾಕಷ್ಟು ಕೊಟ್ಟುಬಿಡಿ. ಕೊಡಬಾರದು ಎಂದು ಏಕೆ ಹೇಳುತ್ತೀರಿ ? ಮೆಡಿಕಲ್ ಕಾಲೇಜುಗಳು ಹೆಚ್ಚಿವೆ ಎಂದು ಹೇಳುತ್ತಿದ್ದೀರಿ, ಡಾಕ್ಟರ್‌ಗಳು ಕಲಿತು ಅಡ್ಡಾಡುತ್ತಿದ್ದಾರೆಂದು ಹೇಳುತ್ತೀರಿ. ಅದೆಲ್ಲವೂ ಸುಳ್ಳು. ಡಾಕ್ಟರ್‌ಗಳು ಎಲ್ಲಿದ್ದಾರೆ ? ಇದ್ದರೆ ಅವರು ಏಕೆ ಬರುತ್ತಿಲ್ಲ ? ಒಂದೊಂದು ದವಾಖಾನೆಗೆ ಹತ್ತತ್ತು ಸಲ ನೇಮಕ ಮಾಡಿದರೂ ಕೂಡ ಯಾರಾದರೂ ಒಬ್ಬರು ಬಂದು ಅಲ್ಲಿ 15 ದಿನಗಳಿದ್ದು ಪುನಃ ಹೋಗಿಬಿಡುತ್ತಾರೆ. ಆದಕಾರಣ ಆಯುರ್ವೇದಕ್ಕೆ ಹೆಚ್ಚು ಒತ್ತು ಕೊಡಿ. ಮೆಡಿಕಲ್ ಕಾಲೇಜುಗಳನ್ನು ಹೆಚ್ಚು ಕೊಡಿ, ಅದರಿಂದ ಏನೂ ಅನಾನುಕೂಲ ಆಗುವುದಿಲ್ಲ. ಡಾಕ್ಟರ್‌ಗಳು ಹೆಚ್ಚು ಕಲಿತರೆ ಅವರುಗಳು ಹಳ್ಳಿಗಳಿಗೆ ಬರುವಂತಾಗುತ್ತದೆ. ಇಲ್ಲವಾದಲ್ಲಿ ಇಲ್ಲ. ಆಯುರ್ವೇದ ಕಲಿತವರು ಹಳ್ಳಿಗಳ ಕಡೆಗೆ ಬರುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಹಿಂದೆ ದಿವಂಗತ ಸಿದ್ದವೀರಪ್ಪನವರು ಇದ್ದಾಗ ಅವರು ಆಯುರ್ವೇದಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದರು. ನಾನು ಕೂಡ ನನ್ನ ಕ್ಷೇತ್ರಕ್ಕೆ ಒಂದೆರಡು ದವಾಖಾನೆಗಳನ್ನು ತೆಗೆದುಕೊಂಡು ಹೋಗಿದ್ದೇನೆ. ಆದ್ದರಿಂದ ಆಯುರ್ವೇದ ಹೋಮಿಯೋಪತಿ ಮತ್ತು ಯುನಾನಿ ದವಾಖಾನೆಗಳನ್ನು ಹೆಚ್ಚು ಹೆಚ್ಚಾಗಿ ಪ್ರಾರಂಭಿಸಬೇಕೆಂದು ನಾನು ಈ ಮೂಲಕ ಒತ್ತಾಯಿಸುತ್ತೇನೆ.

ಇನ್ನು ಕೃಷಿಯ ವಿಚಾರ ಕುರಿತು ಹೇಳುವುದಾದರೆ. ಈ ಕೃಷಿ ಬಗ್ಗೆ ಬಹಳ ಒತ್ತು ಕೊಟ್ಟು ಕೆಲವು ಮಾತುಗಳನ್ನು ಆಡಿದ್ದಾರೆ. ಇಲ್ಲಿ ಕೃಷಿ ಇನ್‌ಶೂರೆನ್ಸ್ ಯೋಜನೆ ಬಗ್ಗೆ ಹೇಳಿದ್ದಾರೆ. ಹಿಂದೆ ಇದಕ್ಕಾಗಿ ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಇವೊತ್ತು ನಾವು 100 ಕೋಟಿ ರೂಪಾಯಿಗಳನ್ನು ಹಾಕಿದ್ದೇವೆ ಹಿಂದೆ ಇದ್ದುದು ಕ್ರಾಪ್ ಇನ್‌ಶೂರನ್ಸ್ ಅಲ್ಲ, ಅದು ರೈತರಿಗೆ ಮಾಡಿದಂಥ ಕಡು ಮೋಸದ ವಿಚಾರವಾಗಿತ್ತು. ಇವೊತ್ತು ಕೇಂದ್ರ ಸರಕಾರದವರು ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿ, ರಾಜ್ಯ ಸರಕಾರಕ್ಕೆ

ಒಂದು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಕಳುಹಿಸಿದ್ದಾರೆ. ಆದಕ್ಕೆ ನಿಮ್ಮ ನೂರು ಕೋಟಿಗ ರೂಪಾಯಿಗಳು ಸಾಲುವುದಿಲ್ಲ. ಆದಕ್ಕೆ ಸುಮಾರು 300 ಕೋಟಿ ರೂಪಾಯಿಗಳು ಬೇಕಾಗುತ್ತದೆ. ರೈತರು ನಿಮ್ಮಿಂದ ಏನನ್ನೂ ಬೇಡವುದಿಲ್ಲ. ಅವರು ನಿಮ್ಮ ಕರೆಂಟ್ ಬಿಲ್‌ನಿಂದ ಹಿಡಿದು ಕಟ್ಟಬೇಕಾಗದುದನ್ನೆಲ್ಲಾ ಕಟ್ಟುತ್ತಾರೆ. ಅವರಿಗೆ ಬೇಕಾಗಿರುವ ಬೆಳೆ ವಿಮೆ ಇರಬಹುದು, ಬೆಳೆ ನಷ್ಟದ ವಿಚಾರದಲ್ಲಿ ಇರಬಹುದು, ಹೀಗೆ ಎಲ್ಲಾ ದೃಷ್ಟಿಯಿಂದಲೂ ಸರಕಾರದವರು ಕೃಷಿ ವಿಮೆಯ ಹೊಸ ಪದ್ಧತಿಯ ಬಗ್ಗೆ ಗಮನ ಕೊಟ್ಟು ಅದನ್ನು ಜಾರಿಗೆ ತರಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ. ಆದ್ದರಿಂದ ಈಗ ಇರುವುದನ್ನು ಬದಲಾವಣೆ ಮಾಡಿ ಈ ಕೃಷಿ ಇನ್‌ಶ್ಯೂರೆನ್ಸ್‌ನ್ನು ಮಾಡಬೇಕೆಂದು ಹೇಳಿ, ನನಗೆ ಅವಕಾಶ ಕಡಿಮೆ ಇರುವುದರಿಂದ ಆದಷ್ಟು ಜಾಗ್ರತೆ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಯಾರು ಹೆಚ್ಚು ದಾಂಧಲೆ ಮಾಡುತ್ತಾರೆ, ಯಾರಿಗೆ ಹೆಚ್ಚು ಬಾಯಿ ಜೋರು ಮಾಡುವ ಸಾಮರ್ಥ್ಯ ಇರುತ್ತದೆ ಅವರದ್ದು ಇಲ್ಲಿ ಹೆಚ್ಚು ನಡೆಯುತ್ತದೆ. ಅವರು ಕೂಡ ನಮ್ಮ ಹಾಗೆ ರೈತರುಗಳೇ. ಮೊನ್ನೆ ತೆಂಗು ಬೆಳೆಯ ನುಸಿ ಕೀಟದ ಬಗ್ಗೆ ಪ್ರಸ್ತಾಪವಾಗಿದೆ. ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚು ಶೇಂಗಾ ಬೆಳೆಯುವ ರೈತರುಗಳಿದ್ದಾರೆ. ಅವರು ಶೇಂಗಾ ಬಿತ್ತುವುದನ್ನೇ ಬಿಡುವ ಸ್ಥಿತಿ ನಮ್ಮಲ್ಲಿ ಬಂದಿದೆ. ಅಲ್ಲಿ ಎಲ್ಲಾ ಬೆಳೆಗಳೂ ನಾಶವಾಗುತ್ತಿದ್ದು ರೈತರು ಭಾರೀ ತೊಂದರೆಯನ್ನು ಎದುರಿಸುತ್ತಿದ್ದಾರೆ. ಆ ರೈತರುಗಳ ಕಷ್ಟ ಹೇಳತೀರದು. ಆದರೆ ಇಲ್ಲಿ ಎಲ್ಲರೂ ನುಸಿ ರೋಗದ ಬಗ್ಗೆ ಹೇಳಿದರು. ಹಾಗೆ ಆಗಬಾರದು. ರೈತರುಗಳು ಬೆಳದಂತಹ ಬೆಳೆಗೆ ಬರತಕ್ಕಂಥ ಎಲ್ಲಾ ರೋಗಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಆಗಲೇ ಅದಕ್ಕೆ ಹೆಚ್ಚು ಅರ್ಥ ಬರುತ್ತದೆ. ಇನ್ನು ಮುಂದೆ ಗೊಬ್ಬರವನ್ನು ಹೆಚ್ಚು ಬಳಸಬೇಡಿ ಎಂದು ಪ್ರಚಾರ ಮಾಡುವಂಥ ಕಾಲ ಬಹಳ ದೂರವಿಲ್ಲ. ಸರಕಾರಿ ಗೊಬ್ಬರವನ್ನು ಉಪಯೋಗಿಸಿ ಸಂಪೂರ್ಣವಾಗಿ ಭೂಮಿ ನಿಸ್ಸಾರವಾಗಿದೆ. ಈ ಬಗ್ಗೆಯೂ ಸಹ ನಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ಈ ಕುರಿತು ತಮ್ಮ ನಿಲುವನ್ನು ನಾನು ಸ್ವಾಗತಿಸುತ್ತೇನೆ.

ಇನ್ನು ತಾವುಗಳು ಸುಮಾರು 2000 ಕೋಟಿ ರೂಪಾಯಿಗಳಷ್ಟು ಸಾಲವನ್ನು ಹಂಚುತ್ತೇವೆಂದು ಹೇಳಿದ್ದೀರಿ. ನೀವು ಅದನ್ನು ಹೇಗೆ ಹಂಚುತ್ತೀರಿ ಎಂದು ನಮಗೆ ತಿಳಿಯುತ್ತಿಲ್ಲ. ನೀವು ಸಹಕಾರ ಕ್ಷೇತ್ರವನ್ನು ಮುಳುಗಿಸುವುದಕ್ಕೆ ಹೊರಟಿದ್ದೀರಿ. ಅದು ಬಹುಶಃ ನಾಶವಾಗಿ ಹೋಗುತ್ತದೆ. ಪಂಚಾಯತ್ ಚುನಾವಣೆಗಳನ್ನು ಮಾಡಿದ್ದರಿಂದ ಕೇಂದ್ರ ಸರಕಾರದಿಂದ 100 ಕೋಟಿ ರೂಪಾಯಿಗಳನ್ನು ಪಡೆಯುವ ಬಗ್ಗೆ ಹೇಳಿದ್ದೀರಿ, ಅದು ಬಹಳ ಸಂತೋಷದ ವಿಚಾರ. ಆದರೆ ನೀವು ಮೊನ್ನೆ ತಂದಂಥ ಅಮೆಂಡ್‌ಮೆಂಟ್‌ನಿಂದ 100 ಕೋಟಿ ರೂಪಾಯಿಗಳನ್ನು ಸರಕಾರ ತುಂಬಬೇಕಾಗುತ್ತದೆ. ನೀವಿಲ್ಲದಿದ್ದರೆ ಮುಂದಿನ ಮುಖ್ಯಮಂತ್ರಿಯವರು ತುಂಬಬೇಕಾಗಬಹುದು. ನಮ್ಮ ಲ್ಯಾಂಡ್ ಬ್ಯಾಂಕ್‌ಗಳು ಸಂಪೂರ್ಣವಾಗಿ ಮುಚ್ಚುವಂಥ ಸ್ಥಿತಿ ಇದೆ. ಅಪೆಕ್ಸ್ ಬ್ಯಾಂಕ್‌ನಲ್ಲಿ ಸುಮಾರು 200-250 ಕೋಟಿ ರೂಪಾಯಿಗಳು ಬಾಕಿ ಇದೆ. ಇದೆಲ್ಲವನ್ನು ಸೇರಿಸಿ ಸುಮಾರು 1000 ಕೋಟಿ ರೂಪಾಯಿಗಳನ್ನು ನಬಾರ್ಡ್‌ಗೆ ಸರಕಾರದವರು ಕಟ್ಟಬೇಕಾಗುತ್ತದೆ. ಇದಕ್ಕೆ ನಾವು ನಮ್ಮ ಸರಕಾರದವರನ್ನು ಕೂಡ ಮೆಚ್ಚುವುದಿಲ್ಲ. ಶಾಸಕರುಗಳಿಗೆ ಆಡಳಿತ ಪಕ್ಷಕ್ಕೆ ಬಂದ ಕೂಡಲೇ ಏನೋ ಒಂದು ರೀತಿಯಲ್ಲಿ ಅನ್ನಿಸುತ್ತದೆ. ನಾವು ಇಲ್ಲಿ ಶಾಶ್ವತವಾಗಿ ಇರುತ್ತೇವೆ ಎಂದು ಅಂದುಕೊಂಡಿರುತ್ತಾರೆ. ಇದರ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ಇಲ್ಲವಾದಲ್ಲಿ ನಮಗೆ ಬಂದ ಪರಿಸ್ಥಿತಿ ನಿಮಗೂ ಬರುತ್ತದೆ ಎಂಬ ಹಿರಿಯರ ಮಾತು ಸತ್ಯವಾಗುತ್ತದೆ.

ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳು ಕರೆಯಿಸಿ ಇದನ್ನು ವಿಚಾರ ಮಾಡಬೇಕು. ಬೇಕಾದರೆ ಕರೆಯಿಸಿ ಚರ್ಚೆ ಮಾಡಿರಿ - ನಾನು ಎಲ್ಲ ವಿವರವನ್ನು ನಿಮ್ಮ ಮುಂದಿಡುತ್ತೇನೆ. ಇಲ್ಲಿ ಈಗ ನಾನು ಹೇಳುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಮಯದಲ್ಲಿ ಹೇಳುತ್ತೇನೆ. ಹೀಗೆ ನೀವು ಸಹಕಾರಿ ಸಂಘಗಳನ್ನು ಮುಳುಗಿಸುತ್ತಾ ಹೋದರೆ ಖಂಡಿತವಾಗಿ ನೀವು ಸಾಲ ಹಂಚಲಿಕ್ಕೆ ಆಗುವುದಿಲ್ಲ. ಇದು ಸುಳ್ಳು ಘೋಷಣೆಯಾಗುತ್ತದೆ ಮತ್ತು ರೈತರಿಗೆ ಬಿಸಿಲ್ಗುದುರೆ ತೋರಿಸಿದ ಹಾಗೆ ಆಗುತ್ತದೆ ಎಂಬುದನ್ನು ನಾನು ಹೇಳ ಬಯಸುತ್ತೇನೆ. ಇನ್ನು ಈ ಟೆಕ್ಸ್‌ಟೈಲ್ಸ್ ಬಗ್ಗೆ ನಾನು ಹೇಳಬೇಕೆಂದರೆ, ಟೆಕ್ಸ್‌ಟೈಲ್ ಉದ್ಯಮ ಸಂಪೂರ್ಣವಾಗಿ ಹಾಳಾಗುತ್ತಿದೆ. ನಮ್ಮ ಸಹಕಾರಿ ಗಿರಣಿಗಳು ಇವತ್ತು ಸಂಪೂರ್ಣವಾಗಿ ಮುಚ್ಚಿಹೋಗುತ್ತಿವೆ. ಅವಕ್ಕೆ ಏನಾದರೂ ಒಂದು ಯೋಜನೆಯನ್ನು ತಯಾರು ಮಾಡದೇ ಇದ್ದರೆ ರೈತರಿಗೆ ದೊಡ್ಡ ಅನ್ಯಾಯವಾಗುತ್ತದೆ. ಈ ಸಂದರ್ಭದಲ್ಲಿ ಸಹಕಾರಿ ಕ್ಷೇತ್ರಕ್ಕೂ, ಸಾರ್ವಜನಿಕ ಉದ್ದಿಮೆ ಕ್ಷೇತ್ರಕ್ಕೂ ಎಷ್ಟು ದುಡ್ಡು ಹಾಕಲಾಗಿದೆ ಅಂತ ಹೇಳಿದರೆ, ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳನ್ನು ನಾವು ಸಾರ್ವಜನಿಕ ಉದ್ದಿಮೆಗಳ ಮೇಲೆ ಹಾಕಿದ್ದೇವೆ, ಸಹಕಾರಿ ಕ್ಷೇತ್ರದಲ್ಲಿ ಕೇವಲ 150 ರಿಂದ 200 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದೇವೆ. ಅದರ ಮೇಲೆ ದೊಡ್ಡ ಬೊಬ್ಬಾಟ ಆಗಿಬಿಟ್ಟಿದೆ. ಎಲ್ಲ ಹಣವನ್ನು ಲೂಟಿ ಮಾಡಿ ತಿಂದುಹಾಕುತ್ತಾರೆ. ಎಲ್ಲ ದುಷ್ಟ ಸಹಕಾರಿಗಳು, ಆ ಸೊಸೈಟಿ ಮುಳುಗಿಸಿದ್ದಾರೆ, ಈ ಸೊಸೈಟಿ ಮುಳುಗಿಸಿದ್ದಾರೆ ಅಂತ ನಾವು ಮಾತನಾಡುತ್ತೇವೆ. ಮಾನ್ಯ ಅಧ್ಯಕ್ಷರೇ, ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳನ್ನು ಹಾಕಿದ ಈ ಸಾರ್ವಜನಿಕ ಉದ್ದಿಮೆಗಳ ಪೈಕಿ ನಾಲ್ಕೈದನ್ನು ಬಿಟ್ಟು ಎಲ್ಲ ಉದ್ದಿಮೆಗಳೂ ಖಂಡಿತವಾಗಿ ಕೂಡ ಮುಚ್ಚುವ ಸ್ಥಿತಿಯಲ್ಲಿವೆ. ಸುಮಾರು 500 ಕೋಟಿ ರೂಪಾಯಿಗಳು ಈ ಉದ್ದಿಮೆಗಳಿಂದ ಹಾಳಾಗುತ್ತಿದೆ. ಆ ಕಾರಣದಿಂದ ಇವತ್ತು ಸಹಕಾರಿ ಕ್ಷೇತ್ರವನ್ನು ಬಲಪಡಿಸಬೇಕು. ಅದರ ಮುಖಾಂತರ ರೈತರಿಗೆ ಒಳ್ಳೆಯದಾಗುತ್ತದೆ. ಸಹಕಾರ ಕ್ಷೇತ್ರಕ್ಕೆ ನೀವು ಸರ್ಕಾರದಿಂದ ಯಾವ ದುಡ್ಡನ್ನೂ ಕೊಡುವುದು ಬೇಕಾಗಿಲ್ಲ. ಎಪಿಎಂಸಿಯಿಂದ ಬರುವ ದುಡ್ಡನ್ನು-(ಅದು ನೇರವಾಗಿ ಸಹಕಾರ ಸಂಘಗಳಿಗೆ ಸಂಬಂಧಿಸಿದ ದುಡ್ಡು)-ನೇರವಾಗಿ ಸಹಕಾರಿ ಸಂಘಗಳಿಗೆ ಬಿಟ್ಟುಬಿಟ್ಟರೆ ಅವರೆಲ್ಲ ಸೇರಿ ಇವತ್ತು ಕೆಲಸಕಾರ್ಯ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಕೊನೆಯದಾಗಿ ಈಗ ನಮ್ಮ ಅರಣ್ಯ ಇಲಾಖೆಯ ಸಚಿವರು ಬಂದರು. ಈ ಅರಣ್ಯದ ಬಗ್ಗೆ ಇದರಲ್ಲೇನೂ ಹೇಳಿ ಇಲ್ಲ. ಅವರು ಒಬ್ಬ ಹಿರಿಯ ಸಚಿವರು, ದಕ್ಷರು, ಪ್ರಾಮಾಣಿಕರು, ಈ ಖಾತೆ ಅವರಿಗೆ ಸಿಕ್ಕಿದಾಗ ನಾನು ಬಹಳ ಸಂತೋಷಪಟ್ಟೆ. ನಾನೂ ಕೂಡ ಮೂರು ತಿಂಗಳು ಈ ಅರಣ್ಯ ಖಾತೆ ನೋಡಿದ್ದೆ. ಇದರಲ್ಲಿ ಅರಣ್ಯದ ಮೇಲೆ ಒತ್ತೇ ಕೊಟ್ಟಿಲ್ಲ. ಮಾನ್ಯ ಅಧ್ಯಕ್ಷರೇ, ಅರಣ್ಯದ ಬಗ್ಗೆ ಬರ್ಟನ್‌ರು ಒಂದು ಮಾತು ಹೇಳುತ್ತಾರೆ ಇದಕ್ಕಾಗಿ ಒಂದು ಐದು ನಿಮಿಷ ತೆಗೆದುಕೊಂಡರೆ ತಪ್ಪಾಗುವುದಿಲ್ಲ. ಈಗೇನಿಲ್ಲ, ಎಲ್ಲ ಹೇಳಿದರಲ್ಲ, 55 ಲೀಟರ್ ನೀರು ಕೊಡುತ್ತೇನೆ, ಕೆರೆ ಹೂಳು ತೆಗೆಯುತ್ತೇನೆ ಅಂತ ಮಳೇನೆ ಆಗದಿದ್ದರೆ ಏನು ಮಾಡುತ್ತೀರಿ ? ಎಲ್ಲರೂ ಉಸಿರು ಕಟ್ಟಿ ಸಾಯುವ ವಾತಾವರಣ ಆದರೆ ಏನು ಮಾಡುವುದು ? ಇವತ್ತು ಬೆಂಗಳೂರಿನಲ್ಲಿ ಹೀಗೆ ಅಡ್ಡಾಡಿ ಬಂದರೆ ಸಾಕು ಯಾರೂ ನನಗೆ ಕ್ಯಾನ್ಸರ್ ಆಗುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಹಾಗೆ ಪರಿಸರ ಹಾಳಾಗಿ ಹದಗೆಟ್ಟಿದೆ. ಆದರೂ ದುರ್ದೈವದಿಂದ ಅರಣ್ಯಕ್ಕೆ ಮಹತ್ವ ಕೊಟ್ಟಿಲ್ಲ ಪರಿಸರಕ್ಕೆ ಮಹತ್ವ ಕೊಟ್ಟಿಲ್ಲ.

ಬರ್ಟನ್ ಹೇಳುತ್ತಾರೆ : ಎಲ್ಲ ಜೀವಾವಾಸಗಳಲ್ಲಿ ಬಹಳ ಪ್ರಮುಖವಾದುದು ಅರಣ್ಯ. ಮಾನವನ ಅಳಿವು ಉಳಿವುಗಳನ್ನು ನಿರ್ಧರಿಸುವ ಶಕ್ತಿಯನ್ನು ಹೊಂದಿರುವ ಮಣ್ಣಿನ ರಚನೆಯನ್ನು ರೂಪಿಸುವ, ವಾಯುಗುಣವನ್ನು ಸೌಮ್ಯಗೊಳಿಸುವ, ಪ್ರವಾಹಗಳನ್ನು ನಿಯಂತ್ರಿಸುವ, ನೀರನ್ನು ಶೇಖರಿಸುವ ಇಳಿಜಾರುಗಳಲ್ಲಿ ಮಣ್ಣನ್ನು ಹಿಡಿದಿಟ್ಟು ಭೂ ಕೊರೆತವನ್ನು ತಡೆಗಟ್ಟುವ ವಾಯುಗೋಳದಲ್ಲಿ ಇಂಗಾಲಾಮ್ಲದ ಮೊತ್ತವನ್ನುನಿಯಂತ್ರಿಸಿ ಗ್ರೀನ್‌ಹೌಸ್‌ನ ದುಷ್ಪರಿಣಾಮಗಳನ್ನು ಹೋಗಲಾಡಿಸುವ, ಪ್ರಪಂಚದಲ್ಲಿ ಕಾಣಬರುವ ಲಕ್ಷೋಪಲಕ್ಷ ಜೀವ ಪ್ರಭೇದಗಳ ಅವಾಸಸ್ಥಾನವಾಗಿರುವ ಅರಣ್ಯಗಳು ಜೀವವಾಸಗಳ ಪಂಕ್ತಿಯಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಅಲಂಕರಿಸಿವೆ.

ಇದನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಅರಣ್ಯ ಪರಿಸರಕ್ಕೆ ಒತ್ತು ಕೊಡದೇ ಇದ್ದರೆ ಮುಂಬರುವ ದಿನಗಳಲ್ಲಿ ಈ ಬುಕ್ಕಿನಲ್ಲಿ ಹೇಳಿರುವ ಯಾವ ಯೋಜನೆಗಳೂ ಕೂಡ ಕಾರ್ಯಗತ ಆಗುವುದಿಲ್ಲ. ಕರೆಂಟು ಹೋಗುತ್ತದೆ, ನೀರು ಹೋಗುತ್ತದೆ, ನಿಮ್ಮ ಹೊಳೆ ಒಣಗುತ್ತದೆ. ಕೋಲಾರದಲ್ಲಿ 500,600 ಫೂಟು ಆಳಕ್ಕೆ ಹೋಗುತ್ತದೆ. ಇದ್ದ ಬಾವಿಯನ್ನೂ ಒಣಗಿಸಿರಿ. ಇವೆಲ್ಲ ಆದರೆ ಏನು ಮಾಡುವುದು ? ಇವಕ್ಕೆಲ್ಲ ಮೂಲ ಈ ಅರಣ್ಯ . ಮಾನ್ಯ ಅಧ್ಯಕ್ಷರೇ, ಸಣ್ಣವರಿದ್ದಾಗ ನಾವು ಜೋಕಾಲೆ ಆಡುತ್ತಿದ್ದೆವು. ನಮ್ಮ ಕಡೆ ಜೋಕಾಲೆ ಅನ್ನುತ್ತೇವೆ, ನಿಮ್ಮದು ಉಯ್ಯಾಲೆ. ಜೋಕಾಲೆ ಜೀಕೋಕೆ ಒಂದು ಗಿಡನೂ ಇಲ್ಲ. ಗಿಡಕ್ಕೆ ಕಟ್ಟಿ ಪಂಚಮಿ ದಿವಸ ನಾವು ಆಡುತ್ತಿದ್ದೆವು. ಈಗ ಎರಡು ಕಟ್ಟಿಗೆ ಒಯ್ದು ಮಕ್ಕಳು ಉಯ್ಯಾಲೆ ಆಡುತ್ತವೆ. ಇದು ಈಗ ಯಾವ ಹಳ್ಳಿಯಲ್ಲೂ ಇಲ್ಲ.

ಶ್ರೀ ಕೆ.ಎಚ್.ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಈಗ ಉಯ್ಯಾಲೆ ಆಡುವ ಹಾಗಾಗಿದೆ ! ಶ್ರಾವಣ ಮಾಸದಲ್ಲಿ ಇವರ ಕಡೆ ಏನು ಮಾಡುತ್ತಾರೆ ಅಂದರೆ ಈ ಕಡೆ ಗಂಡನು ನಿಂತಿರುತ್ತಾನೆ, ಆ ಕಡೆ ಹೆಂಡತಿ ನಿಂತಿರುತ್ತಾಳೆ. ಒಂದೇ ಉಯ್ಯಾಲೆ, ಇವ ಅತ್ತ ದೂಡುತ್ತಾನೆ, ಅವಳು ಇತ್ತ ಹೊಡೆಯುತ್ತಾಳೆ. ಮಾನ್ಯ ಸದಸ್ಯರು ಈಗ ಅದನ್ನು ನೆನಸಿಕೊಂಡಿದ್ದಾರೆ!

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ವಯಸ್ಸಾಗಿದ್ದರಿಂದ ಅವು ಬಾಯಲ್ಲಿ ಬರುತ್ತವೆ. ಹಾಗೆ ಅವರ ಬಾಯಿಗೆ ಈಗ ಬಂದಿದೆ. ಅದೆಲ್ಲ ಚಿತ್ರದುರ್ಗದಲ್ಲಿ ನಡೆದಿರಬಹುದು. ನಮ್ಮಲ್ಲಂತೂ ಇದನ್ನು ಮಾಡುವುದಿಲ್ಲ. ಹೆಣ್ಣು ಮಕ್ಕಳು ಗಂಡು ಮಕ್ಕಳು ಬೇರೆ ಬೇರೆ ಆಡುತ್ತಾರೆ.

ಶ್ರೀ ಕೆ.ಎಚ್.ರಂಗನಾಥ್ : ಮಾನ್ಯ ಅಧ್ಯಕ್ಷರೇ, ಇವರು ಪಾಟೀಲರು ಅಂದರೆ ಗೌಡರು. ಇವರದು ಶುರುವಾಗುವುದು ಎಲ್ಲಿಂದ ಅಂದರೆ ತುಂಗಭದ್ರಾ ನದಿಯ ಆಚೆ ದಂಡೆಯಿಂದ. ನಾನು ಈ ಕಡೆ ದಂಡೆಗೆ ಹುಟ್ಟಿದವನು. ಹರಿಹರ ಕೊನೇ ಬಾರ್ಡರು. ಆ ಕಡೆ ದಂಡೆ ಧಾರವಾಡ ಜಿಲ್ಲೆಯ ಹೊಸಪೇಟೆ, ಈಗ ಪಾಲಿಫೈಬರ್ ಇರುವುದು. ಆದರೂ ಇಲ್ಲ ಅಂತಾರೆ. ಅದನ್ನು ನೆನೆಸಿಕೊಂಡುಬಿಟ್ಟು ಇದೇ ಸಮಯದಲ್ಲಿ ಹೇಳೋಣ ಅಂತ ಮಾಡಿಕೊಂಡು ಬಂದಿದ್ದಾರೆ. ಏನು ಬೆಲ್ಲದರವರೇ, ನೀವು ಸಣ್ಣವರಿದ್ದಾಗ ಆಡುತ್ತಿದ್ದರೋ ಇಲ್ಲವೋ ?

ಶ್ರೀ ಚಂದ್ರಕಾಂತ ಬೆಲ್ಲದ: ನೀವೂ ಒಳ್ಳೇ ರಸಿಕರೇ ಇದ್ದೀರಿ ! ನಿಮಗೆಲ್ಲಾ ಅನುಭವವೂ ಇದೆ.

ಶ್ರೀ ಎಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ, ರಸಿಕನಲ್ಲದವನ ಮಾತು ಕಿವಿಯೊಳಗೆ ಎರಕವ ಹೊಯ್ದಂತೆ. ಸರ್ವಜ್ಞ;

(ಸಭೆಯಲ್ಲಿ ನಗು)

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬಹುಶಃ ಮಾನ್ಯ ಜೆ.ಎಚ್.ಪಟೇಲರ ನಂತರ ಇದ್ದದ್ದನ್ನು ಇದ್ದಹಾಗೆ ಮಾತನಾಡಿದವರು ಮಾನ್ಯ ರಂಗನಾಥ್ ರವರು. ಏಕೆಂದರೆ ಅವರು ಸಣ್ಣವರಿದ್ದಾಗ ಹಾಗೆ ಆಡಿದ್ದಾರೆ. ಸ್ವಾನುಭವದಿಂದ ಅದನ್ನು ಅವರು ಹೇಳಿದ್ದಾರೆ. ನಾನಂತೂ ಆಡಿಲ್ಲ. ಅಧ್ಯಕ್ಷರೇ, ನಾನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೂ ಮಾತನಾಡಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೊನೆಯದಾಗಿ ನಾನು ಕೇಳಿಕೊಳ್ಳುತ್ತೇನೆ. ದಯವಿಟ್ಟು ಉನ್ನತ ಶಿಕ್ಷಣದಲ್ಲಿ ಆ 15 ಪರ್ಸೆಂಟ್ ಅನುದಾನವನ್ನು ಏನು ತೆಗೆದಿದ್ದೀರಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ, ಅದಿಲ್ಲದಿದ್ದರೆ ಉತ್ತರ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಸಂಪೂರ್ಣ ಮುಳುಗಿ ಹೋಗುತ್ತದೆ. ಇಲ್ಲ ಸರ್ಕಾರ ಮಾಡುವುದಕ್ಕೆ ತಯಾರಾಗಿ. ನಮ್ಮಲ್ಲಿ ಸೈನ್ಸ್ ಕಾಲೇಜಿಲ್ಲ, ಅದನ್ನು ಮಾಡ್ರಿ. ತಾವೇನೂ ಹೇಳಿದಿರಿ, ಸಂಪನ್ಮೂಲವನ್ನು ಕ್ರೋಢೀಕರಿಸುತ್ತೇವೆ ಅಂತ, ಅದೇನೂ ಸಾಧ್ಯ ಆಗುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಮತ್ತು ಪರಿಸರ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಣಕ್ಕೆ ಹಣ ಎಲ್ಲಿಂದ ತರಬೇಕು ? ಎರಡನೆಯದು, ಉನ್ನತ ಶಿಕ್ಷಣವನ್ನು ಎಲ್ಲರಿಗೂ ಕೊಡುವಂತಹ ಅವಶ್ಯಕತೆ ಇದೆಯೇ ? ಮೂರನೆಯದು, ಉನ್ನತ ಶಿಕ್ಷಣವನ್ನು ಪಡೆದ ಪದವೀಧರರನ್ನು ಬಳಕೆ ಮಾಡುವವರು ಯಾರು ? ಇಂಡಸ್ಟ್ರೀಸ್, ವ್ಯಾಪಾರ ಉದ್ದಿಮೆಗಳು, ತಾನೇ ? ಅವರಿಂದ ಅವಕ್ಕೆ ಸಹಕಾರ ಬೇಡವೋ ? 35 ಪರ್ಸೆಂಟ್ ಬಂದಿರುವವನನ್ನೂ ಪಿಯುಸಿಗೆ ಸೇರಿಸಿಕೊಂಡು, ಫಸ್ಟ್‌ಗ್ರೇಡ್ ಕಾಲೇಜಿಗೆ ಇಂಜನಿಯರಿಂಗ್ ಕಾಲೇಜಿಗೆ ಕೊಟ್ಟು ಹಣ ಹೇಗೆ ಕೊಡುವುದು ? ನಾವು ಹಣ ಎಷ್ಟು ಮಹಾ ತೆಗೆದಿರುವುದು ? 15 ಪರ್ಸೆಂಟ್ ತೆಗೆದಿರುವುದಕ್ಕೆ ತಾವು ಅದನ್ನು ವಿಚಾರ ಮಾಡಬೇಕು. ನಾನೂ ನೀವೂ ಓದುವ ಕಾಲದಲ್ಲಿ ಉನ್ನತ ಶಿಕ್ಷಣ ಕಡಿಮೆ ಇತ್ತು. ಇವತ್ತು ತಾಲ್ಲೂಕ್ ಕೇಂದ್ರಗಳಲ್ಲಿ ಫಸ್ಟ್‌ಗ್ರೇಡ್ ಕಾಲೇಜುಗಳಿವೆ, ಹೋಬಳಿ ಮಟ್ಟದಲ್ಲಿ ಫಸ್ಟ್‌ಗ್ರೇಡ್ ಕಾಲೇಜಿವೆ. ಅದನ್ನು ತಾವು ಸ್ವಲ್ಪ ವಿಚಾರ ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಡಿರಿ ಅಂತ ನಾನು ಹೇಳಲಿಲ್ಲ. ಅದನ್ನು ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಕೊಟ್ಟಿದ್ದೇವೆ. ಇದ್ದಂತಹ ಶಾಲಾಕಾಲೇಜುಗಳನ್ನು ಮುಚ್ಚುವ ಸ್ಥಿತಿಗೆ ತರಬೇಡಿರಿ ಅಂತ ನಾನು ಹೇಳುತ್ತಿರುವುದು. ಇನ್ನು ವೃತ್ತಿ ಶಿಕ್ಷಣ ಶಾಲೆಗಳನ್ನು ತೆರೆಯಬೇಕು, ಅದರಲ್ಲಿ ಎರಡು ಮಾತಿಲ್ಲ.

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ಎಸ್.ಎಸ್. ಪಾಟೀಲರು ಹೇಳುವುದರಲ್ಲಿ ವಸ್ತುಸ್ಥಿತಿ ಇದೆ. ಉನ್ನತ ಶಿಕ್ಷಣಕ್ಕೆ ಕೊಡುವ ಅನುದಾನದಲ್ಲಿ ಶೇಕಡ 15ರಷ್ಟು ಕಡಿತ ಮಾಡಿದರೆ ತೊಂದರೆಯಾಗುವುದು ಉತ್ತರ ಕರ್ನಾಟಕ ಭಾಗಕ್ಕೆ ಮಾತ್ರ, ಬೇರೆ ಕಡೆ ಇಲ್ಲ; ಏಕೆಂದರೆ

ಬೇರೆ ಬೇರೆ ಭಾಗಗಳಲ್ಲಿ ಇವತ್ತು ಸರ್ಕಾರಿ ಕಾಲೇಜುಗಳಿವೆ ಅಲ್ಲದೆ ಸರ್ಕಾರದ ವತಿಯಿಂದ ಉನ್ನತ ಶಿಕ್ಷಣ ಸಂಸ್ಥೆಗಳೂ ನಡೆಯುತ್ತಿವೆ. ಉತ್ತರ ಕರ್ನಾಟಕದಲ್ಲಿ ಇರುವುದು ಹೆಚ್ಚು ಕಡಿಮೆ ಎಲ್ಲಾ ಖಾಸಗಿ ಸಂಸ್ಥೆಗಳೇ, ಮತ್ತು ಮಠಾಧೀಶರಿಂದ ಇವತ್ತು ಅನೇಕ ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ಅಲ್ಲಿ ಉನ್ನತ ಶಿಕ್ಷಣಕ್ಕೆ ಕೊಡತಕ್ಕ ಅನುದಾನದಲ್ಲಿ ನಾವು ಕಡಿತ ಮಾಡಿದರೆ ತೊಂದರೆಯಾಗುವುದು ಅವರಿಗೆ ಹೊರತು ಬೇರೆಯವರಿಗಲ್ಲ. ಮಾನ್ಯ ರಂಗನಾಥ್ ರವರ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಾಥಮಿಕ ಶಿಕ್ಷಣಕ್ಕೆ ನಾವು ಮಹತ್ವ ಕೊಡಬೇಕು. ಆದರೆ ಅಷ್ಟೇ ಮಹತ್ವವನ್ನು ನಾವು ಇದಕ್ಕೂ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಆ ಸಂಸ್ಥೆಗಳನ್ನು ನಡೆಸುವುದಕ್ಕೇ ಸಾಧ್ಯವಿಲ್ಲ. ಬೇಕಾದರೆ ಸರ್ಕಾರದಿಂದ ಇಂತಹ ಕಾಲೇಜುಗಳು ಹೆಚ್ಚಿಗೆ ಪ್ರಾರಂಭವಾಗಲಿ. ನಮ್ಮ ಭಾಗದಲ್ಲಿ ಒಂದು ಕಡೆ ಸರ್ಕಾರಿ ಕಾಲೇಜೇ ಇಲ್ಲ. ಆ ದೃಷ್ಟಿಯಿಂದ ಉನ್ನತ ಶಿಕ್ಷಣಕ್ಕೆ ಕೊಡತಕ್ಕ ಅನುದಾನದಲ್ಲಿ 15 ಪರ್ಸೆಂಟ್ ಕಡಿತವನ್ನು ಏನು ಮಾಡುತ್ತಿದ್ದಾರೆ ಅದು ತಪ್ಪು, ಅದನ್ನು ಮುಂದುವರೆಸಬೇಕು ಅನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಸ್.ಎಸ್.ಪಾಟೀಲ್: ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೆರಡು ವಿಚಾರಗಳ ಬಗ್ಗೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ನಾನು ಈ ಸಹಕಾರಿ ಸಂಘಗಳ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮಾತನಾಡುತ್ತೇನೆ. ಈಗ ನಾನು ಎರಡು ವಿಚಾರಗಳ ಬಗ್ಗೆ ವಿನಂತಿ ಮಾಡಿಕೊಳ್ಳುವೆನು, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರ ಕೊಡುವಾಗ ಉಲ್ಲೇಖಿಸಬೇಕು. ಈಗೇನು ಹೆಣ್ಣುಮಕ್ಕಳಿಗೆ ತಾವು ಪುಕ್ಕಟೆ ಶಿಕ್ಷಣ ಕೊಡುವ ಬಗ್ಗೆ ಹೇಳಿದ್ದೀರಿ, ದಯವಿಟ್ಟು ಖಾಸಗಿ ಶಾಲೆಗಳಲ್ಲಿ ಓದುವ ಹೆಣ್ಣುಮಕ್ಕಳೂ ಅವೂ ಹೆಣ್ಣುಮಕ್ಕಳೇ, ಬಹುಶಃ ಆ ರೀತಿಯಿಂದ 80 ಪರ್ಸೆಂಟ್ ಮಕ್ಕಳು ವಂಚಿತರಾಗುತ್ತಾರೆ. ಹಾಗೆ ಸುಮ್ಮನೆ ಘೋಷಣೆ ಮಾಡಿದಂತಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಹೆಣ್ಣು ಮಕ್ಕಳಿಗೂ ಆ ಒಂದು ಅವಕಾಶವನ್ನು ಕೊಡಿ ಅಥವಾ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಬಂದ್ ಮಾಡಿ ಎಲ್ಲವನ್ನೂ ಸರ್ಕಾರವೇ ಮಾಡಿಕೊಳ್ಳಿರಿ. ಅಲ್ಲಿಗೆ ಮಕ್ಕಳನ್ನು ಕಳಿಸಬೇಡಿರಿ ಎಂದು ಹೇಳಿ ಬಡವರ ಮಕ್ಕಳು ಅಲ್ಲೂ ಇದ್ದಾರೆ.

10. 10 ಎ. ಎಂ.

ಆದ್ದರಿಂದ 15 ಪರ್ಸೆಂಟ್ ಕಡಿತ ಮಾಡಿರುವ ಪ್ರಪೋಸಲ್‌ಸನ್ನು ಜಾರಿಗೆ ತರಬೇಡಿ. ಆಮೇಲೆ ಕೆರೆಗಳಲ್ಲಿ ತುಂಬಿರುವ ಹೂಳು ತೆಗೆಯುವುದು, ಇದನ್ನೆಲ್ಲ ಮಾಡುತ್ತೀರಲ್ಲ, ನಮ್ಮ ಕಡೆ ಕೆರೆಗಳೇ ಬಹಳ ಕಡಿಮೆ ಇವೆ. ಆ ದುಡ್ಡನ್ನೆಲ್ಲಾ ತಂದು ಇತ್ತ ಕಡೆಗೆ ಹಾಕಬೇಡಿ. ಅಲ್ಲಿ ಹೊಸ ಕೆರೆಗಳನ್ನು ಮಾಡಿ, ನಾವು ಬೇಡ ಎನ್ನುವುದಿಲ್ಲ. ಅಲ್ಲೂ ಕೂಡ ಕೆರೆಗಳನ್ನು ತೆಗೆಯಿರಿ, ನಾವು ಬೇಡ ಎಂದು ಹೇಳುವುದಿಲ್ಲ. ಹೊಸ ಕೆರೆಗಳನ್ನು ಮಾಡಿ. ಹಿಂದಿನ ಮಹಾರಾಜರುಗಳು ಮಾಡಿದ ಆ ಕೆಲಸವನ್ನು ನಾವು ಇವತ್ತು ನೆನಸಿಕೊಳ್ಳಬೇಕು. ಅವರನ್ನು ನೆನೆಸಿಕೊಂಡರೆ ನಮಗೆ ದೇವರು ಒಳ್ಳೆಯದನ್ನು ಮಾಡುತ್ತಾನೆ. ಅದೇ ರೀತಿ ಉತ್ತರ ಕರ್ನಾಟಕದಲ್ಲಿ ಕೆರೆಗಳೇ ಇಲ್ಲ. ಯಾವುದೋ ಕಾರಣದಿಂದ ಅವರು ವಂಚಿತರಾಗಿದ್ದಾರೆ. ಅಲ್ಲಿ ಹೊಸ ಕೆರೆಗಳನ್ನು ಮಾಡಿ ಆ ದುಡ್ಡನ್ನು ಸಮನಾಗಿ ಹಂಚಿ. ಸಾಲ ರಹಿತವಾದ ರಾಜ್ಯವನ್ನು ಕಟ್ಟಬೇಕೆಂದು ಹೇಳುತ್ತೀದ್ದೀರಿ, ಅದನ್ನು ಹೇಗೆ ಕಟ್ಟುತ್ತೀರಿ ? ಅದನ್ನು ಕೂಡ ತಮ್ಮ ಉತ್ತರದಲ್ಲಿ ಹೇಳಬೇಕು. 15 ಕೋಟಿ ಇದೆಲ್ಲಾ ಲೆಕ್ಕ ಹಾಕಿದರೆ ಬಹುಶಃ ನೂರಾರು ವರ್ಷಗಳಾದರೂ ಸಾಲದಿಂದ ಈ ರಾಜ್ಯ ಮುಕ್ತಿಯಾಗುವುದಿಲ್ಲ ಎನ್ನುವ ಮಟ್ಟಕ್ಕೆ ಬಂದಿದೆ. ಕೊರತೆ ಬಜೆಟ್ ಇದೆಯಲ್ಲ ಅದನ್ನು

ಸರಿಯಾಗಿಸಲು, ಗಣಿ ಕಲ್ಲಿನಿಂದ 300 ಕೋಟಿ ರೂಪಾಯಿಗಳ ಆದಾಯ ಪಡೆಯಬಹುದು, ನಮ್ಮ ಧಾರವಾಡದಲ್ಲಿ 40-50 ಲಕ್ಷ ರೂಪಾಯಿಗಳು ಬರುತ್ತದೆ. ಮನಸ್ಸು ಮಾಡಿದರೆ 6 ಕೋಟಿ ರೂಪಾಯಿಗಳನ್ನು ನಮ್ಮ ಧಾರವಾಡ ಜಿಲ್ಲೆಯಲ್ಲೇ ಪಡೆಯಬಹುದು. ಈ ರೀತಿ ಸೋರಿ ಹೋಗುವಿಕೆಯನ್ನು ನಿಲ್ಲಿಸಿದರೆ ಬಹುಶಃ 500-600 ಕೋಟಿ ರೂಪಾಯಿಗಳ ಉತ್ಪನ್ನವನ್ನು ಜಾಸ್ತಿ ಮಾಡಬಹುದು. ಆ ದಿಶೆಯಲ್ಲಿ ಕೂಡ ತಾವು ಇವತ್ತು ಪ್ರಯತ್ನವನ್ನು ಮಾಡಬೇಕು ಎಂದು ವಿನಂತಿ ಮಾಡಿಕೊಂಡು ಮುಂದೆ ನಮಗೆ ತಾವು ಹೆಚ್ಚು ಅವಕಾಶ ಕೊಡಬೇಕೆಂದು ಹೇಳಿ, ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮತ್ತೊಮ್ಮೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ. ಆರ್.ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಹೊಸ ಸರ್ಕಾರದ ಈ ಆಯವ್ಯಯದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರುವ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ಕೊಟ್ಟಿರುವ 30 ನಿಮಿಷಗಳ ಕಾಲಾವಧಿಯಲ್ಲಿ ಆದಷ್ಟು ನೇರವಾಗಿ ಕೆಲವು ವಿಷಯಗಳನ್ನು ನಾನು ಸರ್ಕಾರಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ನನ್ನ ಪರವಾಗಿ 30 ನಿಮಿಷಗಳಲ್ಲಿ ತಾವು ತಮ್ಮ ಭಾಷಣವನ್ನು ಮುಗಿಸಿದರೆ ನಿಮಗೆ ಅಭಿನಂದನೆಗಳು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಕೆಲವು ಸಲಹೆಗಳನ್ನು ಸರ್ಕಾರ ಕೇಳುವುದಾದಲ್ಲಿ, ಕೇಳುತ್ತದೆ ಎನ್ನುವ ಒಂದು ವಿಶ್ವಾಸದಿಂದ ನಾನು ಅತ್ಯಂತ ಪ್ರಾಮಾಣಿಕವಾಗಿ ನನ್ನ ಸಲಹೆಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಅದಕ್ಕೆ ಮುನ್ನ ಈ ಸರ್ಕಾರ ಕಳೆದ ಆರು ತಿಂಗಳುಗಳಲ್ಲಿ ಮಾಡಿರುವ ಕೆಲಸಗಳ ಬಗ್ಗೆ, ಹೋಗುತ್ತಿರುವ ದಾಟಿಯ ಬಗ್ಗೆ ಹೇಳದೆ ಹೋದರೆ ನಾನು ಎಲ್ಲೋ ಒಂದು ಕಡೆ ಎಡವುತ್ತೇನೆ ಎನ್ನುವ ಭಾವನೆಯಿಂದ ಒಂದೆರಡು ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನೇರವಾಗಿ ತಾವು ಏನು ಸುಮಾರು 300 ಕೋಟಿ ರೂಪಾಯಿಗಳ ಒಂದು ಕೊರತಾ ಬಜೆಟ್‌ನ್ನು ಮಂಡನೆ ಮಾಡಿ 360 ಕೋಟಿ ರೂಪಾಯಿಗಳ ಅಡಿಷನ್ ರಿಸೋರ್ಸ್‌ನ್ನು ಐಎಂಎಲ್, ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಮತ್ತು ಇತರೆ ಕೆಲವು ಇಲಾಖೆಗಳಿಂದ ಸಂಗ್ರಹ ಮಾಡಬೇಕು ಎನ್ನುವ ಒಂದು ಪ್ರಯತ್ನವನ್ನು ಮಾಡಿದ್ದೀರಿ, ಇದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವ ಬಗ್ಗೆ ನನ್ನದೇ ಆದ ಕೆಲವು ಸಂಶಯಗಳಿವೆ. ಆದರೆ ಒಂದು, ಇವತ್ತು ನಾನು ಈ ಹಿಂದೆ ಈ ಸಭೆಯಲ್ಲಿ ಮಾತನಾಡುವ ಸಂದರ್ಭದಲ್ಲೂ ಸಹಿತ ಹೇಳಿದ್ದೇನೆ. ಈ ಸರ್ಕಾರದಲ್ಲಿ ಅನುಭವಿ ರಾಜಕಾರಣಿಗಳು, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ರಾಜಕೀಯ ಮತ್ತು ಹಣಕಾಸಿನ ಸಾಮಾಜಿಕ ಪರಿಸ್ಥಿತಿಯನ್ನು ಅರಿತಿರತಕ್ಕಂಥವರಿದ್ದಾರೆ. ಅದರ ಜೊತೆಗೆ ಮುಂದಿನ ಸಾಲಿನಲ್ಲಿ ಕುಳಿತುಕೊಂಡಿರುವ ಮಂತ್ರಿಮಂಡಲದ ಎಲ್ಲಾ ಅವರ ಸಹೋದ್ಯೋಗಿಗಳು ಸಹಿತ ಸಾಕಷ್ಟು ಅನುಭವ ಇರತಕ್ಕಂಥ ತಮ್ಮ ತಮ್ಮ ಇಲಾಖೆಗಳಲ್ಲಿ ಪರಿಣಿತಿಯನ್ನು ಪಡೆದಿರತಕ್ಕಂಥ ಒಂದು ಸಾಮೂಹಿಕ ನಾಯಕತ್ವ ಇವತ್ತು ರಾಜ್ಯದಲ್ಲಿದೆ. ಆದರೆ ಈಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಆಯವ್ಯಯದಲ್ಲಿ ಕೆಲವು ಒಳ್ಳೆಯ ಅಂಶಗಳಿವೆ. ಈ ಆಯವ್ಯಯವನ್ನು ಸಾರಾಸಗಟಾಗಿ ನಾವು ವಿರೋಧ ಪಕ್ಷದಲ್ಲಿದ್ದುಕೊಂಡು ತಿರಸ್ಕಾರ ಮಾಡಬೇಕು ಎನ್ನುವ ಮಾತನ್ನು ಸಹಿತ ನಾನು ಹೇಳುವುದಕ್ಕೆ

ಹೋಗುವುದಿಲ್ಲ. ಈಗ ಉದಾಹರಣೆಗೆ ಈ ಸರ್ಕಾರದಲ್ಲಿ ಇವತ್ತು ಈ ಒಂದು ಆಯವ್ಯಯದಲ್ಲಿ ಕೆಲವು ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯಮಂತ್ರಿಯವರು ಹಾಕಿಕೊಂಡಿದ್ದಾರೆ. ಅದರ ಬಗ್ಗೆ ನಾನು ವಿರೋಧ ಮಾಡುವುದಿಲ್ಲ. ಬದಲಾಗಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಮಾಹಿತಿ ತಂತ್ರಜ್ಞಾನವನ್ನು ಬಳಸುವ ದೃಷ್ಟಿಯಿಂದಾಗಿ ಶಾಲೆಗಳಲ್ಲಿ ಇದನ್ನು ತೆರೆಯಬೇಕು ಎಂದು ಹೇಳಿ ಹೊರಟಿದ್ದೀರಿ, ಇದು ಒಳ್ಳೆಯ ಕೆಲಸ. ಅದೇ ರೀತಿಯಲ್ಲಿ ಹೊರನಾಡ ಕನ್ನಡಿಗರ ಸಮಸ್ಯೆಗಳನ್ನು ಅರಿಯುಲಿಕ್ಕೆ ಒಂದು ಸಮಿತಿಯನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಅದು ಸಹಿತ ಒಳ್ಳೆಯ ಕೆಲಸ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಹೊರ ನಾಡಿನಲ್ಲಿರತಕ್ಕ ಹೊರರಾಷ್ಟ್ರಗಳಲ್ಲಿರತಕ್ಕಂಥ ಕನ್ನಡಿಗರು, ನಮಗಿಂತ ಹೆಚ್ಚಾಗಿ ಈ ನಾಡಿನ ಬಗ್ಗೆ, ನುಡಿಯ ಬಗ್ಗೆ ಮತ್ತು ದೇಶದ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ನಾನು ಬರ್ಲಿನ್‌ಗೆ ಹೋದಂಥ ಸಂದರ್ಭದಲ್ಲಿ ಅವರು ತೋರಿಸಿದಂಥ ಅಭಿಮಾನ ಮೆಚ್ಚತಕ್ಕದ್ದು ತಾವು ಕೂಡ ಒಂದು ಸಾರಿ ಬರ್ಲಿನ್‌ಗೆ ಹೋಗಿ ಬರಬೇಕು. ನಿಜವಾಗಿಯೂ ಕೂಡ ಕನ್ನಡಿಗರಾದ ಶ್ರೀಮಾನ್ ದಾಸಪ್ಪನವರ ವಾಹನ ಚಾಲಕರು ಅಲ್ಲಿಯ ಕನ್ನಡ ಸಂಘದ ಅಧ್ಯಕ್ಷರಾಗಿದ್ದರು. ಇತ್ತೀಚೆಗೆ ಅವರು ತೀರಿಕೊಂಡರು. ಅವರು ತೋರಿಸುವ ಅಭಿಮಾನವನ್ನು ನೋಡಿದಾಗ ನಾವು ಬಹಳ ಸಣ್ಣವರು ಎನ್ನುವ ಮಾತು ಬರುತ್ತದೆ. ಅದು ಹೊರ ರಾಷ್ಟ್ರಗಳಲ್ಲಿರುವ ಕನ್ನಡಿಗರ ಅಭಿಮಾನವಾದರೆ, ಹೊರ ರಾಜ್ಯಗಳಲ್ಲಿರುವವರಿಗೆ ಅವರದೇ ಆದ ಕೆಲವು ಸಮಸ್ಯೆಗಳಿವೆ. ಅವುಗಳನ್ನು ಅರಿತು 4 ತಿಂಗಳಲ್ಲಿ ವರದಿಯನ್ನು ತರಿಸಿ ಕಾರ್ಯಗತ ಮಾಡತಕ್ಕಂಥ ಕೆಲಸವನ್ನು ಮಾಡಿರತಕ್ಕಂಥಾದ್ದು ಸಂತೋಷದ ವಿಚಾರ, ಇದು ಎರಡನೆಯದು. ಇನ್ನು ಮೂರನೆಯದಾಗಿ ಸ್ತ್ರೀಶಕ್ತಿ ಎನ್ನುವ ಕಾರ್ಯಕ್ರಮದ ಬಗ್ಗೆ 50 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟು ಏನು ಇವತ್ತು ಆಗಲೇ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು, ಅನೇಕ ಸಂಘಸಂಸ್ಥೆಗಳು ವಾಲೆಂಟರಿ ಎನ್‌ಜಿಓಗಳು, ನಾನ್ ಗೌರ್ನಮೆಂಟಲ್ ಆರ್ಗನೈಜೇಷನ್‌ಗಳು ಈ ಪ್ರಯತ್ನವನ್ನು ಮಾಡುತ್ತಿದ್ದಾರೆ. ಬಹುಶಃ ಅವುಗಳನ್ನು ಕೋಆರ್ಡಿನೇಟ್ ಮಾಡಿ 50 ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿ ತಾವೇನು ಹೊರಟಿದ್ದೀರಿ, ಇದು ಸಹಾ ನಾವು ಮೆಚ್ಚತಕ್ಕ ವಿಚಾರವೇ ಆಗಿದೆ. ಮತ್ತೆ ಅದೇ ರೀತಿ ಈ ಹೆಣ್ಣುಮಕ್ಕಳ ಹೆರಿಗೆ ವಿಚಾರದಲ್ಲಿ ನಾನು ಅದನ್ನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ಇವತ್ತು ಹೆರಿಗೆ ವಿಚಾರದಲ್ಲಿ ತಾವು ತೆಗೆದುಕೊಂಡಿರುವ ತೀರ್ಮಾನ ಏನು ಇದೆ. ನಮ್ಮ ಸಮಾಜದಲ್ಲಿ ನೂರಕ್ಕೆ ಐವತ್ತರಷ್ಟು ಹೆಣ್ಣುಮಕ್ಕಳು ಇರುವುದನ್ನು ಅರಿತು ಮತ್ತು ಈ ಸಂದರ್ಭದಲ್ಲೇ ಬರತಕ್ಕಂಥ ರೋಗಿಗಳಿಗೆ ಚಿಕಿತ್ಸೆಯನ್ನು ಮಾಡುವ ದೃಷ್ಟಿಯಿಂದಾಗಿ ತಾವು ಇನ್ನೊಂದು ಮಾಡಿದ್ದೀರಿ, ಡಾ॥ ಸುದರ್ಶನ್ ಮತ್ತೆ ಅತ್ಯಂತ ನುರಿತ ತಜ್ಞರ ಒಂದು ಸಮಿತಿಯನ್ನು ತಾವು ರಚನೆ ಮಾಡಿದ್ದೀರಿ. ಆ ಸಮಿತಿಯಿಂದ ಎಲ್ಲಾ ಶಾಸಕರುಗಳಿಗೂ ಸಹಿತ ಪತ್ರವನ್ನು ಬರೆದಿದ್ದಾರೆ. ತಮ್ಮ ಅನುಭವವನ್ನು ಬಂದು ಇಲ್ಲಿ ಹೇಳಬೇಕು ಎಂದು ಹೇಳಿ. ನಾನು ಆ ಸಮಿತಿಯ ಮುಂದೆ ಹೋಗಿ ನನ್ನ ಕೆಲವು ಅಭಿಪ್ರಾಯಗಳನ್ನು ಕೊಟ್ಟಿದ್ದೇನೆ. ನಾನ್ ಗೌರ್ನಮೆಂಟಲ್ ಅರ್ಗನೈಜೇಷನ್ ಗ್ರಾಮೀಣ ಪ್ರದೇಶದಲ್ಲಿ ಹೆಲ್ತ್ ಡೆಲಿವರಿ ಸಿಸ್ಟಂನ್ನು ಇಂಪ್ರೂವ್ ಮಾಡಲಿಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ನಾನು ಸಲಹೆಗಳನ್ನು ಕೊಡುವುದರ ಜೊತೆಗೆ ಈಗ ನಾನು ಸ್ವಲ್ಪ ವಿರೋಧ ಪಕ್ಷದಲ್ಲಿರುವುದರಿಂದಾಗಿ ಸ್ವಲ್ಪ ಸಮಯ ಹೆಚ್ಚಿಗೆ ಇರುವುದರಿಂದ ನನ್ನ ಕ್ಷೇತ್ರದಲ್ಲಿ ಒಂದು ಆದರ್ಶವಾಗಿರತಕ್ಕ ಆರೋಗ್ಯ ಕಾರ್ಯಕ್ರಮವನ್ನು ಹೆಣ್ಣುಮಕ್ಕಳಿಗೋಸ್ಕರ ವಿಶೇಷವಾಗಿ ಹಾಕಿಕೊಂಡಿದ್ದೇನೆ. ಆ ದೃಷ್ಟಿಯಲ್ಲಿ ಇದೊಂದು ಒಳ್ಳೆಯ ಕೆಲಸ. 7ನೇ ತರಗತಿಯವರೆಗೂ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ಕೊಡುವ ಕಾರ್ಯಕ್ರಮ ಏನಿದೆ,

ಆ ಕಾರ್ಯಕ್ರಮವನ್ನು ಸಹಿತ ತಾವು ವಿಸ್ತರಣೆ ಮಾಡಿರುವುದನ್ನು ನಾನು ಒಪ್ಪುತ್ತೇನೆ. ಚುನಾವಣಾ ಪ್ರಣಾಳಿಕೆಯಲ್ಲಿ ತಾವು ಹೇಳಿದ್ದೀರಿ, ಹೆಣ್ಣುಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ಕೊಡುತ್ತೇವೆಂದು. ಆ ದೃಷ್ಟಿಯಿಂದಾಗಿ ಪಿಯುಸಿವರೆಗೂ ಸಹಿತ ನೀವು ವಿಸ್ತರಣೆ ಮಾಡಿದ್ದೀರಿ. ಅದನ್ನು ಸಹಿತ ನಾನು ಒಪ್ಪುತ್ತೇನೆ. ಈಗ ಎರಡು ಲಕ್ಷ ಮನೆಗಳನ್ನು 12 ತಿಂಗಳಲ್ಲಿಯೇ ಕಟ್ಟುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಇದನ್ನು ತಾವು ನಿಜವಾಗಿಯೂ ಸಹಿತ ಮಾಡಿದರೆ ಇದು ಒಂದು ಅದ್ಭುತ ಪವಾಡ. ಏಕೆಂದರೆ 12 ತಿಂಗಳ ಒಳಗಡೆ ಅಂದರೆ ಒಂದು ವರ್ಷದಲ್ಲಿ 2 ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದಿದ್ದಾರೆ. ನಿಜವಾಗಿಯೂ ನಮ್ಮ ರಾಜ್ಯದಲ್ಲಿ ಬಹಳ ಬಡವರಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನೊಂದು ಸಲಹೆಯನ್ನು ಕೊಡುತ್ತೇನೆ. ನಮ್ಮ ಸರ್ಕಾರವಿದ್ದಾಗ ರೆವಿನ್ಯೂ ಮಿನಿಸ್ಟರ್ ಆಗಿದ್ದ ಮಾನ್ಯ ಸೋಮಶೇಖರ್‌ರವರು ಆ ದೃಷ್ಟಿಯಲ್ಲಿ ಪ್ರಯತ್ನವನ್ನು ಮಾಡಿದರು. ಈ ಸರ್ಕಾರಿ ಜಮೀನುಗಳಲ್ಲಿ ಯಾರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ, ಅಥವಾ ಖಾಸಗಿ ಜಮೀನುಗಳಲ್ಲಿ ಯಾರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ, ಯಾವುದಾದರೂ ಒಂದು ಆಜ್ಞೆಯ ಮೂಲಕವಾಗಿ ಅನುಕೂಲ ಮಾಡಿಕೊಡಬೇಕೆಂದು ಆ ಬಗ್ಗೆ ಅವರು ಪ್ರಯತ್ನವನ್ನು ಮಾಡಿದರು. ಕಂಪ್ಯೂಟರೀಕರಣದ ಬಗ್ಗೆ ಮಾಡಿರುವ ಪ್ರಯತ್ನ ಅದನ್ನು ಮಾನ್ಯ ಕಂದಾಯ ಸಚಿವರ ಮೂಲಕವಾಗಿ ಮಾಡಲಿ. ಅವರಿಗೆಲ್ಲಾ ಹಕ್ಕುಪತ್ರಗಳನ್ನು ಕೊಡಬೇಕಾಗಿದೆ, ಈ ರೀತಿ ಅನೇಕ ಸಮಸ್ಯೆಗಳಿವೆ. ಹಕ್ಕುಪತ್ರಗಳನ್ನು ಕೊಡುವುದರ ಜೊತೆಗೆ ಎರಡು ಲಕ್ಷ ಮನೆಗಳನ್ನು ಕಟ್ಟುವ ವಿಚಾರ ಏನು ಇದೆ, ಇದು ಒಪ್ಪತಕ್ಕಂಥಾದ್ದು. ಮತ್ತೆ ಶಾಸಕರ ನಿಧಿಯ ಬಗ್ಗೆ ತಾವೇನು ಪ್ರಸ್ತಾಪ ಆ ವಿಚಾರದಲ್ಲಿ ನಾವು ಪ್ರಯತ್ನ ಮಾಡಿದ್ದೆವು, ನಮ್ಮ ಸರ್ಕಾರದಲ್ಲಿ ಅದು ಆಗಿರಲಿಲ್ಲ. ತಾವು ಮಾಡಬೇಕೆಂದು ಹೇಳಿ ಹೊರಟಿದ್ದೀರಿ. ಇದು ನಿಜವಾಗಿಯೂ ಸಹಿತ ಆಗಬೇಕಾಗಿರುವ ಕೆಲಸ. ಶಾಸಕರು ಅಂದಮೇಲೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿ ಇದೆಲ್ಲಾ ಬಂದಮೇಲೆ ನಮಗೋಸ್ಕರ ಎಂದು ಹೇಳಿ ಡಿಸ್ಕ್ರೀಷನರಿ ಫಂಡ್ ಎಲ್ಲೂ ಸಹಿತ ಇಲ್ಲ. ಆದರೆ ಅದರ ಬಗ್ಗೆ ತಾವು ಬಜೆಟ್‌ನಲ್ಲಿ ಅವಕಾಶಗಳನ್ನು ಮಾಡಿಕೊಂಡಿಲ್ಲ. ಅದಕ್ಕೋಸ್ಕರ ನಾನೇನು ಹೇಳಿದೆ, ನಿಮ್ಮ ಖೋತಾ 360 ಕೋಟಿ ರೂಪಾಯಿ ಅಲ್ಲ. ನೀವು ಇದಕ್ಕೆ 50 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಹಿತ ಸ್ವಲ್ಪ ಖೋತಾ ಬಜೆಟ್ ಜಾಸ್ತಿಯಾಗುತ್ತದೆ. ಅಡಿಷನಲ್ ರಿಸೋರ್ಸ್‌ಸ್ ಬಗ್ಗೆ ತಾವೇನು ಪ್ರಯತ್ನವನ್ನು ಮಾಡಬೇಕೆಂದು ಹೇಳಿ ಹೊರಟಿದ್ದೀರಿ ಅದಕ್ಕೆ ನಾನು ಒಳ್ಳೆಯದನ್ನು ಕೋರಿ ಶಾಸಕರಿಗೆ ಕೊಡುವ ನಿಧಿಯ ಬಗೆಗೆ ತಾವು ವಿಚಾರವನ್ನು ಮಾಡಬೇಕು. ಅದನ್ನು ಈ ವರ್ಷ ಪ್ರಾರಂಭ ಮಾಡಬೇಕು ಎಂದು ಹೇಳುತ್ತೇನೆ. ಇಲ್ಲಿರುವ ಬಹುತೇಕ ಶಾಸಕರ ಅಭಿಪ್ರಾಯವೂ ಅದೇ ಆಗಿದೆ. ಆ ದೃಷ್ಟಿಯಿಂದ ತಾವು ವಿಚಾರ ಮಾಡಿರುವುದು ಸ್ವಾಗತಾರ್ಹವಾಗಿರುವ ವಿಚಾರ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ವ್ಯಾಟ್ ಪದ್ಧತಿಯನ್ನು ತಾವೇನು ಇಂಟ್ರಡ್ಯೂಸ್ ಮಾಡುವುದಕ್ಕೆ ಹೋಗಿದ್ದೀರಿ, ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯ ಸರ್ಕಾರಗಳವರನ್ನೂ ಕರೆಸಿ ಒಂದು ಸಮಾನವಾದ ತೆರಿಗೆಯನ್ನು ರೂಪಿಸುವುದಕ್ಕೆ ಮಾಡಿರತಕ್ಕಂಥದ್ದನ್ನೂ ಸಹಿತ ಕರ್ನಾಟಕದಲ್ಲಿ ಅಳವಡಿಸಿಕೊಂಡು ಪದ್ಧತಿಯನ್ನು ಅಳವಡಿಸಿರುವುದು ಸರ್ಕಾರ ಈ ನಿಟ್ಟಿನಲ್ಲಿ ಮಾಡಿರುವ ಒಂದು ಒಳ್ಳೆಯ ಕೆಲಸ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಿದ್ದೇನೆ. these are all positive points. ಅದೇ ಸಂದರ್ಭದಲ್ಲಿ ಈ ಸರ್ಕಾರ ತಮ್ಮ ಸರ್ಕಾರದ ಆದ್ಯತೆಗಳನ್ನು ಸಹಿತ ಇದರಲ್ಲಿ ಹೇಳಿದ್ದಾರೆ. ಆದ್ಯತೆಗಳ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಇದರಲ್ಲಿ 5 ರಿಂದ 14ನೇ ಪ್ಯಾರಾದವರೆಗೂ ಹೇಳಿರುವ ಆದ್ಯತೆಗಳು

ಮತ್ತೆ ಬೆಂಗಳೂರನ್ನು ನಾನು ಬಿಹಾರ್ ಆಗಲಿಕ್ಕೆ ಪಾಟ್ನಾ ಆಗಲಿಕ್ಕೆ ಬಿಡುವುದಿಲ್ಲ ಎಂದು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕೊಡುವುದಕ್ಕೆ ಬಯಸುತ್ತೇನೆ. ದಯವಿಟ್ಟು ಹೊಸ ಕಾನೂನುಗಳ ಅವಶ್ಯಕತೆ ಇಲ್ಲ. ಅಧಿಕಾರಿಗಳು ಸಾಮಾನ್ಯವಾಗಿ ಎಲ್ಲ ಸಂದರ್ಭಗಳಲ್ಲೂ ಸಹ ಯಾವುದೇ ಒಂದು ಸಭೆ ಮಾಡಿದರೂ ಒಂದು ಕಮಿಟಿ ಮಾಡಿಬಿಡಿ, ಆ ಕಮಿಟಿಗೆ ಜವಾಬ್ದಾರಿ ಕೊಡಿ ಎಂದು ಹೇಳುತ್ತಾರೆ. ಆ ಕಮಿಟಿಯಿಂದ ರಿಪೋರ್ಟ್ ಬರುವ ಹೊತ್ತಿಗೆ ಆ ಸಮಸ್ಯೆ ಮುಂದೆ ಹೋಗಿರುತ್ತದೆ. ಅಲ್ಲಿಗೆ ಆ ಸಮಸ್ಯೆ ಬಗೆಹರಿಯಿತು ಎನ್ನತಕ್ಕ ಒಂದು ಭಾವನೆ ಎಲ್ಲ ಅಧಿಕಾರಿಗಳಲ್ಲಿ ನಿರಂತರವಾಗಿ ಬಂದಿರತಕ್ಕಂಥ ವಿಚಾರ. ಆದರಿಂದಾಗಿ ದಯಮಾಡಿ ತಾವು ಈ ಒಂದು ವಿಚಾರದಲ್ಲಿ ಅಂದರೆ ಕಮಿಟಿಗಳನ್ನು ಮಾಡುವಂತಹ ವಿಚಾರದಲ್ಲಿ ಸ್ವಲ್ಪ ಯೋಚನೆ ಮಾಡಿ. ನಿರ್ದಿಷ್ಟವಾಗಿ ತಾವು ಕ್ರಮ ತೆಗೆದುಕೊಂಡರೆ ಅದು ಸಾಧ್ಯ ಎನ್ನತಕ್ಕದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ತಾವು ಒಂದು ಒಳ್ಳೆಯ ಅವಕಾಶವನ್ನು ಕಳೆದುಕೊಂಡಿದ್ದೀರಿ ಅದು ಏಕೆ ಎಂದು ನಾನು ಹೇಳುತ್ತೇನೆ. ಈಗ ಆಯವ್ಯಯದಲ್ಲಿ ತಾವೇನೋ ಇದೆಲ್ಲ ವಿಚಾರಗಳನ್ನು ಹೇಳಿದ್ದೀರಿ. ಆದರೆ ಇದರಲ್ಲಿ ಬಂಡವಾಳದ ವಿಚಾರ ಅಂದರೆ ನೀವು ಸುಮಾರು 20 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. 12 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ವರ್ಲ್ಡ್ ಬ್ಯಾಂಕಿನಿಂದ ತೆಗೆದುಕೊಳ್ಳತಕ್ಕದ್ದು, ಒಂದೂವರೆ ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಹುಡ್ಕೋ ಸಂಸ್ಥೆಯಿಂದ ತೆಗೆದುಕೊಳ್ಳತಕ್ಕದ್ದು, ಎನ್ ಡಿಡಿಬಿಯಿಂದ 500 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳತಕ್ಕದ್ದು, ಜಪಾನ್ ಓವರ್ ಸೀಸ್ ಫೈನಾನ್ಸ್‌ನಿಂದ 3600 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳತಕ್ಕದ್ದು. ವಿದ್ಯುತ್‌ಗೋಸ್ಕರ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಒಪ್ಪಂದ ಮಾಡಿಕೊಂಡು 3500 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳತಕ್ಕದ್ದು. ಒಟ್ಟು 20 ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುವುದರಿಂದ ಮುಂದಿನ ನಾಲ್ಕು ವರ್ಷಗಳಲ್ಲಿ ಕರ್ನಾಟಕ ರಾಜ್ಯದ ಮೇಲೆ ಈ ಸರ್ಕಾರದ ಮೇಲೆ ಅದರ ಹೊರೆ ಬೀಳುತ್ತದೆ. ಒಂದು ಕಡೆ ಹೇಳುತ್ತೀರಿ, we are reaching towards debt trap. ಇನ್ನೊಂದು ಕಡೆ ಹೇಳುತ್ತೀರಿ, ಸೋಷಿಯಲ್ ಆಬ್ಲಿಗೇಷನ್ಸ್ ಏನು ಇವೆ, ಅದನ್ನು ನಾವು ಫುಲ್‌ಫಿಲ್ ಮಾಡಲೇಬೇಕಾಗಿದೆ ಎಂದು Social Welfare sector is most important sector;

ಈ ಸಂದರ್ಭದಲ್ಲಿ ಇವತ್ತು ಈ ರಾಷ್ಟ್ರದಲ್ಲಿ ಆರ್ಥಿಕ ಬದಲಾವಣೆಯನ್ನು ಮಾಡತಕ್ಕ ವಿಚಾರದಲ್ಲಿ, ಆರ್ಥಿಕ ವಿಕೇಂದ್ರೀಕರಣದ ವಿಚಾರದಲ್ಲಿ, ಹೊರ ದೇಶದಿಂದ ಹಣವನ್ನು ತರುತ್ತೇವೆ ಎನ್ನತಕ್ಕ ಸ್ಪರ್ಧೆಯ ವಿಚಾರದಲ್ಲಿ, ಇನ್‌ವೆಸ್ಟ್‌ಮೆಂಟ್ ಮಾಡಬೇಕು ಎನ್ನತಕ್ಕ ವಿಚಾರದಲ್ಲಿ ನಮ್ಮತನವನ್ನು ಕಳೆದುಕೊಂಡು ನಮ್ಮ ಹಳ್ಳಿಗಳನ್ನು ಸಂಪೂರ್ಣವಾಗಿ ನಾಶ ಮಾಡತಕ್ಕಂಥ ದೃಷ್ಟಿಯಲ್ಲಿ ನಾವು ಹೋಗುತ್ತಿದ್ದೇವೆ. ದಯವಿಟ್ಟು ನಾವೆಲ್ಲರೂ ಇದನ್ನು ಅರ್ಥ ಮಾಡಿಕೊಳ್ಳಬೇಕು. ಡಾ: ಮನ್ ಮೋಹನ್ ಸಿಂಗ್ ಅವರ ಬಗ್ಗೆ ನಮ್ಮಗೆಲ್ಲರಿಗೂ ಬಹಳ ಗೌರವ ಇದೆ. ಆದರೆ ಇವತ್ತು ಕಾಂಗ್ರೆಸ್ ಪಾರ್ಟಿಯವರು ಈ ರಾಷ್ಟ್ರವನ್ನು ಆಳಿರತಕ್ಕಂತಹ ಪಾರ್ಟಿ. ಕಾಂಗ್ರೆಸ್ ಪಾರ್ಟಿಗೆ ಒಂದು ಇತಿಹಾಸ ಇತ್ತು ಆ ಇತಿಹಾಸ ಇವತ್ತಿಗೂ ಇದೆ. ಆದರೆ ಡಾ : ಮನ್‌ಮೋಹನ್ ಸಿಂಗ್ ಅವರು ಎಲ್ಲೋ ಹೆಜ್ಜೆಯನ್ನು ತಪ್ಪಿದರು ಎನ್ನತಕ್ಕದ್ದನ್ನು ಇವತ್ತು ಆರ್ಥಿಕ ತಜ್ಞರೇ ಹೇಳುತ್ತಾರೆ. ಅದರ ಜೊತೆಗೆ ಚುನಾಯಿತ ಪ್ರತಿನಿಧಿಗಳಾಗಿರತಕ್ಕಂಥ ನಾವು ಹಳ್ಳಿಗಳಲ್ಲಿ ಜನರ ಪರಿಸ್ಥಿತಿ ಸುಧಾರಣೆ ಆಗಿದೆಯೇ ಅವರ ಜೀವನ ಮಟ್ಟ ಸುಧಾರಣೆ ಆಗಿದೆಯೇ ? ಇದರ ಬಗ್ಗೆ

ಇವರ್ಯಾರೂ ವಿಚಾರ ಮಾಡುವುದಿಲ್ಲ. ಇವತ್ತು ನಾವು ಶಾಸಕರುಗಳು, ಚುನಾಯಿತ ಪ್ರತಿನಿಧಿಗಳು ಹಳ್ಳಿಗಳಲ್ಲಿ ರಾತ್ರಿ ಇರುತ್ತೇವೆ. ನಮ್ಮ ಹೆಣ್ಣು ಮಕ್ಕಳು ಕಕ್ಕಸ್ಸಿಗೆ ಹೋಗುವುದಕ್ಕೆ ಆಗುವುದಿಲ್ಲ. ಅಲ್ಲಿ ಶುದ್ಧವಾಗಿರತಕ್ಕ ನೀರು ಸಿಗುವುದಿಲ್ಲ. ಆಸ್ಪತ್ರೆ ಸೌಲಭ್ಯ ಸಿಗುವುದಿಲ್ಲ, ವಿದ್ಯುಚ್ಛಕ್ತಿ ಸಿಗುವುದಿಲ್ಲ. ದಿನದಲ್ಲಿ 12 ಗಂಟೆ ಮಾತ್ರ ಅವರಿಗೆ ಸ್ವಾತಂತ್ರ್ಯ , ಇನ್ನು 12 ಗಂಟೆ ಅವರು ಕತ್ತಲೆಯಲ್ಲಿ ಇರಬೇಕು. ಅಲ್ಲಿ ಸರಿಯಾದ ರಸ್ತೆಗಳು ಇಲ್ಲ. ಜನರೆಲ್ಲ ಧೂಳಿನಲ್ಲಿ ಬದುಕಬೇಕು. ಮನೆಗಳನ್ನು ರಿಪೇರಿ ಮಾಡಿಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಈ ಒಂದು ನಿಯೋ-ರಿಚ್-ಕ್ಲಾಸನ್ನು ನಾವು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಯೇ ಹೊರತು ಮತ್ತೇನಿಲ್ಲ. ನಿಮ್ಮ ಐಟಿ ಇರಬಹುದು ಅಥವಾ ವಿದೇಶದಿಂದ ಬರತಕ್ಕಂಥ ಬಂಡವಾಳದ ಹಣದಿಂದ ಆಗುತ್ತಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಇರಬಹುದು. ಆದರೆ ಹಿಂದುಳಿದ ವರ್ಗದವರು, ಬಡವರು, ಸಣ್ಣ ರೈತರು, ಇವತ್ತು ಹಳ್ಳಿಗಳಲ್ಲಿ 100ಕ್ಕೆ 80ರಷ್ಟು ಜಮೀನು ಇಲ್ಲದೇ ಇರತಕ್ಕಂಥಹ ಜನ, ಕೂಲಿ ಮಾಡತಕ್ಕಂಥ ಜನ, ವ್ಯವಸಾಯೇತರ ಕೆಲಸದ ಮೇಲೆ ಅವಲಂಬನೆ ಮಾಡಿಕೊಂಡಿರತಕ್ಕಂಥ ಜನರು ಏನಿದ್ದಾರೆ ಅವರ ಬಗ್ಗೆ ನಾವು ಈ ಅವರ ಆರ್ಥಿಕ ಪರಿಸ್ಥಿತಿಯ ಸುಧಾರಣೆ ಬಗ್ಗೆ ನಾವು ವಿಚಾರ ಮಾಡಬೇಕು. ಇದು ಎಲ್ಲಾ ಪಕ್ಷದವರಿಗೆ ಸಂಬಂಧಪಟ್ಟ ವಿಚಾರ. ಇದು ಕೇವಲ ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಅಥವಾ ಕಾಂಗ್ರೆಸ್‌ನವರು ಮಾತ್ರ ವಿಚಾರ ಮಾಡಬೇಕಾಗಿರತಕ್ಕಂಥ ವಿಚಾರವಲ್ಲ. ಇವತ್ತು ರಾಜ್ಯದಲ್ಲಿ ಅಲ್ಪಸಂಖ್ಯಾತರ ಪರಿಸ್ಥಿತಿ ಏನು ಇದೆ? ಮುಸಲ್ಮಾನರ ಪರಿಸ್ಥಿತಿ ಏನು ಇದೆ? ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಿಂದುಳಿದ ವರ್ಗದ ಜನಗಳ ಪರಿಸ್ಥಿತಿಏನು ಇದೆ? ಅವರಿಗೆ ಜಮೀನು ಕೊಡಲು ನಿಮ್ಮಲ್ಲಿ ಜಮೀನು ಇಲ್ಲ. ರಣವೀರ ಸೇನೆಗಳು ಬಂದು ಬಿಡುತ್ತವೆ. ಅವರಿಗೇ ಏನಾದರೂ ಜಮೀನು ಕೊಡಲು ಹೋದರೆ ! ಈ ಅಲ್ಪಸಂಖ್ಯಾತರ ರಕ್ಷಣೆಯ ವಿಚಾರದಲ್ಲಿ ಹೇಳಬೇಕೆಂದರೆ, ಸೆಕ್ಯುರಿಟಿ ಒಂದನ್ನು ಬಿಟ್ಟರೆ ಬಾಕಿಯದೇನನ್ನೂ ಅವರು ಬಯಸುವುದಿಲ್ಲ ಎನ್ನತಕ್ಕಂತಹ ಪರಿಸ್ಥಿತಿ ಈ ದೇಶದಲ್ಲಿ ಉದ್ಭವ ಆಗಿದೆ. ಇಂತಹದರಲ್ಲಿ ತಾವು ಮತ್ತೊಮ್ಮೆ 20 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಒಂದು ಕಡೆ ತೆಗೆದುಕೊಳ್ಳಬೇಕು, ಇನ್ನೊಂದು ಕಡೆ ರಿಸೋರ್ಸಸ್ ಮೊಬಿಲೈಸ್ ಮಾಡಲಿಕ್ಕೆ **the political will which has to be shown, has not been shown.** ಇದನ್ನು ನಾನು ಹೇಳತಕ್ಕಂಥಾದ್ದು. ಮಾನ್ಯ ಮುಖ್ಯಮಂತ್ರಿಗಳೇ, ತಾವು ಅಪಾರವಾದ ಅನುಭವವನ್ನು ಹೊಂದಿರತಕ್ಕವರು. ತಮಗೆ ಸಿಕ್ಕಿರತಕ್ಕಂಥಹ ಫಸ್ಟ್ ಆಪರ್ಚುನಿಟಿ ಇದು. ತಾವು ಈ ಚುನಾವಣಾ ವರ್ಷದಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ, ಮೂರನೆಯ ವರ್ಷಲ್ಲಿ ಮಾಡುವುದಕ್ಕೆ ಆಗುವುದಿಲ್ಲ, ನಾಲ್ಕನೇ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯ. ಈ ವರ್ಷದಲ್ಲಿ ನೀವು ಮಾಡಲೇಬೇಕಾಗಿದೆ. ಈ ವರ್ಷದಲ್ಲಿ ಸ್ಟ್ರಾಂಗ್ ಮೆಷರ್ಸ್‌ನ್ನು ನೀವು ತೆಗೆದುಕೊಳ್ಳಬೇಕಾಗಿತ್ತು. ಆ ಸ್ಟ್ರಾಂಗ್ ಮೆಷರ್ಸ್‌ನ್ನು ನಿಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಕೆಲವು ಕಾರ್ಯಕ್ರಮಗಳನ್ನು ಮಾಡಲು ಅವಕಾಶಗಳನ್ನು ಕಳೆದುಕೊಂಡಿದ್ದೀರಿ ಎನ್ನತಕ್ಕ ಬಗ್ಗೆ ಏಕೆ ಹೇಳಿದೆ ಅಂದರೆ ಈ ಒಂದು ಆಯವ್ಯಯ ಪತ್ರ ಏನಿದೆ ಇದರಲ್ಲಿ ಸಾಮೂಹಿಕವಾದಂತಹ ಚಿಂತನೆ ಆಗಿಲ್ಲ. ಈ ಹಿರಿಯ ಮಂತ್ರಿಗಳ ಅನುಭವದ ಚಿಂತನೆ ಆಗಿಲ್ಲ. ಇದೆಲ್ಲವನ್ನು ಸಹಿತ ಒಳಗೊಂಡಿಲ್ಲ ಎನ್ನತಕ್ಕ ಮಾತನ್ನು ದುಃಖದಿಂದ ನಾನು ಹೇಳುತ್ತಿದ್ದೇನೆ. ಹಿಂದುಳಿದ ವರ್ಗದಿಂದ ಬಂದಿರತಕ್ಕ ಮಾನ್ಯ ಕಾಗೋಡು ತಿಮ್ಮಪ್ಪನವರು ಇರಬಹುದು, ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕಂಥ ಮುಖಂಡರುಗಳು ಈ ಮಂತ್ರಿಮಂಡಲದಲ್ಲಿದ್ದೀರಿ. ಆದರೆ ನೀವು ಏನನ್ನು ಮಾಡಲಿಲ್ಲ ಎಂದು ಹೇಳಬಹುದು. ಅದು ಬೇರೆ ವಿಚಾರ. ನಾವು ಮಾಡಿದ್ದೇವೋ ಅಥವಾ ಮಾಡಿಲ್ಲವೋ ಎನ್ನತಕ್ಕ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ

ಹೋಗುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಈ ಆಯವ್ಯಯ ಪತ್ರದ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗದೇ ಒಂದೆರಡು ವಿಚಾರಗಳನ್ನು ಮಾತ್ರ ಹೇಳಲು ಬಯಸುತ್ತೇನೆ. ಪುಟ 40ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಾನ್ಯ ಜೆ.ಹೆಚ್. ಪಟೇಲರ ಸರ್ಕಾರದ ವಿಚಾರ ಹೇಳುತ್ತಾರೆ. "ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಹಣಕಾಸು ಪರಿಸ್ಥಿತಿ ಉತ್ತಮವಾಗಿಯೇ ಇದೆ, ಸಧ್ಯಕ್ಕೆ ನಾವು ಆರ್ಥಿಕ ಬಿಕ್ಕಟ್ಟಿನ ಸ್ಥಿತಿಯಲ್ಲಿಲ್ಲ" ಎನ್ನತಕ್ಕ ಮಾತನ್ನು ಒಂದು ಕಡೆ ನೀವು ಹೇಳಿದ್ದೀರಿ. ಅದರ ಜೊತೆಗೆ ಹಿಂದಿನ ಸರ್ಕಾರ ಮಾಡಿರತಕ್ಕ ಅನೇಕ ಒಳ್ಳೆಯ ಕೆಲಸಗಳ ಬಗ್ಗೆ ಪುಟ 33ರಲ್ಲಿ ಹೇಳಿದ್ದೀರಿ. "ರಾಜ್ಯ ರಸ್ತೆ ಸಾರಿಗೆಸಂಸ್ಥೆಯನ್ನು ಮೂರು ನಿಗಮಗಳನ್ನಾಗಿ ವಿಭಜಿಸಿದ ಮೇಲೆ ನಿಗಮದ ಕಾರ್ಯ ನಿರ್ವಹಣೆಯಲ್ಲಿ ಸುಧಾರಣೆ ಆಗಿದೆ". ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಅದೇ ರೀತಿ ಇನ್ನೊಂದು ಕಡೆ ಇನ್ನೊಂದು ಮಾತನ್ನು ಹೇಳಿದ್ದೀರಿ. ನಬಾರ್ಡ್ ಸಂಸ್ಥೆಯಿಂದ 744 ಕೋಟಿ ರೂಪಾಯಿಗಳ ಸಾಲದ ಮಂಜೂರಾತಿ ಆಗಿದೆ. ಆದರೆ ಸಾಲವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡಿಲ್ಲ. ಆಗಬೇಕಾದ ಕೆಲಸಗಳು ಆಗಿಲ್ಲ ಎಂದರೆ ಅವಕ್ಕೆ ಬೇರೆ ಬೇರೆ ಪ್ರಾಬ್ಲಮ್‌ಗಳು ಇವೆಯ ಅದು ಬೇರೆ ವಿಚಾರ. ಆದರೆ ಹಿಂದಿನ ಸರ್ಕಾರ ಮಾಡಿರತಕ್ಕ ಕೆಲಸಗಳನ್ನು ತಾವು ಮುಕ್ತ ಕಂಠದಿಂದ ಅಲ್ಲದೇ ಹೋದರೂ ಸಹಿತ ವಾಸ್ತವಾಂಶದ ಬಗ್ಗೆ ಹೇಳಿದ್ದೀರಿ. ನೀವು ಹೇಳಿದಹಾಗೆ ಶ್ರೀ ಗೋಪಾಲರೆಡ್ಡಿ ಅವರು ಮತ್ತು ಇತರರು ಸಹಿತ ಆಗೊಂದು, ಈಗೊಂದು, ವಿಚಾರ ಹೇಳುವುದಕ್ಕೆ ಆಗುವುದಿಲ್ಲ. ಆದರೆ ತಾವು ಸ್ಥಿತಿಯನ್ನು ಹೇಳಿದ್ದೀರಿ. ಪ್ರಣಾಳಿಕೆಯಲ್ಲಿ ರಾಜ್ಯಕೀಯಕ್ಕೋಸ್ಕರ ಅಧಿಕಾರಕ್ಕೆ ಬರಬೇಕು, ನಾವ್ಯಾರೂ ಸನ್ಯಾಸಿಗಳು ಅಲ್ಲ. ಆದ್ದರಿಂದ ಜನತಾದಳ ಸರ್ಕಾರದಿಂದ ಖಜಾನೆ ಹರಾಜು ಆಗಿತ್ತು, ಖಜಾನೆ ಖಾಲಿ ಆಗಿತ್ತು. ಎಲ್ಲ ಮನೆಗೆ ಎತ್ತಿಕೊಂಡು ಹೋಗಬಹುದು ಎಂದು ಹೇಳಿ ಭಾಷಣ ಮಾಡತಕ್ಕದ್ದು ಬೇರೆ. ಆದರೆ ಈ ಒಂದು ಆಯುವ್ಯಯದಲ್ಲಿ ತಾವು ವಸ್ತುಸ್ಥಿತಿಯ ಬಗ್ಗೆ ಹಿಂದಿನ ಸರ್ಕಾರ ಮಾಡಿರತಕ್ಕಂಥಹ ಒಳ್ಳೆಯ ಕೆಲಸಗಳ ಬಗ್ಗೆ ಹೇಳಿದ್ದೀರಿ ಅದನ್ನೂ ಸಹಿತ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದರೆ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ತಿಳಿಸಬೇಕು ತಾವು ಹಳ್ಳಿಯಿಂದ ಬಂದಿರತಕ್ಕವರು ಹಳ್ಳಿಯ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿರತಕ್ಕವರು ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾಯಿತು ಅಕ್ಟೋಬರ್ 11ನೇ ತಾರೀಖು ಅಧಿಕಾರಕ್ಕೆ ಬಂದಿದ್ದೀರಿ. ಚುನಾವಣಾ ನೀತಿ ಸಂಹಿತೆಗಳು ಕಾರ್ಯಾಚರಣೆಗೆ ಬಂದಿದ್ದು ಏಪ್ರಿಲ್ ತಿಂಗಳಲ್ಲಿ ಅಂದರೆ ಏಪ್ರಿಲ್ ತಿಂಗಳಿಂದಲೂ ಸಹಿತ ಈ ಸರ್ಕಾರದಲ್ಲಿ ಅಧಿಕಾರಿಗಳದ್ದೇ ಮೇಲುಗೈ ಆಗಿದೆಯೇ ಹೊರತು ನಮ್ಮ ನಿಮ್ಮ ಮೇಲುಗೈ ಆಗಿಲ್ಲ. ಯಾವುದೇ ರೀತಿಯ ಬದಲಾವಣೆ ಆಗಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಹೇಳಿ. ತಹಶೀಲ್ದಾರ್‌ರವರ ಕಛೇರಿಯಲ್ಲಿ ಕಳೆದ ಆರು ತಿಂಗಳಲ್ಲಿ ಏನಾದರೂ ಬದಲಾವಣೆ ಆಗಿದೆಯೇ ? ಇವತ್ತು ಆಡಳಿತ ಪಕ್ಷದ ಸದಸ್ಯರೂ ಸಹಿತ ಇದನ್ನು ಗಮನಿಸಬೇಕು. ಈ ಹೊಸ ಸರ್ಕಾರದ ಆರು ತಿಂಗ ಆಡಳಿತದಲ್ಲಿ, ತಹಶೀಲ್ದಾರ್‌ರವರ ಕಛೇರಿಯಲ್ಲಿ, ಕೆಇಬಿ ಆಫೀಸ್‌ನಲ್ಲಿ, ಪೋಲೀಸ್ ಸ್ಟೇಷನ್‌ಗಳಲ್ಲಿ, ಶಾಲೆಗಳಲ್ಲಿ, ಬಿಇಓ ಆಸ್ಪತ್ರೆಗಳಲ್ಲಿ, ಇಂಜಿನಿಯರ್‌ಗಳ ಆಫೀಸ್‌ನಲ್ಲಿ ಡೆಪ್ಯುಟಿ ಕಮೀಷನರ್‌ಗಳ ಆಫೀಸ್‌ನಲ್ಲಿ ಏನಾದರೂ ಬದಲಾವಣೆಗಳು ಆಗಿದೆಯೇ ? ಬದಲಾವಣೆ ಒಂದು ಚೂರೂ ಸಹಿತ ಆಗಿಲ್ಲ. ಏಕೆ ಬದಲಾವಣೆ ಆಗಿಲ್ಲ ಎಂಬ ವಿಚಾರಕ್ಕೆ ನಾನು ಬರುತ್ತಿದ್ದೇನೆ. ಏಕೆ ಆಗಿಲ್ಲ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಹ ಉತ್ತರ ಕೊಡಬೇಕು. ಮೊದಲನೆಯ ಸಾಲಿನಲ್ಲಿರತಕ್ಕ ಮಂತ್ರಿಗಳು ಸಹ ಇವತ್ತು ಬಂದಿಲ್ಲ. ಒಬ್ಬ ಜಿಲ್ಲಾ ಮಂತ್ರಿ, ಒಬ್ಬಿಬ್ಬರು ಮಂತ್ರಿಗಳನ್ನು ಬಿಟ್ಟರೆ ಅಥವಾ ಮೂರು, ನಾಲ್ಕು

ಜನರನ್ನು ಬಿಟ್ಟರೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಜಿಲ್ಲೆಗಳಿಗೆ ಹೋಗಿ ಶಾಸಕರನ್ನು ಕರೆಸಿ, ರಿವ್ಯೂ ಮಾಡಿ ಸ್ಪೆಸಿಫಿಕ್ ಟಾರ್ಗೆಟನ್ನು ಫಿಕ್ಸ್ ಮಾಡಿ, 'ಏಕೆ ಈ ಕೆಲಸ ಮಾಡಲಿಲ್ಲ' ಎನ್ನತಕ್ಕದ್ದನ್ನು ಯಾರೂ ಸಹಿತ ವಿಚಾರ ಮಾಡಿಲ್ಲ. ಹಾಗೆ ಮಾಡಿದ್ದರೆ ಒಬ್ಬರೋ ಇಬ್ಬರೋ ಮಾಡಿದ್ದಾರೆಯೇ ಕುರಿತು ಯಾವ ಜಿಲ್ಲಾ ಮಂತ್ರಿಗಳೂ ಸಹಿತ ಇದರ ಕಡೆಗೆ ಆಸಕ್ತಿ ವಹಿಸುತ್ತಾ ಇಲ್ಲ. ಮತ್ತೆ ಇದೊಂದು ಜನತೆಯ ಸರ್ಕಾರ ಅಲ್ಲ. ಒಂದು ರೀತಿಯಲ್ಲಿ ಹೇಳಬೇಕಾದರೆ ಈ ಸರ್ಕಾರ 'ಅಧಿಕಾರಿಗಳ-ಸರ್ಕಾರ' ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದು ಮೊದಲಿನಿಂದಲೂ ಕಂಟಿನ್ಯೂ ಆಗಿದೆ. ಮಾನ್ಯ ರಾಮಯ್ಯನವರೇ, ನೀವೇನೋ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಿಮ್ಮ ಪಕ್ಷದ ಮುಖಂಡರುಗಳು ಹೇಳಿದ್ದಾರೆ.

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಇಲ್ಲ. ಆದರೂ ನಾನು ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಆಯವ್ಯಯ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಅತ್ಯಂತ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ನನ್ನ ಸ್ನೇಹಿತರ ವಾದ ಏನೆಂದರೆ ಆವರ ಸರ್ಕಾರ ಬಹಳ ಉತ್ತಮವಾದಂತಹ ಆರ್ಥಿಕ ಪರಿಸ್ಥಿತಿಯ ಭದ್ರ ಬುನಾದಿಯನ್ನು ಹಾಕಿಕೊಂಡಿತ್ತು, ಅದರ ಶ್ರೇಯಸ್ಸು ನಮಗೆ ಬರಬೇಕಾಗಿತ್ತು ಎಂದು ಅವರು ಪರೋಕ್ಷವಾಗಿ ಕ್ಲೈಮ್ ಮಾಡುತ್ತಿದ್ದಾರೆ. 1995ನೇ ಇಸವಿಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಹೆಮ್ಮೆಯ ಪುತ್ರ ಸನ್ಮಾನ್ಯ ಹೆಚ್. ಡಿ. ದೇವೇಗೌಡರು ಕೇಂದ್ರದಲ್ಲಿ ಪ್ರಧಾನ ಮಂತ್ರಿ ಆಗಿದ್ದಂತಹ ಕಾಲದಲ್ಲಿ ಅವರ ಸಚಿವ ಸಂಪುಟದಲ್ಲಿ ಯೋಜನಾ ಖಾತೆಯ ಸಚಿವರಾಗಿದ್ದಂತಹ ಶ್ರೀ ವೈ.ಕೆ. ಅಲಗ್ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ನಾನಲ್ಲ ಕೊಟ್ಟಿದ್ದು. ಅದು ಬೀದಿಯಲ್ಲಿ ಅಲ್ಲ ಕೊಟ್ಟಿದ್ದು on the floor of the House, ಏನಪ್ಪ ಆ ಹೇಳಿಕೆ ಅಂದರೆ We have to cut the plan size in Karnataka. There is no alternative. The readon is the Karnataka Government has failed to mobilise the resources. ಇದನ್ನು ನಾನು ಹೇಳಲಿಲ್ಲ, ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೇಳಲಿಲ್ಲ, ನಮ್ಮ ಪಕ್ಷದವರು ಹೇಳಲಿಲ್ಲ, ಅಥವಾ ಮಾನ್ಯ ಮನಮೋಹನ್ ಸಿಂಗ್ ರವರು ಹೇಳಲಿಲ್ಲ. ಯಾವ ಪ್ರಧಾನಿಯವರು ಅಪ್ಪಣೆ ಕೊಟ್ಟು ಮಂತ್ರಿಯನ್ನಾಗಿ ಮಾಡಿದ್ದರೂ ಆ ವೈ.ಕೆ. ಅಲಗ್ ರವರು ಕರ್ನಾಟಕ ರಾಜ್ಯದಲ್ಲಿ ರಿಸೋರ್ಸಸ್ ಮೊಬಿಲೈಸ್ ಮಾಡುವುದರಲ್ಲಿ ಸೋತಿರುವುದರಿಂದ ಯೋಜನಾ ವೆಚ್ಚವನ್ನು ಕಡಿತ ಮಾಡುವುದು ಅನಿವಾರ್ಯವಾಗಿದೆಯೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಇದರಿಂದ ಕುಂಠಿತವಾಗಿದೆಯೆಂದು ಅವರ ಸರ್ಕಾರದ ಮಂತ್ರಿಗಳೇ ಹೇಳಿಕೆಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವೈ.ಕೆ.ರಾಮಯ್ಯನವರು ನಮ್ಮ ಸರ್ಕಾರದ ಬಗ್ಗೆ ಮಾತನಾಡಿದರು. ಬಹುಶಃ ಮಾನ್ಯ ದೇವೇಗೌಡರ ಹೆಸರನ್ನು ತೆಗೆದುಕೊಳ್ಳದಿದ್ದರೆ ಅವರಿಗೆ ಉಸಿರಾಡಲು ಆಗುವುದಿಲ್ಲವೆಂದು ನನಗೆ ಅನ್ನಿಸುತ್ತಿದೆ. ಮಾನ್ಯ ದೇವೇಗೌಡರು ಈ ದೇಶದ ಮಾಜಿ ಪ್ರಧಾನಿಗಳು. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು. ಆದ್ದರಿಂದ ಅವರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ. ಈ ರಾಜ್ಯದ ಹಣಕಾಸಿನ ವಿಚಾರ ಯಾವ ರೀತಿ ಇದೆ, ಪರಿಸ್ಥಿತಿ ಏನಾಗಿದೆ

ಎಂಬ ಬಗ್ಗೆ ಇಂದಿನ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಾನು ಮಾನ್ಯ ದೇವೇಗೌಡರ ಸರ್ಕಾರವಿದ್ದಾಗ ನಾನೂ ಸಹ ಮಂತ್ರಿಯಾಗಿದ್ದೆ. ನಮ್ಮ ಸರ್ಕಾರವಿದ್ದಾಗ ಮಾಡಿದ ಕೆಲಸಗಳ ಬಗ್ಗೆ ವಿಚಾರಣೆ ಮಾಡಲು ತಾವು ಹೊರಟಿದ್ದೀರಿ. ಅದನ್ನು ಮಾಡಬೇಡಿ ಎಂದು ನಾವು ಹೇಳಲು ಹೋಗುವುದಿಲ್ಲ. ನಾನು ಅಂದಿನ ಸರ್ಕಾರದ ಮಂತ್ರಿಮಂಡಲದಲ್ಲಿದ್ದೆ. ಆದ್ದರಿಂದ I have to defend. It is my duty.

ಇಲ್ಲದಿದ್ದರೆ ನಾನೂ ಎಲ್ಲೋ ಒಂದು ಕಡೆ ತಪ್ಪು ಮಾಡಿದ್ದೇನೆ ಎಂದು ಆಗುತ್ತದೆ. ಜನತಾದಳದ ಸರ್ಕಾರ ಅದು ಮಾನ್ಯ ದೇವೇಗೌಡರ ಸರ್ಕಾರವಿರಲಿ, ಮಾನ್ಯ ಜೆ. ಹೆಚ್. ಪಟೇಲರ ಸರ್ಕಾರವಿರಲಿ, ತಾವೇನು ವಿಚಾರಣೆ ಮಾಡಲು ಹೊರಟಿದ್ದೀರಿ ಅದನ್ನು ಮಾಡಿ ಎಂದು ನಾವು ಹೇಳಲೇಬೇಕಾಗುತ್ತದೆ. We have to tell them. We have ruled the State for five years, and we are a responsible political party. We cannot shirk our responsibility. It is a collective responsibility.

ಮಾನ್ಯ ಮುಖ್ಯಮಂತ್ರಿಗಳಾಗಿರುವ ಎಸ್. ಎಂ. ಕೃಷ್ಣರವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಏನೇನು ಭರವಸೆಗಳನ್ನು ಕೊಟ್ಟಿದ್ದರೋ ಅದನ್ನು ಒಂದೇ ಬಜೆಟ್‌ನಲ್ಲಿ ಈಡೇರಿಸಬೇಕು ಎಂದು ನಾನು ಹೇಳಬಯಸುವುದಿಲ್ಲ. ಆ ರೀತಿ ಯಾರಾದರೂ ಬಯಸಿದ್ದರೆ ಅದು ತಪ್ಪಾಗುತ್ತದೆ. ಆದರೆ ಇವರುಗಳು ನೀಡಿರುವ ಭರವಸೆಗಳಾದರೂ ಏನು ? ಪೂರ್ವಕ್ಕೆ ಹರಿಯುವ ಎಲ್ಲಾ ನದಿಗಳನ್ನು ಪಶ್ಚಿಮಕ್ಕೆ ತಿರುಗಿಸುತ್ತೇವೆ. ಅಂದರೆ ನೇತ್ರಾವತಿ ನದಿಯ ನೀರನ್ನು ಹಾಸನ- ಬೆಂಗಳೂರಿನ ಮೂಲಕ ವಿಧಾನಸೌಧಕ್ಕೆ ಹರಿದು ಬಿಡುತ್ತದೆ ಎಂಬ ರೀತಿಯಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ನೀರಾವರಿ ಸಚಿವರು ಹೇಳಬೇಕು. ಆದರೆ ಅವರು ಇಲ್ಲಿ ಇಲ್ಲ. 'ರಿಕಾನಿಸನ್ಸ್ ಸರ್ವೆ' ಎಂದು ಹೇಳುತ್ತಾರೆ. ಹೆಲಿಕಾಪ್ಟರ್‌ನಲ್ಲಿ ಹೋಗಿ ಸರ್ವೆ ಮಾಡತಕ್ಕದನ್ನು ಮಾಡುತ್ತಿದ್ದಾರೋ, ಅಥವಾ ಏನು ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಪ್ರತಿಯೊಂದು ತಾಲ್ಲೂಕಿಗೂ ಒಂದು ಆಶ್ರಮ ಶಾಲೆ, ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟವನ್ನು ಕೊಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣ ರದ್ದು ಮಾಡುವುದಾಗಿ ಮಾನ್ಯ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಹೇಳಿದ್ದಾರೆ. ಇವತ್ತು ಈ ಸರ್ಕಾರ ಪ್ರಾಥಮಿಕ ಶಾಲೆಗಳಿಗೆ ಅಡ್ಮಿಷನ್ ಆಗತಕ್ಕ ಸಂದರ್ಭದಲ್ಲಿ ತಾವೇನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದರೋ ಇಲ್ಲವೋ ನಮಗೆ ಗೊತ್ತಿಲ್ಲ, ತಾವು ಸರ್ಕಾರದ ಆದೇಶವನ್ನೇನು ಮಾಡಿದ್ದಾರೆ it is a direct way of regularising the capitation fee.

ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದೇನು, ಆದರೆ ಈಗ ಮಾಡಿರುವುದೇನು ? ಬಡವರಿಗೆ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಡಬೇಕಾಗಿರುವ ಎಲ್ಲಾ ಸೌಲಭ್ಯವನ್ನು ಕೊಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದರೆ ಎಲ್ಲಿ ಕೊಟ್ಟಿದ್ದೀರಿ ? ಹಾಸ್ಟೆಲ್‌ನಲ್ಲಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಫೀಯನ್ನು ಜಾಸ್ತಿ ಮಾಡುವುದಾಗಿ ಹೇಳಿದ್ದೀರಿ. ಅದನ್ನು ಎಲ್ಲಿ ಕೊಟ್ಟಿದ್ದೀರಿ ? ಈ ನೇಕಾರರ ಬಗ್ಗೆ ಮಾತನಾಡಲು

ಹೋಗಿಲ್ಲ. ಬಂಡವಾಳವಿಲ್ಲದೆ ಬಡಾಯಿಯನ್ನು ಈ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ ವೃದ್ಧಾಪ್ಯ ವೇತನವನ್ನು 100 ರೂಪಾಯಿಗಳಿಂದ 125 ರೂಪಾಯಿಗಳಿಗೆ ಹೆಚ್ಚು ಮಾಡುವುದಾಗಿ ಹೇಳಿದ್ದೀರಿ ಆದರೆ ಅದನ್ನು ಎಲ್ಲಿ ಜಾಸ್ತಿ ಮಾಡಿದ್ದೀರಿ ? ಕಿಡ್ನಿ, ಹೃದಯ, ಕಾನ್ಸರ್ ರೋಗಿಗಳಿಗೆ ಕರ್ನಾಟಕದಲ್ಲಿ ಉಚಿತವಾಗಿ ತಾವು ಟ್ರೀಟ್‌ಮೆಂಟ್ ಕೊಡುತ್ತೇವೆಂದು ಹೇಳುತ್ತೀರಿ. ಇನ್ನು ನಾಲ್ಕು ವರ್ಷಗಳಾದ ಮೇಲೆ ಅದನ್ನು ಕೊಡುತ್ತೀರೇನು ? ಈ ವರ್ಷ ಈ ಎಲ್ಲಾ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದರೆ ತಾನೆ ಮುಂದಿನ ನಾಲ್ಕು ವರ್ಷಗಳಲ್ಲಿ ಅದನ್ನೆಲ್ಲ ಮಾಡಲು ಸಾಧ್ಯವಾಗುವುದು ? ಏಕೆ ಇದನ್ನೆಲ್ಲ ಮಾಡಲಿಲ್ಲ ? ನಿಮಗೆ ಮಾಡುವುದಕ್ಕೆ ಆಗದಿದ್ದರೆ, ನಾವು ಮಾಡಲು ಆಗಿಲ್ಲ, 'ನಾವು ಸುಮ್ಮನೆ ಆ ರೀತಿ ಹೇಳಿದ್ದೇವೆ, ಚುನಾವಣಾ ಪ್ರಣಾಳಿಕೆಯನ್ನು ನೋಡಿ ಯಾರೂ ಓಟನ್ನು ಕೊಡುವುದಿಲ್ಲ, ನಿಮ್ಮಗಳ ಕಿತ್ತಾಟದಿಂದ ಜನರು ನಮಗೆ ಓಟನ್ನು ಕೊಟ್ಟಿದ್ದಾರೆ, ಚುನಾವಣಾ ಪ್ರಣಾಳಿಕೆಯಲ್ಲಿ ನಾವೇನು ಹೇಳಿದ್ದೇವೆ ಅದನ್ನು ಕಾರ್ಯಗತಗೊಳಿಸುವುದಿಲ್ಲ' ಎನ್ನತಕ್ಕ ಮಾತನ್ನು ತಾವುಗಳ ಹೇಳಬೇಕು. ಇದನ್ನು ಹೇಳದೆ ಇವತ್ತು ತಾವು ಯಾವ ರೀತಿ ಹೋಗುತ್ತಿದ್ದೀರಿ ಎಂಬುದಕ್ಕೆ ಸಾಕ್ಷಿಯಾಗಿ ಬಳ್ಳಾರಿ ಚುನಾವಣಾ ಸಂದರ್ಭದಲ್ಲಿ ಹೇಳಿದಂತ ಮಾತು ಇದು. ಬಳ್ಳಾರಿ ಜಿಲ್ಲೆಗೆ ಏನು 3200 ಕೋಟಿ ರೂಪಾಯಿಗಳ ಯೋಜನೆ ಪ್ರಕಟಣೆ ಮಾಡಿದ್ದೀರಿ ಅದೆಲ್ಲಿ ಹೋಯಿತು ? 500 ಕೋಟಿ ರೂಪಾಯಿಗಳ ಥವರ್ ಪ್ರಾಜೆಕ್ಟ್‌ಗೆ ಅಡಿಗಲ್ಲನ್ನು ಇಟ್ಟಿರುವುದೊಂದನ್ನು ಬಿಟ್ಟರೆ ಎಲ್ಲಿ ಹೋಯಿತು ಆ 3200 ಕೋಟಿ ರೂಪಾಯಿಗಳ ಯೋಜನೆ ? ಏನಾದರೂ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೀರಾ ?

ಎಲ್ಲಾ ಜಿಲ್ಲೆಗಳಿಗೂ ಒಂದೊಂದು ಪ್ರಾಜೆಕ್ಟ್ ಮಾಡುವುದಾಗಿ ಹೇಳಿದ್ದೀರಿ. ಯಾವ ಜಿಲ್ಲೆಗೆ ಯಾವ ಪ್ರಾಜೆಕ್ಟ್‌ನ್ನು ಮಾಡಿದ್ದೀರಿ ? ಬಳ್ಳಾರಿಗೆ ಮಾನ್ಯ 3200 ಕೋಟಿ ರೂಪಾಯಿಗಳ ಯೋಜನೆ ಬಗ್ಗೆ ಪ್ರಕಟಣೆ ಮಾಡಿದ್ದೀರಿ ಆದರೆ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಬಳ್ಳಾರಿ ಜಿಲ್ಲೆಗೆ ಕೊಟ್ಟಿದ್ದೀರಿ ? ಬಳ್ಳಾರಿ ಜಿಲ್ಲೆಗೆ ಕೊಟ್ಟಿರುವ ವಿಶೇಷವಾದ ಮಹತ್ವವೇನು ? ಎಂಬುದನ್ನು ಈ ರಾಜ್ಯದ ಜನರು ತಿಳಿಯಬಯಸುತ್ತಾರೆ. ಬಳ್ಳಾರಿ ಜಿಲ್ಲೆಯ ಜನತೆಗೆ ಸರ್ಕಾರ ಏನು ಮಾಡಿದೆ ಎಂದು ಜನರು ತಿಳಿಯಬಯಸುತ್ತಾರೆ. ಆದರೂ ಆ ಜಿಲ್ಲೆಯ ಜನರು ಇತ್ತೀಚಿನ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೇ ಓಟನ್ನು ಕೊಟ್ಟಿದ್ದಾರೆ, ಅದು ಬೇರೆ ವಿಚಾರ. ಆದರೆ ತಾವು ಮಾಡಿರವುದೇನು ? ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಇನ್ನು ಹೊಸ ಜಿಲ್ಲೆಗಳ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಹೊಸ ಜಿಲ್ಲೆಯನ್ನು ಮಾಡುವ ವಿಚಾರದಲ್ಲಿ ನಾವು ಒಂದು ಹೆಜ್ಜೆಯನ್ನು ಮುಂದಿಟ್ಟೆವು. ಆದರೆ ಇವತ್ತು ಆ ದಿಕ್ಕಿನಲ್ಲಿ ಯಾವ ಪ್ರಯತ್ನವೂ ಆಗಿಲ್ಲ. ಕೇಂದ್ರ ಸರ್ಕಾರದವರು ಅಕ್ಕಿ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ, ಇದನ್ನು ನಾವು ವಿರೋಧ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಎರಡು ಕಡೆ ಹೇಳಿದ್ದಾರೆ. ಎಲ್ಲರ ಜೊತೆ ಸಮಾಲೋಚನೆ ನಡೆಸಿ ಹಸಿರು ಕಾರ್ಡುಗಳನ್ನು ರದ್ದು ಮಾಡಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಹಸಿರು ಕಾರ್ಡುಗಳು ಅನರ್ಹರಿಗೆ ಹೋಗಿರುವುದು ನಿಜವಾದ ವಿಚಾರ. ಅದು ನಮ್ಮ ಕಾಲದಲ್ಲಿರಬಹುದು, ಈಗ ಇವರ ಕಾಲದಲ್ಲಿ ಇರಬಹುದು. ಅನರ್ಹರಿಗೆ ಅಕ್ಕಿಯನ್ನು ಕೊಡಬೇಕೆಂದು ನಾವು ಹೇಳುವುದಿಲ್ಲ, ಅದಕ್ಕೆ ಎಲ್ಲಾ ಶಾಸಕರ ಸಹಕಾರ ಯಾವಾಗಲೂ ಇರುತ್ತದೆ. ಆದರೆ ಅಂದಾಜು 300 ಕೋಟಿ ರೂಪಾಯಿಗಳ ಈ ಕೊರತೆ ಬಜೆಟ್‌ನಲ್ಲಿ ಇದಕ್ಕಾಗಿ ತಾವು ಇಟ್ಟುಕೊಂಡಿರುವ ಹಣ ಕೇವಲ 300 ಕೋಟಿ ರೂಪಾಯಿಗಳು ಬಡವರಿಗೆ ಅಕ್ಕಿ ವಿತರಣಾ ಕಾರ್ಯಕ್ರಮಕ್ಕಾಗಿ ಕೇವಲ 300 ಕೋಟಿ

ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ ಹಾಗಿದ್ದಮೇಲೆ ತಾವು ನಮ್ಮನ್ನು ಕರೆದು ಸಮಾಲೋಚನೆ ಮಾಡುವುದೇನಿದೆ ? ಇದು ಕೇವಲ ಒಂದು ರೀತಿಯಲ್ಲಿ ಔಪಚಾರಿಕವಷ್ಟೆ ! ಕೇಂದ್ರ ಸರ್ಕಾರವನ್ನು ಬೈಯತಕ್ಕ ಸಂದರ್ಭದಲ್ಲಿ ಹೇಳುವುದೇನೆಂದರೆ, ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ನ್ಯಾಯವನ್ನು ಒದಗಿಸಿದೆಯೆಂದು ನಾನು ಹೇಳುವುದಿಲ್ಲ. ರೈಲ್ವೆ ವಿಚಾರದಲ್ಲಿ ಕರ್ನಾಟಕಕ್ಕೆ ಕೇಂದ್ರದಿಂದ ಅನ್ಯಾಯವಾಗಿದೆ, ಈ ನುಸಿರೋಗದ ವಿಚಾರದಲ್ಲಿಯೂ ಸಹ ಕೇಂದ್ರ ಸರ್ಕಾರದವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಇದರಿಂದಲೂ ಸಹ ಅನ್ಯಾಯವಾಗಿದೆ. ಇದರ ಬಗ್ಗೆ ನಾವು ತಮ್ಮ ಜೊತೆ ಬಂದು ಪ್ರತಿಭಟನೆ ಮಾಡುತ್ತೇವೆ. ಆದರೆ ತಾವು ಮಾಡಿರುವುದೇನು ? ಇವೆಲ್ಲದರ ಬಗ್ಗೆ ಕೋ-ಆರ್ಡಿನೇಟ್ ಮಾಡಲು ಒಬ್ಬ ಹಿರಿಯ ಸಚಿವರನ್ನು ದೆಹಲಿಯಲ್ಲಿ ನೇಮಕ ಮಾಡಲು ನಿಮ್ಮಿಂದ ಇದುವರೆಗೆ ಸಾಧ್ಯವಾಗಿಲ್ಲ. ಅಲ್ಲಿಲ್ಲ ಬ್ಯೂರೊಕ್ರಾಟ್ಸ್ ಎಲ್ಲವನ್ನೂ ಹಾಳು ಮಾಡುತ್ತಿದ್ದಾರೆ. ದೆಹಲಿಯಲ್ಲಿ ಒಬ್ಬರು ಹಿರಿಯ ಸಚಿವರನ್ನು ಇದರ ಬಗ್ಗೆ ಕೋ-ಆಡಿನೇಟ್ ಆಗಿ ನೇಮಕ ಮಾಡಲು ಆಗಲಿಲ್ಲವೆ ? ನಮ್ಮ ಸರ್ಕಾರದ ಅವಧಿಯಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಲು ಒಬ್ಬರು ರೆಪ್ರಸೆಂಟೆಟೀವ್‌ನ್ನು ನಾವು ನೇಮಕ ಮಾಡಿದ್ದೆವು. ತಾವು ಈಗ ಯಾರನ್ನಾದರೂ ನೇಮಕ ಮಾಡಿ. ಅದರ ಬಗ್ಗೆ ನಾನು ಸಲಹೆ ಮಾಡಲು ಹೋಗುವುದಿಲ್ಲ. ಆದರೆ ಆ ರೀತಿ ಮಾಡುವುದಕ್ಕೇನು ತೊಂದರೆ ? ಇದೇ ನಮಗೆ ಅರ್ಥವಾಗುತ್ತಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬರಬೇಕು ಎಂದು ಹೇಳುತ್ತೀರಿ, ಆದರೆ ಇದರ ಬಗ್ಗೆ ಕೋ-ಆರ್ಡಿನೇಟ್ ಆಗಿ ಒಬ್ಬರನ್ನು ನೇಮಕ ಮಾಡಲು ನಿಮಗಾಗಿರುವ ತೊಂದರೆ ಏನು ? Not as single pie has been given to the people, in the name of whom you have come to power.

ಅಧಿಕಾರಕ್ಕೆ ಬಂದ ಹೊಸದರಲ್ಲಿ ನೀವು ಕೆ.ಎಸ್.ಆರ್.ಟಿ.ಸಿ. ಬಸ್ ದರಗಳನ್ನು ಹೆಚ್ಚಳ ಮಾಡಿಬಿಟ್ಟಿರಿ. ಈಗ ಮತ್ತೆ ಆಂತರಿಕವಾಗಿ ಬೆಲೆ ಹೆಚ್ಚಳ ಮಾಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಕೆ.ಎಸ್.ಆರ್.ಟಿ.ಸಿ. ಬಗ್ಗೆ ಕೆಲವು ಕ್ರಮಗಳನ್ನು ಈ ಸರ್ಕಾರದವರು ತೆಗೆದುಕೊಂಡಿದ್ದಾರೆ. ಕಳೆದ ಎರಡು, ಮೂರು ತಿಂಗಳಿನಲ್ಲಿ ತಾವು ತೆಗೆದುಕೊಂಡಿರುವ ನಿರ್ಧಾರದಿಂದ ಈ ಕೆ.ಎಸ್.ಆರ್.ಟಿ.ಸಿ. ಒಂದು ಹದ್ದುಬಸ್ತಿಗೆ ಬಂದಿದೆಯೆಂದು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಆದರೆ ಕೆ.ಎಸ್.ಆರ್.ಟಿ.ಸಿ. ಸರ್ವನಾಶವಾಗತಕ್ಕ ದಿಕ್ಕಿನಲ್ಲಿ ಹೋಗಲು ಪ್ರಾರಂಭವಾಗಿದೆ. Your Advisors have not been properly advising you. ಕೆ.ಎಸ್.ಆರ್.ಟಿ.ಸಿ. ಇನ್ನು ಆರು ತಿಂಗಳುಗಳ ಒಳಗಾಗಿ ಅಲ್ಲಿ ಕ್ಯಾನ್ಸಲೇಷನ್ ಜಾಸ್ತಿಯಾಗಿ, ಫೈನಾನ್ಸಿಯಲ್ ರಿಯಲೈಜೇಷನ್ ಕಡಿಮೆಯಾಗಿ ಈ ವರ್ಷ ಕನಿಷ್ಠ ಪಕ್ಷ 100 ರಿಂದ 150 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತದೆ. ತಾವು ತೆಗೆದುಕೊಳ್ಳುತ್ತಿರುವ ಕಾರ್ಯಕ್ರಮದಿಂದ ಏನಾಗುತ್ತದೆ ಎಂಬುದನ್ನು ತಾವು ನೋಡುತ್ತೀರಿ. ಅಧಿಕಾರಿಗಳನ್ನು ಹೊಗಳುವುದರಲ್ಲಿ ತಪ್ಪಿಲ್ಲ. ನಮ್ಮ ಸರ್ಕಾರವಿದ್ದಾಗ ಮಾನ್ಯ ಕೇದಾರರವರು ಮತ್ತು ಮುಖ್ಯ ಕಾರ್ಯದರ್ಶಿಯವರ ನಾಯಕತ್ವದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ಮತ್ತು ಸರ್ಕಾರದ ಹೊರೆಯನ್ನು ಕಡಿಮೆ ಮಾಡುವ ದೃಷ್ಟಿಯಲ್ಲಿ ಸಲಹೆಯನ್ನು ನೀಡಲು ಸಮಿತಿ ಮಾಡಿದ್ದೆವು. ನಮ್ಮ ಅಧಿಕಾರಿಗಳು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಯಾವ್ಯಾವ ಇಲಾಖೆಗಳಲ್ಲಿ ಹುದ್ದೆ ಖಾಲಿ ಇದೆ ಅದನ್ನು ಪತ್ತೆ ಮಾಡಿದ್ದಾರೆ. ವಿಲ್‌ಫುಲಿ, ಪರ್‌ಪಸ್‌ಫುಲಿ ಆ ಹುದ್ದೆಗಳನ್ನು ನಾವು ತುಂಬಲಿಲ್ಲ. ಏಕೆ ಎಂಬುದು ತಮಗೆ ಗೊತ್ತಿದೆ.

10.40 ಎ.ಎಂ.

ಏಕೆಂದರೆ ತಮಗೆ ಗೊತ್ತಿರುವಂತೆ ಆ ನಿಟ್ಟಿನಲ್ಲಿ ಇಟ್ಟಿರುವ ಹೆಜ್ಜೆ ಬಹಳ ದೊಡ್ಡದೇನಲ್ಲ. ಆದರೆ ಈ ಬಗ್ಗೆ ನಿಮಗೆ ಇಚ್ಛಾಶಕ್ತಿ ಬೇಕಾಗುತ್ತದೆ. ಯೋಜನೇತರ ವೆಚ್ಚವನ್ನು ಕಡಿಮೆಗೊಳಿಸಬೇಕಾದರೆ ಮೊದಲು ಈ ಕಾರ್ಯ ಮಾನ್ಯ ರಾಜ್ಯಪಾಲರಿಂದ ಪ್ರಾರಂಭವಾಗಬೇಕು. ಇವೊತ್ತು ಮಹಾರಾಷ್ಟ್ರದ XXX ಅವರ ಕಛೇರಿಯಲ್ಲಿದ್ದ ನಾಲ್ಕು ಜನ ಅಧಿಕಾರಿಗಳನ್ನು ಸರೆಂಡರ್ ಮಾಡಿದ್ದಾರೆ. ಮೊದಲು ಈ ಕೆಲಸವಾಗಬೇಕು. ಈ ಕೆಲಸ ಮುಖ್ಯಮಂತ್ರಿಗಳಿಂದ, ಮಂತ್ರಿಗಳಿಂದ ಮತ್ತು ಶಾಸಕರುಗಳಿಂದಲೂ ಆಗಬೇಕಾಗುತ್ತದೆ. ಇವೊತ್ತು ಸರ್ಕಾರಿ ಅಧಿಕಾರಿಗಳ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಾನು ಒಂದು ಹೆಜ್ಜೆ ಮುಂದೆ ಹೋಗಲು ಬಯಸುತ್ತೇನೆ. ನಾವು ಎಲ್ಲಾದರೂ ಒಂದು ಕಡೆ ವೇಜ್ ಫ್ರೀಜ್ ಮಾಡುವುದಕ್ಕೆ ಆಗದೇ ಹೋದರೆ ಸರ್ಕಾರಗಳು ಬರೀ ನಾಮಕಾವಸ್ತೆ ಸರ್ಕಾರಗಳಾಗುತ್ತವೆಯೇ ಹೊರತು ಇಲ್ಲದೇ ಹೋದರೆ ನಾವು-ನೀವು ಏನೂ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಾವೆಲ್ಲ ಒಂದು ಚಿಂತನೆ ಮಾಡಬೇಕು. ನೀವು ಈ ಕುರಿತು ಒಂದು ಟಾಸ್ಕ್‌ಫೋರ್ಸ್ ಮಾಡಿ ನಮ್ಮನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಿ ಮತ್ತು ಇದರ ಬಗ್ಗೆ ಯಾರೂ ಕೂಡ ಅಜಿಟೇಶನ್ ಮಾಡದಂತೆ ನೋಡಿಕೊಳ್ಳಿ. ಇವೊತ್ತು ಸಾರ್ವಜನಿಕ ವಲಯದ ಉದ್ದಿಮೆಗಳು ಹಾಳಾಗುವುದಕ್ಕೆ ಇದೇ ಕಾರಣ. ಅವರು ಕೇಳಿದಷ್ಟು ಸಂಬಳ ಕೊಡಬೇಕು. ನಾನು ಯಾವುದೇ ನೌಕರರುಗಳ ವಿರುದ್ಧ ಸಹ ಇಲ್ಲ. ನಾವು ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಎಂಪ್ಲಾಯಿಸ್ ಸಂಘದವರು ಬಂದು ನಮಗೆ ಹಾರ ಹಾಕಿದ್ದಾರೆ. ಅದೇ ರೀತಿ ನೀವು ಈಗ ಅಧಿಕಾರದಲ್ಲಿರುವುದರಿಂದ ನಿಮ್ಮನ್ನೂ ಸಹ ಕರೆದುಕೊಂಡು ಹೋಗಿ ಪೇಟಗಳನ್ನು ತೊಡಿಸಿ ಹಾರ ಹಾಕಿ ಸನ್ಮಾನ ಮಾಡುತ್ತಾರೆ. ಅದನ್ನು ನೀವು ಮಾಡಿಸಿಕೊಳ್ಳಬೇಕು, ಅದು ಸೌಜನ್ಯದ ಪ್ರತೀಕ, ಅವರು ನಮ್ಮವರೇ ಆಗಿದ್ದಾರೆ. ಆದರೆ, ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ತಾವು ಈ ಕುರಿತು ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಾ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬಯಸಲು ಇಚ್ಛಿಸುತ್ತಿರುವುದೇನೆಂದರೆ, ಒರಿಸ್ಸಾದಲ್ಲಿ ಸೈಕ್ಲೋನ್ ಉಂಟಾಯಿತು. ಆಗ ಪರಿಹಾರವಾಗಿ ನಮ್ಮ ರಾಜ್ಯದಿಂದ ಎಷ್ಟು ಹಣವನ್ನು ಕಳುಹಿಸಿದ್ದೀರಿ ? ಸರ್ಕಾರಿ ನೌಕರರುಗಳು ಕೊಟ್ಟಂಥ ಹಣವೆಷ್ಟು? ಎಷ್ಟು ಹಣ ಈಗಾಗಲೇ ಹೋಗಿದೆ? ಎಷ್ಟು ಹಣ ಹೋಗಿಲ್ಲ? ಇವೊತ್ತು ನೀವು ಅಲ್ಲೊಂದು ಡಿಸ್ಟ್ರಿಕ್ಟ್ ಅನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಅಡಾಪ್ಟ್ ಮಾಡಿಕೊಂಡಿದ್ದೀರಿ. ಈಗ ಅಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಅದನ್ನು ನೀವು ಇನ್ನೂ ಕಂಟಿನ್ಯೂ ಮಾಡುತ್ತಿದ್ದೀರಾ ? ಆ ಕೆಲಸವನ್ನು ಕಂಟಿನ್ಯೂ ಮಾಡಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಸೈಕ್ಲೋನ್ ಸಂದರ್ಭದಲ್ಲಿ ಅಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ಜನರು ಸತ್ತಿದ್ದು, 8-10 ಲಕ್ಷದಷ್ಟು ಜನರು ಮನೆ-ಮಠ ಕಳೆದುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ತಾವೇನು ಮಾಡಿದ್ದೀರಿ ? ಪರಿಹಾರವಾಗಿ ಕಳುಹಿಸಿರುವ ಹಣ ಅಲ್ಲಿ ದುರುಪಯೋಗವಾಗಿಲ್ಲವೇ? ನಿಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಸರಿಯಾಗಿ ನೋಡಿದ್ದಾರೆಯೇ ? ನೋಡಿದ್ದರೆ ಅದರ ವಿವರಗಳನ್ನು ಕೊಡಬೇಕು. ಇನ್ನು ಲೀಕೇಜಸ್ ಅನ್ನು ಪ್ಲಗ್ ಮಾಡುವ ಕುರಿತು ಹೇಳುವುದಾದರೆ ಈ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ. ಲೀಕೇಜಸ್ ಅನ್ನು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ, ಸೇಲ್ಸ್ ಟ್ಯಾಕ್ಸ್‌ನಲ್ಲಿ ಪ್ಲಗ್ ಮಾಡಬೇಕಾದರೆ ಪೊಲಿಟಿಕಲ್ ವಿಲ್ ಬೇಕಾಗುತ್ತದೆ. ಹಣಕಾಸು ಖಾತೆಯನ್ನು ನಿಮ್ಮ ಬಳಿ ನೀವು ಇಟ್ಟುಕೊಳ್ಳಬಾರದು. ನಿಮ್ಮ ಸಹೋದ್ಯೋಗಿಗಳಿಗೆ ಹಂಚಬೇಕು. ಫೈನಾನ್ಸ್, ಪವರ್, ಇಂಟೆಲಿಜೆನ್ಸ್, ಬೆಂಗಳೂರು ಡೆವಲಪ್‌ಮೆಂಟ್, ಎಕ್ಸೈಸ್ ಹೀಗೆ ಎಲ್ಲಾ ಖಾತೆಗಳನ್ನು ನೀವೇ ಇಟ್ಟುಕೊಳ್ಳುವುದಾದರೆ ಈ ಆಯವ್ಯಯ ಸಾಮೂಹಿಕ

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ನಾಯಕತ್ವದ ಚಿಂತನೆಯ ಚಿಲುಮೆ ಹೇಗಾಗುತ್ತದೆ ? ಎಂಬುದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯಕ್ಕೆ ತಿಳಿಸಬೇಕೆಂದು ನಾನು ಕೇಳುತ್ತೇನೆ. ಬಡವರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದವರಿಗೆ, ಪರಿಶಿಷ್ಟ, ಜಾತಿಯವರಿಗೆ ಮತ್ತು ಚುನಾವಣಾ ಪೂರ್ವ ನೀವೇ ಹೊರಡಿಸಿರುವ ಪ್ರಣಾಳಿಕೆಗೆ ಪಂಗನಾಮ ಹಾಕಿದ್ದೀರಿ. ಇನ್ನು ನೀವು ಮಾಡಿರುವುದಾದರೂ ಏನೆಂದು ನನಗರ್ಥವಾಗುತ್ತಿಲ್ಲ. ಈ ಆಯವ್ಯಯದಲ್ಲಿ ಪಂಗನಾಮಗಳನ್ನು ಹಾಕುವುದರಲ್ಲಿ ತಾವು ಪ್ರಸಿದ್ಧರಾಗಿದ್ದೀರಿ ಏಕೆ ಸ್ವಾಮಿ, ನಿಮ್ಮ ಮಂತ್ರಿಗಳನ್ನು ನೀವು ಕಾನ್ ಫಿಡೆನ್ಸ್‌ಗೆ ತೆಗೆದುಕೊಳ್ಳಬಾರದು ? They are all senior Ministers. ವಿದೇಶದಲ್ಲಿ ಓದಿ ಬಂದಿರುವಂಥ ಮಂತ್ರಿಗಳಿದ್ದಾರೆ. You do not want to take them into confidence. ವಿರೋಧ ಪಕ್ಷಗಳನ್ನು ನೀವು ಒಡೆದು ಸ್ವತಂತ್ರ ಅಭ್ಯರ್ಥಿಯಾಗಿ ನಿಂತು ಗೆದ್ದು ಬಂದಿರತಕ್ಕಂಥ ಶಾಸಕರುಗಳನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವಂತಾದ್ದರಲ್ಲಿ ಯಾವ ಚುರವೇಗವನ್ನು ಪ್ರದರ್ಶಿಸಿದ್ದೀರೋ, ಅಷ್ಟೇ ವೇಗವನ್ನು ಬಡವರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಏಕೆ ತೋರಿಸಲಿಲ್ಲ ? ಆದುದರಿಂದ, ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಬಹಳ ಗಂಭೀರವಾಗಿ ಯೋಚಿಸಬೇಕು. ಅಧಿವೇಶನದ ಪ್ರಾರಂಭದಲ್ಲಿ ನಾನು ಒಂದು ಮಾತನ್ನು ಹೇಳಿದೆ. This Government is a Plane, which will crash during take off itself.

ನಾವು ಇಬ್ಬರು ರಾಜ್ಯಪಾಲರುಗಳ ಭಾಷಣಗಳನ್ನು ಕೇಳಿದೆವು. ಅದರಲ್ಲಿ ನೀತಿ ಸಂಹಿತೆ ಮತ್ತು ಕಾರ್ಯಕ್ರಮಗಳೆಲ್ಲವನ್ನೂ ಹೇಳಿದ್ದು ಆಯಿತು ಹಾಗೂ ಬಜೆಟ್ ಅನ್ನು ಸಹ ನೋಡಿದ್ದಾಯಿತು. ಈ ಮುಖ್ಯಮಂತ್ರಿಗಳ ಬಗ್ಗೆ ಇನ್ನು ಏನು ಆಸೆ ಇಟ್ಟುಕೊಳ್ಳೋಣ ? ನಿಜ, ಇವೊತ್ತು ನಾವು ಈ ಕಡೆಯಿಂದ ಆ ಕಡೆಗೆ ಜಂಪ್ ಮಾಡಿ ಅಧಿಕಾರಕ್ಕೆ ಬರುವುದಕ್ಕಾಗುವುದಿಲ್ಲ. ಮೂಗಿಗಿಂಥ ಮೂಗುತಿ ಭಾರ ! ಇವರನ್ನೆಲ್ಲಾ ಇಲ್ಲಿ ಸೇರಿಸಿಕೊಂಡು ಏನು ಸ್ವಾಗತಿಸಿದ್ದೀರಿ, ಇದನ್ನು ಯಾವ ಉದ್ದೇಶದಿಂದ ಮಾಡಿದ್ದೀರಿ? ಅವರು ನಿಮ್ಮ ಜೊತೆ ನಿಜವಾಗಿಯೂ ಇದ್ದಾರೆಯೇ ? ಇಲ್ಲವೇ ? ಎಂಬ ಬಗ್ಗೆ ವಿಚಾರಣೆ ಮಾಡುವುದಾಗಿ ನೀವೇ ಹೇಳಿಕೆಯನ್ನು ಸಹ ಕೊಟ್ಟಿದ್ದೀರಿ. ಇವೊತ್ತು ವಿರೋಧ ಪಕ್ಷದವರಾದ ನಮಗೆ ಜವಾಬ್ದಾರಿ ಇದೆ, ನಾವು ಬೇಜವಾಬ್ದಾರಿಯಿಂದ ಮಾತನಾಡುವುದಿಲ್ಲ. ತಾವು ಯೋಜನೇತರ ವೆಚ್ಚವನ್ನು ಕಡಿತಗೊಳಿಸುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳುತ್ತೀರೋ ಅದಕ್ಕೆ ನಮ್ಮ ಎಲ್ಲಾ ರೀತಿಯ ಸಹಕಾರಗಳನ್ನು ಕೊಡುತ್ತೇವೆ. ನಮಗೆ ಗೊತ್ತಿದೆ, ಆಡಳಿತ ಪಕ್ಷದಲ್ಲಿರುವ ಸದಸ್ಯರುಗಳ ಶಕ್ತಿಯ ಆಧಾರದ ಮೇಲೆಯೇ ತಾವು ಆ (ಮುಖ್ಯಮಂತ್ರಿ) ಸ್ಥಾನದಲ್ಲಿ ಕುಳಿತುಕೊಳ್ಳುವುದು. ಆದುದರಿಂದ, ಅವರ ಮಾತಿಗೂ ನೀವು ಗೌರವ ಕೊಡಬೇಕಾಗುತ್ತದೆ. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆಯನ್ನು ಪಾಸ್ ಮಾಡಿಸಿಕೊಳ್ಳುತ್ತಿದ್ದೀರೆಂಬುದು ನಮಗೆ ಗೊತ್ತಿದೆ, ಮಾಡಿಕೊಳ್ಳಿ, ಅದರ ಬಗ್ಗೆ ನಮ್ಮ ತಕರಾರು ಏನೂ ಇಲ್ಲ. ಆದರೆ, ಅದು ನಿಮ್ಮ ಕೊರಳಿಗೆ ಕುತ್ತಾಗುತ್ತದೆಂಬ ಅಂಶವನ್ನು ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಆಯವ್ಯಯ ಪತ್ರದ ಬಗ್ಗೆ ವಿಶೇಷವಾಗಿ ಹೇಳುವಂತಾದ್ದು ಏನೂ ಸಹ ಇಲ್ಲ. ಬಹುಶಃ ಸಮಯಾಭಾವ ಇದೆಯೆಂದು, ಆರು ತಿಂಗಳ ಸಮಯ ಸಾಕಾಗಲಿಲ್ಲವೆಂದು ನನಗನ್ನಿಸುತ್ತದೆ. ಮುಂದಿನ ದಿವಸಗಳಲ್ಲಾದರೂ ಮಾನ್ಯ ಮುಖ್ಯಮಂತ್ರಿಗಳು ಸದನದ ಈ ಕಡೆಯಲ್ಲಿರುವ ಸದಸ್ಯರುಗಳು ಮಾತನಾಡುತ್ತಾ ಏನು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಆ ಭಾವನೆಗಳ ವಿಚಾರದಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ ಇವೊತ್ತು ರೈತರಿಗೆ ಏನು ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೀರಿ. ತಾವು ದಯವಿಟ್ಟು

ಬೇಸರಪಟ್ಟುಕೊಳ್ಳಬಾರದು. ನಮ್ಮ ರೈತರು ಏಲಕ್ಕಿ , ಲವಂಗ ಮತ್ತು ಕಾಫಿ ಪದಾರ್ಥಗಳನ್ನಷ್ಟೇ ಎಕ್ಸ್‌ಪೋರ್ಟ್ ಮಾಡದೇ ಫ್ರೂಟ್ ಪಲ್ಪ್, ದ್ರಾಕ್ಷಿ, ದಾಳಿಂಬೆ ಮುಂತಾದ ಬೇಕಾದಷ್ಟು ಪದಾರ್ಥಗಳನ್ನು ವಿದೇಶಕ್ಕೆ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ ಅಲ್ಲದೆ ಈರುಳ್ಳಿ, ಅಡಿಕೆ ಪದಾರ್ಥಗಳು ಸಹ ಬೆಂಗಳೂರು, ಕೋಲಾರ, ತುಮಕೂರು ಮತ್ತು ಬಿಜಾಪುರ ಜಿಲ್ಲೆಗಳಿಂದ ಮುಂಬಯಿ ಮೂಲಕ ವಿದೇಶಕ್ಕೆ ರಫ್ತಾಗುತ್ತಿವೆ. ಇದಕ್ಕೆ ನೀವು ಟ್ಯಾಕ್ಸ್ ಎಕ್ಸ್‌ಂಪ್‌ಷನ್ ಅನ್ನು ಏಕೆ ಕೊಡಬಾರದಾಗಿತ್ತು ?

ಶ್ರೀ ಎಸ್.ಎಂ.ಕೃಷ್ಣ : ನಾನು ಅದನ್ನು ಸೇರಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಅದನ್ನು ಸೇರಿಸಿ, ಬಹಳ ಒಳ್ಳೆಯದು. ನಾನು ತಿಳಿಸಿರುವ ಕೆಲವು ಸಲಹೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಅದೇ ರೀತಿ ರೈತರಿಗೆ ಸಂಬಂಧಿಸಿದಂತೆ 2-3 ವಿಚಾರಗಳನ್ನು ಹೇಳಿದ್ದೀರಿ, ಅದು ಸಾಲದು. ಅದನ್ನು ಇನ್ನು ಹೆಚ್ಚಿಗೆ ಮಾಡಬೇಕು ರೈತರ ಅನುಕೂಲತೆ ಬಗ್ಗೆ ನಾವು ಹೇಳಬಹುದಾಗಿತ್ತು, ಆದರೆ, ದುಡ್ಡಿಲ್ಲ. ಇದು ಸಾಲಕ್ಕೆ ಒಂದು ಅಪ್ಲಿಕೇಶನ್ ಇದ್ದಂತಿದೆ. This is like an application for loan to the World Bank, ADB and what not ? ಆದುದರಿಂದ, ತಾವು ಅನುಭವಸ್ಥರಿದ್ದೀರಿ, ತಾವು ಒಳ್ಳೆಯ, ಯಶಸ್ವಿ ಮುಖ್ಯಮಂತ್ರಿಗಳಾಗಬೇಕೆಂಬುದೇ ನಮ್ಮ ಹಾರೈಕೆ. ಆದರೆ, ಈ ನಿಟ್ಟಿನಲ್ಲಿ ತಾವು ಮಂಡಿಸಿರುವ ಆಯವ್ಯಯ ಪತ್ರದಲ್ಲಿ ತಮ್ಮ ಸಮರ್ಥ ಸಹೋದ್ಯೋಗಿಗಳ ಚಿಂತನೆ ಇಲ್ಲ ಬಂಡವಾಳವೂ ಇಲ್ಲವೆನ್ನುವ ಮಾತನ್ನು ಹೇಳಿ ಬಂಡವಾಳ ಕ್ರೋಢೀಕರಿಸಿಕೊಳ್ಳಲು ತಾವು ಫ್ಯಾಟ್ ಅನ್ನು ಕಡಿಮೆ ಮಾಡಬೇಕು. ನಿರ್ದಿಷ್ಟವಾಗಿ ಹಿರಿಯ ಸರ್ಕಾರಿ ಅಧಿಕಾರಿಗಳ ಬಗ್ಗೆ ಹೇಳುವುದಾದರೆ, ಅವರು ಏನು ಮಾಡುತ್ತಾರೆಂದರೆ ಮಾತೆತ್ತಿದರೆ ಟಾಸ್ಕ್‌ಫೋರ್ಸ್ ಕಮಿಟಿ ಮಾಡಿ ಎಂದು ಹೇಳುತ್ತಾರೆ. ಎರಡನೆಯದಾಗಿ, they are not prepared to redeuce the number of their officers.

ನಮ್ಮ ರಾಜ್ಯದಲ್ಲಿರುವ ಬಹಳಷ್ಟು ಅಡಿಷನಲ್ ಚೀಫ್ ಸೆಕ್ರೆಟರಿಗಳು ಪ್ರೆಷರ್ ತೆಗೆದುಕೊಂಡು ಬರುತ್ತಾರೆ. ನಮ್ಮ ಕಾಲದಲ್ಲೂ ಅದೇ ಆಗಿದ್ದು. ಅವರು ಪರಿಸ್ಥಿತಿಯನ್ನು ಯಾವ ತರಹ ಸೃಷ್ಟಿಸುತ್ತಾರೆಂದರೆ ಇಂತಹವರನ್ನು ಅಡಿಷನಲ್ ಚೀಫ್ ಸೆಕ್ರೆಟರಿಯನ್ನಾಗಿ ಮಾಡದೇ ಹೋದರೆ ಈ ಸರ್ಕಾರ ನಾಳೆಯೇ ಉರುಳಿ ಹೋಗುತ್ತದೆನ್ನುವ ಮಟ್ಟಕ್ಕೆ ತೆಗೆದುಕೊಂಡು ಬರುತ್ತಾರೆ. ಗೃಹ, ವೈದ್ಯಕೀಯ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳನ್ನು ಹೊರತುಪಡಿಸಿ ಇತರ ಬೇರೆ ಇಲಾಖೆಗಳಲ್ಲಿ ಅನಗತ್ಯವಾಗಿರುವ ಹುದ್ದೆಗಳನ್ನೆಲ್ಲಾ ಬ್ಯಾನ್ ಮಾಡುವಂತಾದ್ದು ಇದೆ. ಕರ್ನಾಟಕಕ್ಕೆ ಒಳ್ಳೆಯ ಬ್ಯೂರೋಕ್ರಸಿ ಇದೆ. ಆದರೆ ಈ ಅಧಿಕಾರಿಗಳ ಸಹಾಯದಿಂದಲೇ ನಾವು ರಿಪೋರ್ಟ್ ತಯಾರಿಸಿ, ಅದನ್ನು ಇಂಪ್ಲಿಮೆಂಟ್ ಮಾಡುವ ಹಂತಕ್ಕೆ ಬಂದಾಗ ಇವರೇ ನಮಗೆ ಕಡಿವಾಣ ಹಾಕಿ ಬಾಯಿ ಮುಚ್ಚಿಸುತ್ತಾರೆ. ಅಂತಹ ಪರಿಸ್ಥಿತಿಯನ್ನು ಸೃಷ್ಟಿಸುತ್ತಾರೆ. ಆದಕಾರಣ, ಮಾನ್ಯ ಮುಖ್ಯಮಂತ್ರಿಗಳು ಒಂದು ಕೆಲಸ ಮಾಡಬೇಕಿರುವುದೇನೆಂದರೆ, ಅಡಿಷನಲ್ ಚೀಫ್ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಸೆಕ್ರೆಟರಿಗಳು, ಎ.ಡಿ.ಜಿ.ಪಿ. ಮತ್ತು ಐ.ಜಿ.ಪಿ.ಗಳು ಇವರ ಕೆಲಸ-ಕಾರ್ಯಗಳೇನು ? ಅಕೌಂಟಬಿಲಿಟಿ ಏನು ? ಇವರುಗಳ ಆಪ್ತ ಸಹಾಯಕರುಗಳು ಏನು ಮಾಡುತ್ತಾರೆ ? ಎಂಬ ಬಗ್ಗೆ ವಿಚಾರ ಮಾಡಬೇಕು. ನನಗಾಗಿರುವ ಅನುಭವದ ಮಾತುಗಳನ್ನು ಹೇಳುತ್ತೇನೆ. ಇದರ ಬಗ್ಗೆ ನಾನು ಟೀಕಿಸುತ್ತಿಲ್ಲ. ಪಿ.ಎ.ಗಳಾದವರು ಡಿಕ್ಟೇಷನ್ ತೆಗೆದುಕೊಳ್ಳದೇ ಏನು ಲೆಟರ್ ಇನ್ನು ಟೈಪ್ಸ್ ಮಾಡುತ್ತಾರೆ. ಅದು ಸರಿ ಇದೆಯೇ ಎಂದು ಕೇಳುತ್ತಾರೆ. ಸರಿ ಇದೆಯೆಂದರೆ

ಆದಕ್ಕೆ ಸಹಿ ಮಾಡಿ ಕಳುಹಿಸುತ್ತಾರೆ. ಆ ಸ್ಥಿತಿಗೆ ಇವೊತ್ತು ನಾವು ಬಂದಿದ್ದೇವೆ. ದಿವಂಗತ ಕೆಂಗಲ್‌ಹನುಮಂತಯ್ಯನವರು ನಮಗೆ ಆದರ್ಶವಾದ ಆಡಳಿತಗಾರರಾಗಿದ್ದಾರೆ. ತಾವೂ ಸಹ ಅವರೊಂದಿಗೆ ಕೆಲಸ ಮಾಡಿರುವ ಅನುಭವವಿದೆ. ತಮಗೆ ಕೇಂದ್ರ ಸರ್ಕಾರದಲ್ಲೂ ಆಡಳಿತ ನಡೆಸಿದ ಅನುಭವವಿದೆ. ಆದುದರಿಂದ, ಇಲ್ಲಿ ಅಕೌಂಟಬಿಲಿಟಿ ಹೇಗೆ ತರುವುದು ? ಇವರು ಕೆಲಸ ಮಾಡುತ್ತಾರೆಯೇ ? ಇಲ್ಲವೇ ? ಕೆಲಸ ಮಾಡದಿದ್ದರೆ ಏನು ಕ್ರಮ ಕೈಗೊಳ್ಳುವುದು ? ಯಾರೂ ಸಹ ಬೆಂಗಳೂರು ಬಿಟ್ಟು ಹೋಗಲು ತಯಾರಿಲ್ಲ. ಪ್ರಮೋಟಿ ಆದ ಕೆಲವು ಕೆ.ಎ.ಎಸ್. ಅಧಿಕಾರಿಗಳನ್ನು ಡಿ.ಸಿ.ಯಾಗಿ ಕಳುಹಿಸಿಬಿಡುತ್ತಿದ್ದೇವೆ. ನೇರವಾಗಿ ಐ.ಪಿ.ಎಸ್. ಅಧಿಕಾರಿಗಳು ಸಿಗುವುದಿಲ್ಲವೆನ್ನುವ ಕಾರಣಕ್ಕೆ ಪ್ರಮೋಟೆಡ್ ಕೆ.ಪಿ.ಎಸ್. ಅಧಿಕಾರಿಗಳನ್ನು ನಾವು ಕಳುಹಿಸುತ್ತೇವೆ. ಬೀದರ್‌ಗೋ ಬೆಳಗಾಂಗೋ ಕಳುಹಿಸಿಕೊಟ್ಟರೆ ಅಲ್ಲಿಗೆ ಹೋಗುವುದೆಂದರೆ ದೊಡ್ಡ ಶಾಪವಿದ್ದಂತೆ ಎಂದು ಅವರು ತಿಳಿದುಕೊಂಡಿದ್ದಾರೆ.

ಈ ಎರಡು ಮೂರು ವಿಚಾರಗಳಲ್ಲಿ ವಿರೋಧ ಪಕ್ಷದ ಸದಸ್ಯರು ನಿಮಗೆ ಎಲ್ಲ ಸಹಕಾರವನ್ನು ಕೊಡುತ್ತಾರೆ. ಆಯವ್ಯಯದ ಬಗ್ಗೆ ಎಲ್ಲಾ ಇಲಾಖೆಗಳ ಬಗ್ಗೆ ಮಂಥನ-ಚಿಂತನೆ ಆಗಬೇಕಾದ ಅವಶ್ಯಕತೆ ಇದೆ. ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ತಮ್ಮ ಸಲಹೆಯನ್ನು ಸಹ ಸರ್ಕಾರ ತೆಗೆದುಕೊಂಡರೆ ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ಬಹಳ ಒಳ್ಳೆಯದಾಗುತ್ತದೆ ಎಂದು ನನಗನ್ನಿಸುತ್ತದೆ. ಏಕೋ ಅರು ಸಲಹೆ ಕೇಳುತ್ತಿಲ್ಲ. ಈ ವಿಧಾನಸಭೆ ಅಧಿವೇಶನವನ್ನು ಇನ್ನು ಎಂಟು ದಿನ ಮುಂಚಿತವಾಗಿ ಕರೆದಿದ್ದರೆ ನಾವೂ ಸಹಿತ ಆಯವ್ಯಯದ ಬಗ್ಗೆ ಚೆನ್ನಾಗಿ ಚರ್ಚೆ ಮಾಡಬಹುದಿತ್ತು. ನಿನ್ನೆ ವರೆಗೆ ರಾಜ್ಯಸಭಾ ಚುನಾವಣೆ ಇತ್ತು. ದಿಢೀರಾಗಿ ಪಂಚಾಯತಿ ಆ್ಯಕ್ಟ್ ತಂದಿದ್ದೀರಿ. ಈಗ ಮಂಡನೆಯಾಗಿರುವ ಆಯವ್ಯಯದ ಬಗ್ಗೆ ನಾವು ಸಾಕಷ್ಟು ಚಿಂತನೆ ಮಾಡಲಿಲ್ಲ. ಇನ್ನೂ ಇಲಾಖಾವಾರು ಚರ್ಚೆಯಾಗಬೇಕು. ಏಪ್ರಿಲ್ 10ನೇ ತಾರೀಕಿಗೆ ಮತ್ತೆ ಸಭೆ ಸೇರುತ್ತೇವೆಂದು ಹೇಳಿದ್ದೀರಿ, ಆಗ ಇಲಾಖಾವಾರು ಚರ್ಚೆಯಾಗಬೇಕು. ಏಕೆಂದರೆ ಈ ಕಡೆ ಕುಳಿತಿರುವ ಶಾಸಕರಿಗೂ ಮತ್ತು ಹೊಸದಾಗಿ ಬಂದಿರತಕ್ಕಂತಹ ಶಾಸಕರಿಗೂ ಕೂಡ ಕೆಲವೊಂದು ಅಬ್ಲಿಗೇಷನ್ ಇದೆ ಚೆನ್ನಾಗಿ ಅಭ್ಯಾಸ ಮಾಡಿ ಬಂದು ಸಲಹೆಗಳನ್ನು ಕೊಡುತ್ತಾರೆ. ಈ ಸಲಹೆಗಳನ್ನು ಕೇಳತಕ್ಕಂತಹ ಸೌಜನ್ಯ ತೋರಿಸಿ ವಿಚಾರ ತಿಳಿದುಕೊಂಡು ತಾವು ಮತ್ತು ತಮ್ಮ ಮಂತ್ರಿ ಮಂಡಲದ ಸಹೋದ್ಯೋಗಿಗಳು ಅದನ್ನೆಲ್ಲಾ ವಿಚಾರ ಮಾಡಿ ಕಾರ್ಯಗತಗೊಳಿಸಿ. ಆಡಳಿತ ಪಕ್ಷದ ಶಾಸಕರು ಕೊಡತಕ್ಕಂತಹ ಸಲಹೆಗಳ ಬಗ್ಗೆ ಕೂಡ ತಾವು ಗಮನಕೊಡಿ. ಈ ನುಸಿ ರೋಗದ ಬಗ್ಗೆ ರಾಜ್ಯದಲ್ಲಿ ಆಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ. ಈ ದಿಕ್ಕಿನಲ್ಲಿ ತಾವು ಇನ್‌ಫರ್ಮೇಷನ್ ಟೆಕ್ನಾಲಜಿಗೆ ಏನು ಪ್ರಾಮುಖ್ಯತೆ ಕೊಟ್ಟಿದ್ದೀರಿ, ಅದೇ ಪ್ರಾಮುಖ್ಯತೆಯನ್ನು ನುಸಿ ರೋಗದ ನಿವಾರಣೆಗೂ ಏಕೆ ಕೊಡಲಿಲ್ಲ ? ನಮ್ಮ ಆರೋಗ್ಯ ಮಂತ್ರಿಗಳಾಗಿದ್ದ ಮಾನ್ಯ ಮಹದೇವಪ್ಪನವರು ಇಲ್ಲಿ ಇಲ್ಲ. ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಇಡೀ ರಾಜ್ಯದಲ್ಲಿ ಯಾವ ತರಹ ಕಾರ್ಯಕ್ರಮಗಳನ್ನು ತೆಗೆದುಕೊಂಡರೋ ಹಾಗೆಯೇ ಎಂಟು ಕೋಟಿ ಬಾಯಿ ಇಲ್ಲದೆ ಇರತಕ್ಕಂತಹ ತೆಂಗಿನ ಮರಗಳಿಗೆ ಬದುಕಿಸುವುದಕ್ಕೆ ನಿಮಗೆ ಕರುಣೆ ಹುಟ್ಟಲಿಲ್ಲ. ಆ ಕಡೆ ಯೋಚನೆ ಮಾಡಿ ಎಂದು ಹೇಳಿ, ಈ ಆಯವ್ಯಯದಲ್ಲಿ ಕೆಲವು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಏನು ಹೊರಟಿದ್ದೀರಿ, ತಮ್ಮ ಧ್ಯೇಯೋದ್ದೇಶಗಳನ್ನು ಇಬ್ಬರು ರಾಜ್ಯಪಾಲರ ಭಾಷಣದ ನಂತರವೂ ಕೂಡ ಮತ್ತೊಮ್ಮೆ ಈ ಬಜೆಟ್‌ನಲ್ಲಿ ರಿಯಿಟರೇಟ್ ಮಾಡಿದ್ದೀರಿ. ಅದಕ್ಕೆ ಯಾವುದೇ ರೀತಿಯ ರಿಸರ್ವೇಷನ್ ಇಲ್ಲದೆ

ಕರುನಾಡ ಕನ್ನಡಿಗರ ವಿಚಾರದಲ್ಲಿ ಗವರ್ನಮೆಂಟ್ ಫ್ಯಾಟ್‌ನ್ನು ರಿಡ್ಯೂಸ್ ಮಾಡತಕ್ಕಂತಹ ವಿಚಾರದಲ್ಲಿ ನಾವು ಸಪೋರ್ಟ್ ಮಾಡುತ್ತೇವೆ. ಬಾಕಿ ವಿಚಾರದಲ್ಲಿ ನಿಮ್ಮ ಸರ್ಕಾರದ ರಾಜಕೀಯ ಇಚ್ಛಾಶಕ್ತಿಯನ್ನು ಈ ವರ್ಷ ಚುನಾವಣೆಯಲ್ಲಿ ತೋರಿಸಬೇಕಾಗಿತ್ತು. ಉದಾಹರಣೆಗೆ ರೋಡ್‌ಗಳನ್ನು ಇಲ್ಲೀಗಲ್ಲಾಗಿ ಆಕ್ಯುಪೈ ಮಾಡಿದ್ದಾರೆ. ಅವನ್ನೆಲ್ಲಾ ಎತ್ತಿ ಹಾಕಬಹುದು. ಇದು ಮಾನ್ಯ ಧರ್ಮ್‌ಸಿಂಗ್ ಸಾಹೇಬರ ಕೆಲಸ. ಅವನ್ನು ಎತ್ತಿ ಹಾಕಬೇಕಾದರೆ election year is the right year. ಅದು ಆದಮೇಲೆ ಮಾಡುವುದಕ್ಕಾಗುವುದಿಲ್ಲ. ನೀವು ಯಾವ್ಯಾವುದೋ ಮುಲಾಜಿಗೆ ಏನೇನೋ ಮಾಡಬೇಕಾಗುತ್ತದೆ. ಆದ್ದರಿಂದ ಅದು ಆಗುವುದಿಲ್ಲ. ಇದು ನಿರಾಶಾದಾಯಕ ಮಾತು ಎಂದು ಹೇಳಿ ನಾವು ಇಂತಹ ಕಠಿಣವಾದ ಸಮಯದ ಅಭಾವದ ಸಂದರ್ಭದಲ್ಲಿ ಕೂಡ ನನಗೆ ಸಾಕಷ್ಟು ಸಮಯ ಕೊಟ್ಟು ಉಪಕಾರ ಮಾಡಿದ್ದೀರಿ, ತಮಗೆ ಧನ್ಯವಾದಗಳು.

ಅಧ್ಯಕ್ಷರು : ಮಾನ್ಯ ಸದಸ್ಯರು ಮಾತನಾಡುವಾಗ ರಾಜ್ಯಪಾಲರ ಬಗ್ಗೆ ಉಪಯೋಗಿಸಿದ ಪದಗಳನ್ನು ಡಿಲೀಟ್ ಮಾಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ : ನಾನು ರಾಜ್ಯಪಾಲರ ಬಗ್ಗೆ ಹೇಳಿದ ಮಾತುಗಳನ್ನು ಕಡತದಿಂದ ತೆಗೆದು ಹಾಕಬೇಡಿ ಎಂದು ನನ್ನ ವಿನಂತಿ. ಏಕೆಂದರೆ, ನಾನು ಏನು ಹೇಳಿದೆ, XXX ಈ ದೇಶದ ರಾಷ್ಟ್ರಪಾಲರುಗಳಿಗೆ ಅವರು ಮಾರ್ಗದರ್ಶನ ನೀಡಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಘನವಂತ ಮಾನ್ಯ ರಾಜ್ಯಪಾಲರೂ ಸಹಿತ ಮಾರ್ಗದರ್ಶನ ನೀಡಲಿ ಎಂದು ಹೇಳಿದ್ದೇನೆಯೇ ಹೊರತು, ಬೇರೆ ಏನಿಲ್ಲ. ಅವರು ವಿಶೇಷವಾಗಿ ಸ್ವಚ್ಛವಾಗಿ ಕನ್ನಡದಲ್ಲಿ ಭಾಷಣ ಮಾಡಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾನು ಮೆಚ್ಚಿಗೆ ವ್ಯಕ್ತಪಡಿಸಿದ್ದೇನೆ. ಅವರಿಗೆ ಅಗೌರವ ತೋರಿಸತಕ್ಕಂತಹ ಮಾತು, ಅಷ್ಟೇ ಅಲ್ಲ, ಅಂತಹ ಸನ್ನಿವೇಶವೂ ಬರಲಿಲ್ಲ. ಆದ್ದರಿಂದ ದಯಮಾಡಿ ಅದನ್ನು ಕಡತದಿಂದ ತೆಗೆಯಬೇಡಿ.

ಅಧ್ಯಕ್ಷರು : ಇಲ್ಲ ಹಾಗೆ ಮಾಡುವುದಕ್ಕಾಗುವುದಿಲ್ಲ.

+ ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ಅಧ್ಯಕ್ಷರೆ, ಸದನದ ಮುಂದೆ ಮಂಡಿಸಿದ ಆಯವ್ಯಯದ ಅಂದಾಜು ಪತ್ರದ ಬಗ್ಗೆ ಸದನದ ನಾನಾ ಭಾಗಗಳಿಂದ ಹತ್ತು ಹಲವಾರು ವಿಧವಾದ ಅಭಿಪ್ರಾಯಗಳು ಬಂದಿವೆ. ಆ ಅಭಿಪ್ರಾಯಗಳು ಎಲ್ಲವನ್ನೂ ಕೂಡ ನಾನು ಸ್ವಾಗತಿಸಿ, ಟೀಕೆಗಳು ಎಷ್ಟೇ ಅಹಿತಕರವಾಗಿದ್ದರೂ ಕೂಡ ಆ ಟೀಕೆಗಳ ಬಗ್ಗೆ ಒಳಹೊಕ್ಕು ಅದರಲ್ಲಿ ಅರ್ಥವನ್ನು ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ಕೊಡುತ್ತೇನೆ. ಆಯವ್ಯಯದ ಅಂದಾಜುಗಳು ಎಲ್ಲಾ ಕೂಡ ಸಾರ್ವತ್ರಿಕವಾಗಿ ಎಲ್ಲರೂ ಸ್ವಾಗತಿಸುತ್ತಾರೆ ಎಂದು ನಿರೀಕ್ಷೆ ಮಾಡತಕ್ಕಂತಹ ಮೂರ್ಖ ಅರ್ಥ ಮಂತ್ರಿ ಈ ದೇಶದಲ್ಲಿ ಇಲ್ಲ. ಒಂದು ಬಜೆಟನ್ನು ನಾಲ್ಕಾರು ದೃಷ್ಟಿಗಳಿಂದ ನೋಡತಕ್ಕಂತಹ ಬುದ್ಧಿ ಸಾಮರ್ಥ್ಯ ಹೊಂದಿರತಕ್ಕಂತಹ, ನಾವು, ನಾನಾ ವಿಧವಾದ ವಿಶ್ಲೇಷಣೆ ಮಾಡತಕ್ಕಂಥಾದ್ದು ಸಹಜವಾದುದು. ಅಪೇಕ್ಷಣೀಯವಾದುದು. ಅದಕ್ಕೆ ಮುಕ್ತವಾದ ಅವಕಾಶವನ್ನು ಕೊಡಬೇಕಾಗಿರತಕ್ಕಂಥಾದ್ದು ಸರಿ. ಯಾವುದೇ ಬಜೆಟ್‌ನ್ನು ವಿಶ್ಲೇಷಣೆ ಮಾಡತಕ್ಕಂತಹ ಕಾಲದಲ್ಲಿ ಬಜೆಟ್‌ನ ಮೂಲ ಗುರಿ ಏನು ಎನ್ನುವುದನ್ನು ನಾವು ಸಂವೇದನಾಶೀಲರಾಗಿ ಅರ್ಥೈಸತಕ್ಕಂತಹ ಪ್ರಯತ್ನವನ್ನು ಮಾಡಬೇಕು. ಪ್ರತಿಯೊಂದು ಬಜೆಟ್‌ನಲ್ಲಿ ಡಿಫಿಸಿಟ್ ಇದ್ದುದೇ. ಯಾವ ಪ್ರಮಾಣದ ಡಿಫಿಸಿಟ್ ಇದೆ ಆ ಡಿಫಿಸಿಟ್‌ನ್ನು ಹೇಗೆ ನೀವು ಓವರ್‌ಕಮ್ ಮಾಡುತ್ತೀರಿ ತೋರಿಸಿ, ಹೊಸ ಯೋಜನೆಗಳನ್ನು ಪ್ರಸ್ತಾಪ ಮಾಡಿದ್ದೀರಿ, ಹಣ ಎಲ್ಲಿದೆ ತೋರಿಸಿ, ಆರು ತಿಂಗಳಲ್ಲಿ ಏನು

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಮಾಡಿದಿರಿ ಹೇಳಿ, ಇಂತಹ ಪ್ರಶ್ನೆಗಳಿಗೆ, ಆರು ತಿಂಗಳಲ್ಲಿ ನಮ್ಮ ಸರ್ಕಾರ ಏನು ಮಾಡಿದೆ, ಏನು ಮಾಡಲಿಲ್ಲ ಎನ್ನುವುದಕ್ಕೆ ವಿಲೇಜ್ ಪಂಚಾಯತ್ ಚುನಾವಣೆಗಳಲ್ಲಿ ಜನ ಈಗಾಗಲೇ ತಮ್ಮ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಬಳ್ಳಾರಿ ಚುನಾವಣೆಯಲ್ಲಿ ಕೂಡ ಜನ ತಮ್ಮ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಬಳ್ಳಾರಿಗೆ ಏಕೆ 3,000 ಕೋಟಿ ರೂಪಾಯಿಗಳನ್ನು ಕೊಟ್ಟಿರಿ, ಒಂದು ಕಡೆ ವಿದ್ಯುತ್ ಬೇಕು. ವಿದ್ಯುತ್ ಏಕೆ ಕೊಡಲಿಲ್ಲವೆಂದು ಒಂದು ನಾಲಿಗೆಯಲ್ಲಿ ಕೇಳುತ್ತೀರಿ. ಇನ್ನೊಂದು ನಾಲಿಗೆಯಲ್ಲಿ ಬಳ್ಳಾರಿಗೆ ಏಕೆ 3,000 ಕೋಟಿ ರೂಪಾಯಿಗಳನ್ನು ಕೊಟ್ಟಿರಿ, ಎಂದು ಕೇಳುವುದು. ವಿಜಯನಗರದಲ್ಲಿ 500 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಬೇಕಾದರೆ ಎಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ? ಒಂದು ಮೆಗಾವಾಟ್ ವಿದ್ಯುಚ್ಛಕ್ತಿಗೆ ನಾಲ್ಕು ಕೋಟಿ ರೂಪಾಯಿಗಳು ಬೇಕಾಗುತ್ತವೆ. 500 ಮೆಗಾವಾಟ್‌ಗೆ 2,500 ಕೋಟಿ ರೂಪಾಯಿಗಳು ಆಯಿತು. ಇದನ್ನು ಏಕೆ ಕೊಟ್ಟಿರಿ ಎಂದು ಕೇಳುತ್ತೀರಿ? ಅದೂ ಕರ್ನಾಟಕದ ಜನತೆಗೆ ಕೊಟ್ಟಿರುವುದನ್ನು ಕೇಳುತ್ತೀರಿ. ಬಳ್ಳಾರಿ ಒಂದು ವೆಹಿಕಲ್ ಅಷ್ಟೆ. ಆದ್ದರಿಂದ ಇಂತಹ ವಿತಂಡ ವಾದಗಳನ್ನು ಮಂಡಿಸಿ ಬಜೆಟ್‌ನ್ನು ವಿಶ್ಲೇಷಣೆ ಮಾಡಿದರೆ ಅದಕ್ಕೆ ನಾನು ಅರ್ಥ ಎಲ್ಲಿಂದ ಕಲ್ಪಿಸಲಿ! ಗ್ರೋಥ್ ರೇಟ್ ಏನು 5 ಪರ್ಸೆಂಟ್ ಇತ್ತು, ಅದು 8 ಪರ್ಸೆಂಟ್ ಆಯಿತು. ನನ್ನ ದೃಷ್ಟಿಯಲ್ಲಿ ಮತ್ತು ಈ ಸರ್ಕಾರದ ದೃಷ್ಟಿಯಲ್ಲಿ ಈ ರಾಜ್ಯ ಸಂಪತ್‌ಭರಿತವಾದ ರಾಜ್ಯವಾಗಿ ಬೆಳೆಯಬೇಕಾದರೆ ಕನಿಷ್ಟ 7 ಪರ್ಸೆಂಟ್, 8 ಪರ್ಸೆಂಟ್ ಗ್ರೋಥ್ ರೇಟನ್ನು ನಾವು ಒಂದು ಗುರಿಯಾಗಿ ಇಟ್ಟುಕೊಳ್ಳಬೇಕು. ಅದು ಹೇಗೆ ಸಾಧ್ಯವಾಗುತ್ತದೆ. 5 ರಿಂದ 8 ಪರ್ಸೆಂಟ್‌ನಷ್ಟು ಸಾಧಿಸುವುದಕ್ಕೆ ಆಗಲಿಲ್ಲ. ಇದ್ದಕ್ಕಿದ್ದ ಹಾಗೆ ಎಂಟು ಪರ್ಸೆಂಟ್‌ಗೆ ಹೋಗುತ್ತಿದ್ದೀರಿ ಎಂದು ಕೇಳಿದರೆ, ಹಣಕಾಸಿನ ಮಂತ್ರಿಯಾಗಿ ನನ್ನ ಕೈಯಲ್ಲಿ ಅದಕ್ಕೆ ಉತ್ತರ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುಶಃ ಯಾರು ಈ ಪ್ರಶ್ನೆಯನ್ನು ಎತ್ತಿದವರು ಇದ್ದಾರೆ ಅವರು ಯಾವತ್ತಾದರೂ ಇಲ್ಲಿ ಬಂದು ಹಣಕಾಸಿನ ಮಂತ್ರಿಯಾಗಿ ಬಜೆಟ್ ಮಂಡನೆ ಮಾಡತಕ್ಕಂತಹ ಅವಕಾಶ ಸಿಕ್ಕಿದರೆ ಅವರು ಮಾತ್ರ ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಶಕ್ಯರೇ ಹೊರತು ನಾನು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಶಕ್ಯ ಅಲ್ಲ. ಇನ್ನು ಐದು ವರ್ಷಗಳ ಅವಧಿಯಲ್ಲಿ ಏಳು ಪರ್ಸೆಂಟ್ ಗ್ರೋಥ್ ರೇಟ್ ಆಗಬೇಕೆಂದು ನಮ್ಮ ಗುರಿ. ಆ ಗುರಿ ಸಾಧನೆಗೋಸ್ಕರ ಯಾವ ಯಾವ ಸೆಕ್ಟರ್‌ನಲ್ಲಿ ಏನು ಇನ್‌ಕ್ರೀಸ್ ಮಾಡಬಹುದು, increased investment in infrastructure, similarly increase in irrigation, increase in productivity, increase in human resources, investments to be invited...

ಇವುಗಳೆಲ್ಲವನ್ನು ನಾವು ಪಡೆದರೆ ಮಾತ್ರ ಐದರಿಂದ ಆರು ಪರ್ಸೆಂಟ್‌ಗೆ ಹೋಗಬಹುದು, 6 ರಿಂದ 7 ಪರ್ಸೆಂಟ್‌ಗೆ ಹೋಗಬಹುದು, 7 ರಿಂದ 8 ಪರ್ಸೆಂಟ್‌ಗೋ ಹೋಗಬಹುದು. ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ. Structured effect ಬೇಕಾಗುತ್ತದೆ. ಆ ಸ್ಟ್ರಕ್ಚರ್ ಎಫರ್ಟ್‌ಗೋಸ್ಕರ ನಾವು ಈ ಪ್ರಯತ್ನಗಳೆಲ್ಲವನ್ನು ಕೂಡ ಮಾಡುತ್ತಿದ್ದೇವೆ. ರೆವಿನ್ಯೂ ಡಿಫಿಸಿಟ್ 2,000 ದಿಂದ 2,400 ಕೋಟಿ ರೂಪಾಯಿಗಳೊಳಗೆ ಕಡಿಮೆ ಮಾಡುತ್ತೇವೆ. ಡಿಫಿಸಿಟ್ ಇಲ್ಲದಂತೆ ಮಾಡುತ್ತೇವೆಂದು ನೀವು ಹೇಳಿದ್ದೀರಿ. ಈಗಲೇ ಇಷ್ಟೊಂದು ಡಿಫಿಸಿಟ್ ಇದೆ, ಮುಂದೆ ಹೇಗೆ ಮಾಡುವುದಕ್ಕಾಗುತ್ತದೆ? ಎಂದು ಕೇಳಿದ್ದಾರೆ. ಈ ಸರ್ಕಾರ ಮಂಡಿಸಿತಕ್ಕಂತಹ ಕೊನೆ ಬಡ್ಜೆಟ್‌ನ ಅವಧಿಯಲ್ಲಿ ಕೇಳತಕ್ಕಂತಹ ಈ ಪ್ರಶ್ನೆಯನ್ನು ಮೊದಲನೇ ಬಡ್ಜೆಟ್‌ನಲ್ಲಿ ಕೇಳತಕ್ಕಂತಹ ತಪ್ಪನ್ನು ಮಾಡಿದ್ದಾರೆ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ. ಅಗ್ರಿಕಲ್ಚರಲ್ ಪ್ರೊಡಕ್ಷನ್ ಇನ್‌ಕ್ರೀಸ್ ಆದರೆ ರೆವಿನ್ಯೂ ಮೊಬಲೈಸೇಷನ್ ಅನ್ನು ಹೆಚ್ಚು

ಮುತವರ್ಜಿಯಿಂದ, ಧೈರ್ಯದಿಂದ, ರಾಜಕೀಯ ಇಚ್ಛಾಶಕ್ತಿಯಿಂದ ಮಾಡಬಹುದು. ನಾವು ಈಗಾಗಲೇ 390 ಕೋಟಿ ರೂಪಾಯಿಗಳ ಕರ ಹೇರಿರುವುದನ್ನು ನೋಡಿದಾಗ ನಮ್ಮ ರಾಜಕೀಯ ಇಚ್ಛಾಶಕ್ತಿಯ ಒಂದು ಇಣುಕು ನೋಟ ನಮಗೆ ಸಿಗುತ್ತದೆ. ಈಗಾಗಲೇ ಅದು ಸಿಕ್ಕಿದೆ. ನಾವು ಪ್ರೊಡಕ್ಟಿವಿಟಿ ಇನ್‌ಕ್ರೀಸ್ ಮಾಡದೆ ಹೋದರೆ ನಮ್ಮ ಪ್ರಯತ್ನಗಳು ಎಲ್ಲವೂ ಕೂಡ ಶುಷ್ಕ ಆಗುತ್ತವೆ. ಎಸ್ಟಾಬ್ಲಿಷ್‌ಮೆಂಟ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿ ಎಂದು ಹೇಳುತ್ತಾರೆ. ಅದನ್ನು ಒಪ್ಪಲೇ ಬೇಕಾದ ವಿಚಾರ. ಈಗಾಗಲೇ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆ ಬಗ್ಗೆ ನಮ್ಮ ಪ್ರಾಮಾಣಿಕತೆಯನ್ನು ಕೂಡ ಪ್ರದರ್ಶನ ಮಾಡಿದ್ದೇವೆ. 80% of the vacant jobs ಅದನ್ನು ನಾವು ತೆಗೆದು ಹಾಕುತ್ತಿದ್ದೇವೆ. ಇದಕ್ಕಿಂತ ನೀವು ಏನನ್ನು ಅಪೇಕ್ಷೆ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಒಂದು ಒಳ್ಳೆಯ ಮಾತನಾಡಿದ್ದಾರೆ. ದುರಾದೃಷ್ಟವಶಾತ್ ವಿರೋಧಪಕ್ಷದ ನಾಯಕರು ನೀವು ಅಲ್ಲಿ ಕುಳಿತಿದ್ದೀರಿ! ಅವರು ಇಲ್ಲಿ ಇರಬೇಕು. ನಿಂದಕರು ಇರಬೇಕಯ್ಯ...

ಶ್ರೀ ಎಸ್.ಎಸ್.ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ತಾವು ನಿಜವಾಗಿ ಆ ವಚನವನ್ನು ಕೇಳಬೇಕೆಂದು ಆಸೆಪಡುತ್ತಿದ್ದೀರಿ. ಬಸವಣ್ಣನವರು ಒಂದು ಕಡೆ ಹೇಳುತ್ತಾರೆ.

ಬೈದವರೆನ್ನ ಹೊರೆದವರೆಂಬೆ, ಬೈದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ, ಜರೆದವರೆನ್ನ ಜನ್ಮ
ಬಂಧುಗಳೆಂಬೆ, ಹೊಗಳುವವರೆನ್ನ ಹೊನ್ನ ಶೂಲದಲ್ಲಿ
ಇಕ್ಕಿದವರೆಂಬೆ, ಕೂಡಲ ಸಂಗಮದೇವ- ಎಂದು ಹೇಳುತ್ತಾರೆ.

ನಾವು ಬೈಯುತ್ತೇವೆ, ತಾವು ಬೈಸಿಕೊಳ್ಳುತ್ತೀರಿ, ಹೊಗಳಿದವರು ಹೊನ್ನ ಶೂಲದ ಬಗ್ಗೆ ತಿಳಿದುಕೊಂಡು, ಏಕೆಂದರೆ, ನಿಮ್ಮನ್ನು ಹೊಗಳುವವರು ಅವರು ಕೂಡುತ್ತಾರೆ. ಆ ಕಾರಣದಿಂದ ನಾವು ಬೈಯುತ್ತಿರುವುದು ನಿಮ್ಮ ಒಳ್ಳೆಯದಕ್ಕಾಗಿಯೇ ಎಂದು ತಿಳಿದುಕೊಳ್ಳಿ, ನಮ್ಮನ್ನು ಬಂಧುಗಳೆಂದು ತಿಳಿದುಕೊಂಡು ಕೆಲಸ ಮಾಡಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಕುಂದು ನಿಂದೆಗಳ ಪವಾಡ ನೀಡುವವರ ಪ್ರಸಂಗ ಬೇಡ, ತುದಿ ನಾಲಗೆ, ಕಾಲು, ಎದೆ, ಕತ್ತರಿಯವರ ಸಂಗ ಬೇಡ, ಹದವ ಮೀರಿದ ಮೇಲೆ ಹಲವನಾಡುವವರ ಸಂಗ ಬೇಡ. ಸತ್‌ಸಂಗಿಗಳಾದ ನಮ್ಮೆಲ್ಲರ ಸಂಗ ನಿಮಗೆ ಬೇಕು.

ಶ್ರೀ ಎಸ್.ಎಂ.ಕೃಷ್ಣ : ಅದಕ್ಕೆ ನಾನು ಶರಣಾಗತನಾಗಿದ್ದೇನೆ. ಸತ್‌ಸಂಗಿಗಳಿಗೆ ಶರಣಾಗಿದ್ದೇನೆ. ಇಲ್ಲಿ ಇರತಕ್ಕಂತಹವರು ಎಲ್ಲರೂ ಸತ್‌ಸಂಗಿಗಳು, ಅವರಿಗೆ ನಾನು ಶರಣಾಗಿದ್ದೇನೆ. ಬಹಳ ದೊಡ್ಡ ಪ್ರಮಾಣದಲ್ಲಿ ಸಾಲ ನೀವು ಮಾಡುತ್ತಿದ್ದೀರಿ ಆ 20,000 ಕೋಟಿ ರೂಪಾಯಿಗಳ ಸಾಲವನ್ನು ಹೇಗೆ ತೀರಿಸುತ್ತೀರಿ ? ಸಾಲದ ಸುಳಿಯಿಂದ ಹೊರಗೆ ನಾವಿದ್ದೇವೆಂದು ಹೇಳುತ್ತೀರಿ, ವಿಶ್ವಬ್ಯಾಂಕಿನಿಂದ 13,000 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಎನ್ನತಕ್ಕ ಮಾತ್ತೊಂದನ್ನು ಅವರು ಹೇಳಿದ್ದಾರೆ. ಒಂದು ಕಾಲದಲ್ಲಿ ನಿಮಗೆ ಸಾಲ ಕೊಡತಕ್ಕಂತಹವರು ನಿಮ್ಮ ಕೈಗೆ ಸಿಕ್ಕಿರಲಿಲ್ಲ. ಅಷ್ಟು ನಿಕೃಷ್ಟವಾದ ರಾಜ್ಯವನ್ನಾಗಿ ಮಾಡಿ ಇಟ್ಟಿದ್ದೀರಿ. ಆಗ ವರ್ಲ್ಡ್ ಬ್ಯಾಂಕಿನವರು ನಮ್ಮ ಕಡೆಗೆ ನೋಡುವುದಕ್ಕೆ ಕೂಡ ಸಿದ್ಧರಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ನಾವು ಎಷ್ಟು ಪ್ರಯತ್ನ ಮಾಡಿದ್ದೇವೆಂದು ನನಗೆ ಮತ್ತು ನಮ್ಮ ಮಂತ್ರಿಮಂಡಲದ

ಸಹೋದ್ಯೋಗಿಗಳಿಗೆ ಮತ್ತು ನಮ್ಮ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಇತರ ಕಾರ್ಯದರ್ಶಿಗಳಿಗೆ ಗೊತ್ತಾಗಿದೆ. ವರ್ಲ್ಡ್ ಬ್ಯಾಂಕ್ ಅಧ್ಯಕ್ಷರು ಬಂದಾಗ ಅವರನ್ನು ನೋಡಿಕೊಂಡ ಬಗ್ಗೆ ಹೇಗೆ ಎಂಬುದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಒಂದು ಕಾಲದಲ್ಲಿ ಕರ್ನಾಟಕ ರಾಜ್ಯ ಎಂದು ಹೇಳಿದರೆ ಅತಿಥಿಗಳಿಗೆ ಅತಿಥಿ ದೇವೋಭವ ಎನ್ನತಕ್ಕಂತಹ ಮಾತಿಗೆ ಲಗತ್ತಾಗಿರತಕ್ಕಂತಹ ರಾಜ್ಯ. ಆದರಲ್ಲೂ ಯಾರಾದರೂ ಸಹಾಯ ಮಾಡುತ್ತೇವೆಂದು ನಿರ್ಭಯವಾಗಿ ಬಂದರೆ, ವಿಶ್ವಬ್ಯಾಂಕ್ ಅಧ್ಯಕ್ಷರು ಎಲ್ಲಿಯೇ ಹೋಗಲಿ ಅವರಿಗೆ ಸಿಗತಕ್ಕಂತಹ ಮಾನ್ಯತೆ, ಏಕೆಂದರೆ, ಇವತ್ತು ಗ್ಲೋಬಲ್ ಎಕನಾಮಿಕ್ ಸಿಚುಯೇಷನ್ ಏನಾಗಿದೆ ಎಂದರೆ, ವಿಶ್ವಬ್ಯಾಂಕ್ ಮತ್ತು ಇಂಟರ್‌ನ್ಯಾಷನಲ್ ಮಾನಿಟರ್ ಫಂಡ್, ಏಷಿಯನ್ ಡೆವಲಪ್‌ಮಂಟ್ ಬ್ಯಾಂಕ್ ಇವುಗಳಲ್ಲದೆ ಬೇರೆ ಪರ್ಯಾಯ ಮಾರ್ಗಗಳು ಇಲ್ಲ ನಮ್ಮ ದೇಶಕ್ಕೆ. ನಮ್ಮ ರಾಜ್ಯಕ್ಕೆ ನಾವು ಅಭಿವೃದ್ಧಿಗೋಸ್ಕರ, ಇನ್‌ಫ್ರಾಸ್ಟಕ್ಚರ್‌ಗೋಸ್ಕರ, ಹೊಸ ಅಸೆಟ್ಸ್ ಕ್ರಿಯೇಟ್ ಮಾಡುವುದಕ್ಕೋಸ್ಕರ ನಾವು ಸಾಲ ಮಾಡಬೇಕಾದ ಪರಿಸ್ಥಿತಿ ಬಂದಾಗ, ಸಾಲ ಕೊಡತಕ್ಕಂತಹ ದಣಿಗಳು ಬಂದಾಗ ಹಿಂದೆ ಹೇಗೆ ವರ್ತನೆ ಮಾಡಿದರು ಎನ್ನುವುದಕ್ಕೋಸ್ಕರ ಬೇಸರವಾಗಿ, ಯಾವುದೋ ಒಂದು ಕಾಲದಲ್ಲಿ ಫೋಕಸ್ ಸ್ಟೇಟ್ ಎಂದು ಹೆಸರು ಪಡೆದಿತ್ತೋ ವಿಶ್ವಬ್ಯಾಂಕಿನ ದೃಷ್ಟಿಯಲ್ಲಿ - Karnataka was totally removed from that focus and it is to the credit of this Government that we have again brought back Karnataka as focus State from the World Bank perspective.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಸಾಲ ಸೋಪಾನ ಹಿಡಿದರೆ ಇಬ್ಬದಿಯ ಕೀಲು ಮುರಿದಂತೆ ಸರ್ವಸಾಲ...

ಶ್ರೀ ಎಸ್.ಎಂ.ಕೃಷ್ಣ : ಇದನ್ನು ಕೇಂದ್ರದಲ್ಲಿರುವ ಪ್ರಧಾನಮಂತ್ರಿಗಳಿಗೆ ಉಪದೇಶ ಮಾಡಿ. ಈ ಪದವನ್ನು ಅಲ್ಲಿ ಲೋಕಸಭೆಯಲ್ಲಿ ಯಾರ ಕೈಯಲ್ಲಾದರೂ ಹಾಡಿಸಿ ! ಆದ್ದರಿಂದ ನಮಗೆ ಒಂದು ಸ್ಪಷ್ಟವಾದ ನೀತಿ ಇರಬೇಕು. ಸಾಲ ಮಾಡುವುದು ಬೇಡವೆಂದರೆ, ಅದು ಪ್ರೂಡೆಂಟ್. ಆರ್ಥಿಕವಾದ ನೀತಿ ಇವತ್ತು ಕುಂಠಿತ ಆಗಿ, ಆದರಿಂದ ಇಲ್ಲದವರ ಹಿತವನ್ನು ನಾವು ಸರಿಪಡಿಸಲಿಕ್ಕೆ ಸಾಧ್ಯವೇ ? ಬಡತನ ರೇಖೆಯಿಂದ ಕೆಳಗಿರತಕ್ಕಂತಹವರಿಗೆ ಮೇಲೆ ಎತ್ತಲಿಕ್ಕೆ ಸಾಧ್ಯವೇ ? ಈ ಕೆಲಸಗಳನ್ನು ಮಾಡಬೇಕಾದರೆ, ಈ ಜವಾಬ್ದಾರಿಗಳನ್ನು ಹೊರಬೇಕಾದರೆ ಯಾವುದೇ ರಾಜ್ಯ ಸರ್ಕಾರವಾಗಲಿ, ಯಾವುದೇ ದೇಶದ ಸರ್ಕಾರವಾಗಲಿ ಇವತ್ತು ಸಾಲವನ್ನು ತೆಗೆದುಕೊಳ್ಳದೆ ಹೋದರೆ ಪರ್ಯಾಯವಾದಂತಹ ವ್ಯವಸ್ಥೆ ಇಲ್ಲ. ಇಂಟರ್‌ನಲ್ ರಿಸೋರ್ಸಸ್‌ನ್ನು ನಾವು ರೈಸ್ ಮಾಡಬೇಕು. ಅದಕ್ಕೆ ನಾವೆಲ್ಲಾ ಒಟ್ಟಿಗೆ ಪ್ರಯತ್ನಗಳನ್ನು ಮಾಡಬೇಕು. ಕರ್ನಾಟಕದ ಡೆಟ್ (Debt) ಪೊಸಿಷನ್ ಬಗ್ಗೆ ಎರಡು ಮಾಹಿತಿಗಳನ್ನು ಕೊಟ್ಟರೆ ಅದು ಅಪ್ರಸ್ತುತ ಆಗುವುದಿಲ್ಲ. 1999ನೇ ಇಸವಿಯವರೆಗೆ ಕರ್ನಾಟಕ 15,348 ಕೋಟಿ ರೂಪಾಯಿಗಳನ್ನು ನಾವು ಸಾಲ ಮಾಡಿದ್ದೇವೆ, ಇದು ಬಡ್ಜೆಟ್ ಎಸ್ಟಿಮೇಟ್ಸ್. ಬಡ್ಜೆಟ್ ಎಸ್ಟಿಮೇಟ್‌ಗಿಂತ ಸ್ವಲ್ಪ ಜಾಸ್ತಿಯಾಗಬಹುದು. 31ನೇ ತಾರೀಕು ಒಂದು ಶ್ವೇತ ಪತ್ರವನ್ನು ಕೂಡ ನಾವು ಮಂಡಿಸುತ್ತೇವೆ. ಅದು ಈ ಸಾಲದ ಹೊರೆ ಬಗ್ಗೆ ಸಾಕಷ್ಟು ಬೆಳಕನ್ನು ಬೀರುತ್ತದೆ ಎಂಬ ಅಂಶವನ್ನು ನೀವು ಗಮನಿಸಬೇಕು. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಕಂಪೇರ್ ಮಾಡಿದಾಗ ಆಂಧ್ರಪ್ರದೇಶದಲ್ಲಿ 1996-97ನೇ ಇಸವಿಯವರೆಗೆ ಬಡ್ಜೆಟ್ ಎಸ್ಟಿಮೇಟ್ ಪ್ರಕಾರ 17,372 ಕೋಟಿ ರೂಪಾಯಿಗಳನ್ನು ಸಾಲ ಮಾಡಿದ್ದರು. ಅದರ ಲೇಟೆಸ್ಟ್ ಫಿಗರ್ಸ್‌ನ್ನು ನಾನು ತರಿಸುತ್ತೇನೆ. ಏಪ್ರಿಲ್

ಕೊನೆಯಲ್ಲಿ ಮತ್ತೆ ಸಭೆ ಸೇರಿದಾಗ ಇದನ್ನು ಕೊಡುತ್ತೇನೆ. ಮಹಾರಾಷ್ಟ್ರ ರಾಜ್ಯದ 1998-99ನೇ ಇಸವಿಯ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ 37,726 ಕೋಟಿ ರೂಪಾಯಿಗಳನ್ನು ಸಾಲ ಮಾಡಿದ್ದರು. ಅದು ಬಿಗ್ಗರ್ ಸ್ಟೇಟ್ ನಿಜ. ಆಂಧ್ರವು ದೊಡ್ಡದು, ಮಹಾರಾಷ್ಟ್ರವು ದೊಡ್ಡದು. Debt service percentage of revenue receipts ನಮ್ಮ ಬಡ್ಜೆಟ್ ಎಸ್ಟಿಮೇಟ್ 18.58, ಆಂಧ್ರಪ್ರದೇಶ 24.66 ಪರ್ಸೆಂಟ್, ಮಹಾರಾಷ್ಟ್ರ 30.40 ಪರ್ಸೆಂಟ್. When you compare to these States, we are in a better position slightly.

ಅದನ್ನು ನಾನು ಐಡಲ್ ಪೊಸಿಷನ್ ಎಂದು ಹೇಳುತ್ತಿಲ್ಲ. Relatively speaking, we are in a much better position than Andhra Pradesh and Maharashtra.

11.10 ಎ.ಎಂ.

ನಾನು ಬಡೆಟ್‌ನಲ್ಲಿ future bebt only for productive assets-ಎಂದು ಹೇಳಿದ್ದೇನೆ. ಆಸ್ತಿಯನ್ನು ಉತ್ಪತ್ತಿ ಮಾಡತಕ್ಕಂಥ ಬಾಬುಗಳಿಗೆ ಮಾತ್ರ ನಾವು ಸಾಲವನ್ನು ಉಪಯೋಗಿಸುತ್ತೇವೆ. ಎರಡು ಲಕ್ಷ ಮನೆಗಳ ವಿಚಾರವನ್ನು ತಾವು ಅಭಿಮಾನದಿಂದ ಪ್ರಸ್ತಾಪ ಮಾಡಿದಿರಿ. ಎರಡು ಲಕ್ಷ ಮನೆಗಳನ್ನು ಕಟ್ಟತಕ್ಕಂಥಾದ್ದು ಅಸೆಟ್ ಕ್ರಿಯೇಶನ್ ಅಲ್ಲವೆ? ಶಾಲಾ ಕೊಠಡಿಗಳನ್ನು ಕಟ್ಟಿ ಮುಗಿಸುವುದು ಅಸೆಟ್ ಕ್ರಿಯೇಶನ್ ಅಲ್ಲವೆ? ರಸ್ತೆಗಳನ್ನು ನಿರ್ಮಾಣ ಮಾಡತಕ್ಕಂಥಾದ್ದು ಅಸೆಟ್ ಕ್ರಿಯೇಶನ್ ಅಲ್ಲವೆ? ಪ್ರೈಮರಿ ಹೆಲ್ತ್ ಸೆಂಟರ್ ಬಿಲ್ಡಿಂಗ್‌ಗಳನ್ನು ಕಟ್ಟತಕ್ಕಂಥಾದ್ದು ಮತ್ತು ಪೋಲಿಸ್ ವಸತಿ ಗೃಹಗಳನ್ನು ಕಟ್ಟತಕ್ಕಂಥಾದ್ದು ಎಲ್ಲವೂ ಅಸೆಟ್ ಕ್ರಿಯೆಶನ್ಸ್. ಅಸೆಟ್ಸ್ ಎಂದರೆ ಏನು ? ಕರ್ನಾಟಕದ ಒಟ್ಟು ಆಸ್ತಿ ವಿವರಗಳು ಎಂದಾಗ ಅದರ ವ್ಯಾಪ್ತಿಯೊಳಗೆ ಒಟ್ಟು ಶಾಲಾ ಕೊಠಡಿಗಳು, ರಸ್ತೆಗಳು, ಪೋಲೀಸ್ ವಸತಿ ಗೃಹಗಳು ಮತ್ತು ಮಿನಿ ವಿಧಾನ ಸೌಧಗಳು ಹಾಗೂ ಇನ್ನಿತರ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳು, ಇವೆಲ್ಲವನ್ನೂ ಸಂಗ್ರಹಿಸಿದಾಗ ಕರ್ನಾಟಕ ಒಟ್ಟಾರೆ ಎಷ್ಟು ಅಸೆಟ್ಸ್ ಪಡೆದಿದೆ ಎನ್ನತಕ್ಕಂಥ ಅಂದಾಜು ಸಿಗುತ್ತದೆ. ಆದುದರಿಂದ ಅಸೆಟ್ಸ್‌ಗಳನ್ನು ಕ್ರಿಯೇಶನ್ ಮಾಡುವುದಕ್ಕೋಸ್ಕರ ಸಾಲಗಳನ್ನು ಮಾಡುವುದು ಈ ಸರ್ಕಾರದ ನೀತಿಯಾಗಿದೆಯೆಂದು ನಾನು ಹೇಳಬಯಸುತ್ತೇನೆ. ಇನ್ನುಳಿದ ಸೋಷಿಯಲ್ ಕಾಸಸ್‌ಗಳಿಗೆ ಆಂತರಿಕ ಸಂಪನ್ಮೂಲಗಳಿಂದ ಹಣವನ್ನು ಖರ್ಚು ಮಾಡಬೇಕೆಂಬುದೇ ನಮ್ಮ ನೀತಿಯಾಗಿದೆ. ಈ ನಮ್ಮ ತೀರ್ಮಾನಕ್ಕೆ ಎರಡು ಅಭಿಪ್ರಾಯಗಳು ಬರುವುದಕ್ಕೆ ಸಾಧ್ಯವಿಲ್ಲವೆಂದು ನಾನಾದರೂ ತಿಳಿದುಕೊಳ್ಳುತ್ತೇನೆ. ಸಿಂಧ್ಯಾರವರೆ ಇದಕ್ಕೆ ತಾವೇನು ಹೇಳುತ್ತೀರಿ ?

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಿಮ್ಮ ಅಭಿಪ್ರಾಯವನ್ನು ನಾವು ಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ.ಎಸ್.ಕೃಷ್ಣ : ವಂದನೆಗಳು ಇನ್ನು ಕೃಷಿಗೆ ಹಾಗೂ ಆರ್.ಡಿ.ಪಿ.ಆರ್.ಗೆ ಬಡ್ಜೆಟ್ ಅಲೊಕೇಶನ್ ಕಡಿಮೆಯಾಗಿದೆಯೆಂದು ಕೆಲವರು ಹೇಳಿದ್ದಾರೆ. ಆದರೆ ಪ್ಲಾನ್ ಸೈಜ್‌ನ್ನು ಶೇಕಡ 40ರಷ್ಟು ಹೆಚ್ಚು ಮಾಡುತ್ತಿದ್ದೇವೆ. ಇದರಲ್ಲಿ ಎಲ್ಲರದೂ ಹಾಸೆಸ್ಟ್ ಭಿನ್ನಾಭಿಪ್ರಾಯಗಳು ಇದ್ದರೆ ಸಾಕು. ಏಕೆಂದರೆ ನಿಮ್ಮ ಅನುಭವದ ಆಧಾರದ ಮೇಲೆ ತಾವು ಹೇಳುತ್ತೀರಿ, ಇದು ಬಹಳ ಆ್ಯಂಬಿಷಿಯಸ್, ಇದು ಅನುಷ್ಠಾನಗೊಳಿಸಲಾಗದ ಹೈಕ್ ಅಥವಾ ಹೆಚ್ಚಳಿಕೆ ಎಂದು ಹೇಳುವುದರಲ್ಲಿ ಅರ್ಥವಿದೆ ಎನ್ನತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಅದನ್ನು ನಾನು ಸಾರಾಸಗಟಾಗಿ ತೆಗೆದುಹಾಕುವುದಿಲ್ಲ, ಏಕೆಂದರೆ

ನೀವು ಅದನ್ನು ನಿಮ್ಮ ಅನುಭವದಲ್ಲಿ ಹೇಳುತ್ತಿದ್ದೀರಿ. ಆದರೆ ಇನ್ನು ಕೆಲವು ಕಥೆಯಿಂದ ಅನುಭವವಿಲ್ಲದೇ ಬರುತ್ತಿರುವ ಟೀಕೆಗಳ ಬಗ್ಗೆ ನಾನು ನಿರಸ್ತ್ರನಾಗಿದ್ದೇನೆ. ಏಕೆಂದರೆ ಆ ಟೀಕೆಗಳಿಗೆ ಏನು ಹೇಳುವುದಕ್ಕೂ ಸಾಧ್ಯವಿಲ್ಲ. ಇನ್ನು ನೀರಾವರಿ 1814 ಕೋಟಿ ರೂಪಾಯಿಗಳು ಇದ್ದದ್ದನ್ನು ಹೆಚ್ಚಿಸಿ ಈ ಬಾರಿ 2879 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ನೀರಾವರಿಗೆ ಕೊಟ್ಟಿರತಕ್ಕಂಥಾದ್ದು ಇದು ಕಡಿಮೆಯಾಗಿದೆಯೇ?

ಶ್ರೀ ಬಿ.ಎಸ್. ಬಚ್ಚೇಗೌಡ : 35 ಪರ್ಸೆಂಟ್ ಜಾಸ್ತಿಯಾಗಿದೆ,

ಶ್ರೀ ಎಸ್.ಎಂ.ಕೃಷ್ಣ : 35 ಪರ್ಸೆಂಟ್ ಜಾಸ್ತಿಯಾಗಿದೆಯೆಂದು ಮಾನ್ಯ ಬಚ್ಚೇಗೌಡರು ಹೇಳುತ್ತಿದ್ದಾರೆ. ಬಜೆಟ್ ಎಂದರೆ ಒಂದು ರೀತಿಯ ಅಲಾಟ್‌ಮೆಂಟ್ ಎಂದೇ ಅರ್ಥ. ನೀವು ಬೇಕಾದರೆ ಮುಂದಿನ ವರ್ಷ ಮಾರ್ಚ್ 31ರಲ್ಲಿ ನನ್ನನ್ನು ಕೇಳಬಹುದು. ಕಳೆದ ವರ್ಷ ನೀರಾವರಿಗೆ ಇಷ್ಟು ಹಣ ಇಟ್ಟಿದ್ದೇನೆಂದು ಹೇಳಿದಿರಲ್ಲ ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಆಗ ನನಗೆ ಕೇಳಿದರೆ ಆ ಪ್ರಶ್ನೆಗೆ ಅರ್ಥ ಬರುತ್ತದೆ. ಅದನ್ನು ಬಿಟ್ಟು ನೀವು ಈಗಲೇ, ಹೇಗೆ ಹಣವನ್ನು ಖರ್ಚು ಮಾಡುತ್ತೀರಿ ? ಹೇಗೆ ಹಣವನ್ನು ರೈಸ್ ಮಾಡುತ್ತೀರಿ ? ಅಷ್ಟು ಹಣವನ್ನು ರೈಸ್ ಮಾಡುವುದಕ್ಕೆ ಸಾಧ್ಯವೇ ? ಎಂದು ನನ್ನನ್ನು ಕೇಳಿದರೆ ನಾನು ಹೇಗೆ ಅದಕ್ಕೆ ಉತ್ತರ ಕೊಡಲಿ ? ನೀವೆ ಹೇಳಿ. ಇನ್ನು ಸಾರಿಗೆಗೆ 332 ಕೋಟಿ ರೂಪಾಯಿಗಳಿಂದ 505 ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ. ನೀರು ಪೂರೈಕೆಗೆ 823 ಕೋಟಿ ರೂಪಾಯಿಗಳಿಂದ 1045 ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ. ವೆಲ್‌ಫೇರ್ ಆಫ್ ಎಸ್‌ಸಿ:ಎಸ್‌ಟಿ ಅಂಡ್ ಓ.ಬಿ.ಸಿ.ಗೆ 188 ಕೋಟಿ ರೂಪಾಯಿಗಳಿಂದ 212 ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ. ಶಿಕ್ಷಣಕ್ಕೆ 369 ಕೋಟಿ ರೂಪಾಯಿಗಳಿಂದ 424 ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ. ಇದರಲ್ಲಿ ನಾವು ಇಟ್ಟ ಮೂಲ ಉದ್ದೇಶ prioritistion of investment.

ಇದರಲ್ಲಿ ಎಕ್ಸ್‌ಟರ್‌ನಲಿ ಅಸಿಸ್ಟೆಡ್ ಪ್ರಾಜೆಕ್ಟ್‌ಗಳು ಸೇರುತ್ತಿಲ್ಲ ಎಂಬುದನ್ನು ನಾವು ಯೋಚನೆ ಮಾಡಬೇಕು. ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿದೆಯೆಂದು ಹೇಳಿದ್ದೀರಿ. ನಿಜ. ನಮ್ಮ ದೇಶದ ಜನಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ದೇಶದಲ್ಲಿ ಜನಸಂಖ್ಯೆ ಹೆಚ್ಚಾದಾಗ ನಿರುದ್ಯೋಗ ಸಮಸ್ಯೆ ಕೂಡ ಜಾಸ್ತಿಯಾಗುತ್ತದೆ. ಜನಸಂಖ್ಯೆಯನ್ನು ತಡೆಯುವುದಕ್ಕೆ ಅವರ ಕೈಯಲ್ಲೂ ಆಗುವುದಿಲ್ಲ, ನಮ್ಮ ಕೈಯಲ್ಲೂ ಆಗುವುದಿಲ್ಲ. ಒಟ್ಟಾರೆಯಾಗಿ ಒಂದು ಕಾನ್‌ಸೆನ್‌ಸಸ್ ದೇಶದಲ್ಲಿ ಬರುವವರೆಗೆ ಜನಸಂಖ್ಯೆಯನ್ನು ತಡೆಯಲು ನಾವು ಟಿ.ವಿ.ಯ ಮೂಲಕ, ರೇಡಿಯೋಗಳ ಮೂಲಕ ಹಾಗೂ ಬೀದಿ ನಾಟಕಗಳನ್ನು ಮಾಡಿ ತೋರಿಸಿ ಜನಸಂಖ್ಯೆನ್ನು ಕಡಿಮೆ ಮಾಡಿಕೊಳ್ಳಿ ಎಂದು ಉಪದೇಶ ಮಾಡಬಹುದೇ ಹೊರತು ಬೇರೇನನ್ನೂ ಮಾಡುವುದಕ್ಕೆ ಆಗುವುದಿಲ್ಲ. Thisi is no attack on unemployment problem.Stree Shakthi-is it not part of our employment generation effort ? ಒಂದು ಲಕ್ಷ ಸ್ವಸಹಾಯ "ಸ್ತ್ರೀ ಶಕ್ತಿ ಯೋಜನೆಯನ್ನು" ಹಾಕಿಕೊಂಡಿದ್ದೇವೆ. ಇದನ್ನು ನೀವು ಹೇಗೆ ಮಾಡುತ್ತೀರಿ ? ಎಂದು ಕೇಳುತ್ತೀರಿ. ನೀವು ಅವಕಾಶವನ್ನು ಕೊಡಿ, ರಾಜ್ಯದ ಜನರು ನಮಗೆ ಅವಕಾಶವನ್ನು ಕೊಟ್ಟಿದ್ದರೂ ನೀವು ನಮಗೆ ಏಕೆ ಅಡ್ಡಿಪಡಿಸುತ್ತೀರೋ ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಯುವ ಡಾಟ್‌ಕಾಮ್ ಬಗ್ಗೆ ನಾನು ಹೇಳಿದ್ದೇನೆ. ಕೆಲವರಂತೂ ರಾಜ್ಯದ ಮುಖ್ಯಮಂತ್ರಿ ಹುಚ್ಚ, ಇನ್‌ಫರ್ಮೇಶನ್ ಟೆಕ್ನಾಲಜಿ, ಇನ್‌ಫರ್ಮೇಶನ್ ಟೆಕ್ನಾಲಜಿ ಎಂದು ಅದರ ಹಿಂದೆ ಬಿದ್ದಿದ್ದಾನೆ ಎಂದು

ಹೇಳುತ್ತಾರೆ. ಯಾರು ಏನೇ ಹೇಳಲಿ. ಇವೊತ್ತು ಇನ್‌ಫರ್ಮೇಶನ್ ಟೆಕ್ನಾಲಜಿ ಆವಿಷ್ಕಾರದಲ್ಲಿ ಬಹು ದೊಡ್ಡ ಪ್ರಮಾಣದ ಎಂಪ್ಲಾಯ್‌ಮೆಂಟ್ ಆಪರ್‌ಚ್ಯುನಿಟಿ ಇದೆಯೆಂದು ಗುರುತಿಸಿರುವ ಸರ್ಕಾರ ಇದು ಎಂದು ಹೇಳುವುದರಲ್ಲಿ ನನಗೆ ಅಭಿಮಾನವಿದೆ. ಏಕೆಂದರೆ ಎಲ್ಲಿ ಎಂಪ್ಲಾಯ್‌ಮೆಂಟ್ ಪರ್‌ಚ್ಯುನಿಟಿ ಇದೆಯೆಂದು ಗುರುತಿಸುವುದಕ್ಕು ಬುದ್ಧಿವಂತಿಕೆ ಬೇಕು. ಆ ಕೆಲಸವನ್ನು ಈ ಸರ್ಕಾರ ಮಾಡಿದೆ. ಇನ್ನು ಉತ್ತರ ಕರ್ನಾಟಕದ ಬಗ್ಗೆ ಅಲಕ್ಷ್ಯ ಮಾಡಿದ್ದೀರಿ, ನಿರ್ಲಕ್ಷ್ಯ ತೋರಿದ್ದೀರಿ, ಇದರಿಂದ ಕಳೆದ ಐದು ತಿಂಗಳಲ್ಲಿ ರೀಜನಲ್ ಇಂಬ್ಯಾಲೆನ್ಸ್ ಜಾಸ್ತಿಯಾಗಿದೆಯೆಂದು ಕೆಲವರು ಹೇಳಿದ್ದಾರೆ. ನನ್ನ ಮೊದಲ ಬಜೆಟ್‌ನಲ್ಲಿ ಒಂದು ಸಣ್ಣ ಹೆಜ್ಜೆಯನ್ನು ನಾನು ಹಾಕಿದ್ದೇನೆ. ಆ ಹೆಜ್ಜೆ ಏನೆಂದರೆ ನಮ್ಮ ಕಛೇರಿಗಳನ್ನು ವಿಕೇಂದ್ರೀಕರಣ ಮಾಡುವುದಕ್ಕೋಸ್ಕರ ಬೇರೆ ಬೇರೆ ಸ್ಥಳಗಳಿಗೆ ಕಳುಹಿಸುತ್ತಿದ್ದೇನೆ. ಬೆಂಗಳೂರಿನಲ್ಲಿಯೇ ಇರುವವನು, ಬೆಂಗಳೂರಿನಲ್ಲಿ ಮನೆ ಕಟ್ಟಿಕೊಂಡು ಇಲ್ಲಿಯೇ ವಾಸವಾಗಿರುವವನು ಆ ಸ್ಥಳಗಳಿಗೆ ಹೋಗುವುದಿಲ್ಲವೆನ್ನುವ ಅಭಿಪ್ರಾಯವನ್ನು ನೀವು ಹೇಳಿದ್ದೀರಿ. ಇದನ್ನು ಸೂಪರ್‌ವಿಷನ್ ಮಾಡುವುದು ನಮ್ಮ ಜವಾಬ್ದಾರಿ. ಇದನ್ನು ಸೂಪರ್‌ವಿಷನ್ ಮಾಡುವುದಕ್ಕೆ ನಮ್ಮ ಗಮನವನ್ನು ನೀವು ಸೆಳೆದಿದ್ದೀರಿ. ಯಾವ ಯಾವ ಇಲಾಖೆಯಲ್ಲಿ ನಾವು ಯಾವ ಯಾವ ಸಂಸ್ಥೆಗಳನ್ನು ಯಾವ ಯಾವ ಭಾಗಗಳಿಗೆ ಕಳುಹಿಸಿದ್ದೀವಿ, ಆ ಸಂಸ್ಥೆಯ ಅಧಿಕಾರಿಗಳು ಹಾಗೂ ನೌಕರರುಗಳು ಆ ಭಾಗಕ್ಕೆ ಹೋಗದೇ ಇದ್ದರೆ ಅಂಥವರಿಗೆ ಈ ಸದನದ ಮೂಲಕ ಎಚ್ಚರಿಕೆಯನ್ನು ಕೊಡುತ್ತಿದ್ದೇನ ಮತ್ತು ನನ್ನ ಸಹೋದ್ಯೋಗಿಗಳು ಕೂಡ ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅಂಥವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಯಾವ ವಿಧವಾದ ಹೆಟೇಶನ್ ಇಲ್ಲದೇ ಇವೊತ್ತು ಹೇಳುತ್ತಿದ್ದೇನೆ. ಮೈಸೂರಿಗೆ ಹಾಕಿದರೆ ಮೈಸೂರಿಗೆ ಹೋಗಬೇಕು, ಭೀಮರಾಯನಗುಡಿಗೆ ಹಾಕಿದರೆ ಅಲ್ಲಿಗೇ ಹೋಗಬೇಕು, ರಾಯಚೂರಿಗೆ ಹಾಕಿದರೆ ರಾಯಚೂರಿಗೆ ಹೋಗಬೇಕು. ಇದು ಈ ಸರ್ಕಾರದ ನೀತಿ. ಈ ಸರ್ಕಾರದ ನೀತಿಯನ್ನು ಉಲ್ಲಂಘನೆ ಮಾಡುವವರಿಗೆ ಏನು ಮಾಡಬೇಕು ಎಂಬುದಕ್ಕೆ ಸಂಬಂಧಪಟ್ಟಂತೆ ಈ ಸರ್ಕಾರಕ್ಕೆ ಅದರ ಶಕ್ತಿಯ ಅರಿವು ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಗುಜರಾತ್‌ನಲ್ಲಿ 17 ಸಾವಿರ ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿದಾಗ ಗುಜರಾತ್ ಸರ್ಕಾರದ ಧೈರ್ಯವನ್ನು ದೇಶವೇ ಕೊಂಡಾಡಿತು. ನಮ್ಮ ರಾಜ್ಯದಲ್ಲಿ 64 ಸಾವಿರ ವೇಕೆಂಟ್ ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿರುವುದಕ್ಕೆ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳುತ್ತೀರಿ ಎಂದು ನಿರೀಕ್ಷೆ ಮಾಡುತ್ತೇನೆ ಹೊರತು ಅದಕ್ಕಿಂತ ಹೆಚ್ಚು ಏನನ್ನೂ ನಾನು ನಿರೀಕ್ಷೆ ಮಾಡುವುದಿಲ್ಲ. ಇನುನ ಅಗ್ರಿಕಲ್ಚರಿಸ್ಟ್‌ಗೆ ಏನು ಮಾಡಿದ್ದೀರಿ ಎಂದು ಕೇಳಿದ್ದೀರಿ. ಸದ್ಯಕ್ಕೆ ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಸಮಯ ಸಿಗಲಿಲ್ಲ. ಏಕೆಂದರೆ ಅದಕ್ಕೆ ನಾವು ಅವಕಾಶ ಕೊಡಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ನಮಗೆ ವೇಳೆ ಸಿಗಲಿಲ್ಲ.

ಶ್ರೀ ಎಸ್.ಎಂ.ಕೃಷ್ಣ : ಐದು ವರ್ಷಗಳ ಕಾಲ ನಿಮಗೆ ವೇಳೆಯನ್ನು ಕೊಟ್ಟಿದ್ದರಲ್ಲ, ಆಗ ಹೇಳಬೇಕಾಗಿತ್ತು. ಇನ್ನು ಟ್ಯಾಕ್ಸ್ ರಿಲೀಫ್ ಬಗ್ಗೆ ಹೇಳುವುದಾದರೆ, ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಾವು ಕೊಟ್ಟಿರತಕ್ಕಂಥ ಟ್ಯಾಕ್ಸ್ ರಿಲೀಫ್‌ನಲ್ಲಿ ಈ ಬಜೆಟ್ ಒಂದರಲ್ಲಿಯೇ ಕೃಷಿಕರಿಗೆ 80 ಕೋಟಿ ರೂಪಾಯಿಗಳಿಂದ ಟ್ಯಾಕ್ಸ್ ರಿಲೀಫ್‌ನ್ನು ಕೊಟ್ಟಿದ್ದೇವೆ.

ಇನ್ನು ಕೋಲ್ಡ್ ಸ್ಟೋರೇಜ್ ಬಗ್ಗೆ ಹೇಳಬೇಕಾದರೆ, ಇದು ಅಗತ್ಯವಾಗಿ ಆಗಬೇಕಾದಂತಹ ಪ್ರಕ್ರಿಯೆಯಾಗಿದೆ. ನಾವು ಹಣ್ಣುಹಂಪಲುಗಳನ್ನು ರಫ್ತು ಮಾಡಬೇಕು, ಅವುಗಳನ್ನು ರಫ್ತು ಮಾಡಬೇಕೆಂದರೆ cold-storage chain is a pre-requisite. ನಮ್ಮಲ್ಲಿ ಇದುವರೆಗೂ 22 ಕೋಲ್ಡ್ ಸ್ಟೋರೇಜ್‌ಗಳು ಇತ್ತು, ಇದನ್ನು ನೂರಕ್ಕೆ ಹೆಚ್ಚಿಸಬೇಕೆಂಬ ಗುರಿ ಇದೆ. ಇದನ್ನು ಪ್ರೈವೇಟ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ಇದ್ದೇವೆ. ಇದಕ್ಕಾಗಿ ಇನ್ಸೆಂಟಿವ್ ಕೂಡಲೇ ಬೇಕಾಗುತ್ತದೆ, ಆದುದರಿಂದ ಇದನ್ನು ಕೊಡುತ್ತಿದ್ದೇವೆ. ಇದು ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಮೇಜರ್ ಸುಧಾರಣೆಯಾಗಿದೆ. Price Stabilisation Fund-ಇದನ್ನು ನಾವು ಮೊಟ್ಟ ಮೊದಲನೆಯದಾಗಿ ಮಾಡಿದೆವು. Then, doubling of agricultural crop loan. ಎಲ್ಲದಕ್ಕಿಂತಲೂ ಮಿಗಿಲಾಗಿ watershed project being negotiated. ಹಿಂದೆ ವಾಟರ್ ಷೆಡ್‌ಗೋಸ್ಕರ ಜರ್ಮನ್ ಸರ್ಕಾರ 30 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಕೊಡುತ್ತೇವೆಂದು ಹೇಳಿ ಒಂದು ಷರತ್ತು ಹಾಕಿದ್ದರು. ಅದು ಏನೆಂದರೆ separte Watershed Directorate ಮಾಡಿ ಎಂದು ಹೇಳಿದ್ದರು. ಇದಕ್ಕೆ ಸಂಬಂಧಪಟ್ಟಂತಹ ಕಡತಗಳು ಅಗ್ರಿಕಲ್ಚರ್ ಮಿನಿಸ್ಟರ್ ಕಚೇರಿಯಿಂದ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಕಚೇರಿಗೆ, ಅಲ್ಲಿಂದ ಚೀಫ್ ಮಿನಿಸ್ಟರ್ ಆಫೀಸ್‌ಗೆ ಅಲ್ಲಿಂದ ಅಗ್ರಿಕಲ್ಚರ್ ಮಿನಿಸ್ಟರ್ ಆಫೀಸ್‌ಗೆ ಈ ರೀತಿಯಾಗಿ ಓಡಾಡುತ್ತಿದ್ದಾಗ ಜರ್ಮನ್‌ನವರು ಸಾಕಷ್ಟು ಬೇಜಾರಾಗಿ ನಮಗೆ ಅವರು ಏನು 30 ಕೋಟಿ ರೂಪಾಯಿಗಳನ್ನು ಅನುದಾನವಾಗಿ ಕೊಡುವುದಕ್ಕೆ ಮುಂದೆ ಬಂದಿದ್ದರೋ ನಿಮ್ಮ ಸಹವಾಸವೇ ಬೇಡವೆಂದು ನಮಗೆ ಕೊಡಬೇಕೆಂದಿದ್ದ ಗ್ರಾಂಟ್ ಅನ್ನು ವಾಪಸ್ಸು ಹಿಂದಕ್ಕೆ ತೆಗೆದುಕೊಂಡು ಹೋದರು. ಇವತ್ತು ನಾವು ಮಾಡಿದ ಮೊಟ್ಟ ಮೊದಲನೆಯ ಕೆಲಸವೆಂದರೆ ರಾಜಸ್ಥಾನವನ್ನು ಬಿಟ್ಟರೆ ಕರ್ನಾಟಕ ರಾಜ್ಯದಲ್ಲೆ ಒಣಭೂಮಿ ಇರುವಂಥಾದ್ದು. ಇದನ್ನು ನಾವು ಗುರುತಿಸಿ ಅಗತ್ಯವಾದ ವಾಟರ್ ಶೆಡ್ ಡೆವಲಪ್‌ಮೆಂಟ್‌ಗೋಸ್ಕರ ಒಂದು ವಿಶೇಷವಾದಂತಹ Directorate ಅತೀ ಅವಶ್ಯಕವೆಂಬುದನ್ನು ಗಮನಿಸಿ ತತ್‌ಕ್ಷಣ ಜರ್ಮನ್ ರಾಯಭಾರಿಯವರಿಗೆ ಕಾಗದವನ್ನು ಬರೆದು ನೀವು ಕಾರಣಾಂತರದಿಂದ ಹಿಂದೆ ಕೊಡಬೇಕಾಗಿದ್ದಂತಹ bilateral aid ಏನು ಇದೆ ಅದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಆದರೆ ಈಗ ಮತ್ತೊಂದು ಸರ್ಕಾರ ಬಂದಿದೆ. ಆದುದರಿಂದ ನಾವು ಈ ಸುಧಾರಣೆಗಳನ್ನು ಸ್ವಇಚ್ಛೆಯಿಂದ ತಂದಿದ್ದೇವೆ.

ಇದರಿಂದ ಜನ ಕಲ್ಯಾಣವಾಗುತ್ತದೆನ್ನುವ ದೃಷ್ಟಿಯಿಂದ ತಾವು ಪುನಃ ಇದನ್ನು ಮರುಪರಿಶೀಲನೆ ಮಾಡಿ ಎಂದು bilateral aid ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ, ಇದೆಲ್ಲವೂ ಕೃಷಿಕರ ಹಿತದೃಷ್ಟಿಗೋಸ್ಕರ ಗಮನದಲ್ಲಿಟ್ಟುಕೊಂಡು ಮಾಡುತ್ತಿದ್ದೇವೆ. ಅದರಲ್ಲೂ ಈ ಒಣ ಭೂಮಿ ಇರುವಂತಹ ಜನರನ್ನು ಕೇಳುವವರು, ಹೇಳುವವರು ಯಾರು ಇಲ್ಲ. ಅದುದರಿಂದ ಇವತ್ತು ಮೊಟ್ಟಮೊದಲನೆಯದಾಗಿ ದೊಡ್ಡ ಪ್ರಮಾಣದಲ್ಲಿ ಈ ಸಮಸ್ಯೆಗೆ ಸ್ಪಂದಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಐವತ್ತು ಸಾವಿರ ಕೆರೆಗಳು ಇವೆ. ಈಗ ಹೊಸ ಕೆರೆಗಳನ್ನು ಮಾಡುವುದಕ್ಕಾಗುವುದಿಲ್ಲ, ಇರುವಂಥ ಕೆರೆಗಳು ಎಲ್ಲಿ ಇದೆಯೋ ಅಲ್ಲಿ ಪುನಃಶ್ಚೇತನ ಮಾಡುವಂತಹ ಕಾರ್ಯ ಕರ್ನಾಟಕ ರಾಜ್ಯದಲ್ಲಿ ಅಗತ್ಯವಾಗಿ ಆಗಬೇಕಾಗಿದೆ. ನಮ್ಮಲ್ಲಿ ದೊಡ್ಡ ದೊಡ್ಡ ಕೆರೆಗಳು ಇವೆ ಎಂಬುದನ್ನು ನಾನು ಬಲ್ಲೆ ಎಲ್ಲೆಲ್ಲಿ ದೊಡ್ಡ ದೊಡ್ಡ ಕೆರೆಗಳು ಇವೆ, ಅವುಗಳಲ್ಲಿ ಇಪ್ಪತ್ತೈದು ಸಾವಿರ ಕೆರೆಗಳನ್ನು ಆದ್ಯತೆಯ ಮೇಲೆ poverty alleviation programme ನಲ್ಲಿ ತರುವಂತಹ ಉದ್ದೇಶವೆನೆಂದರೆ ಅದಕ್ಕೆ ಶೇ. 3ರಷ್ಟು ಬಡ್ಡಿಯನ್ನು

ಕೊಡುತ್ತೇವೆ. ಇದಕ್ಕೆ ಬೇಕಾದಂತಹ ಹಣ ಸುಮಾರು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತು ಮಧ್ಯಾಹ್ನ ವಿಶ್ವಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಬರುತ್ತಿದ್ದಾರೆ. ಅವರ ಜೊತೆಯಲ್ಲಿ ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡುವಂತಹ ಅಂಶವಾಗಿದೆ. ಇದರ ಬಗ್ಗೆ ವಿಶ್ವ ಬ್ಯಾಂಕ್‌ನವರ ವಿಶೇಷ ಗಮನ ಕರ್ನಾಟಕ ರಾಜ್ಯದ ಕಡೆಗೆ ಆಗಬೇಕು. ಏಕೆಂದರೆ ಈ ಕೆರೆ, ಅಚ್ಚುಕಟ್ಟು ಪ್ರದೇಶದಲ್ಲಿರುವಂತಹ ಜನರು ಸಣ್ಣ ರೈತರು, ಮಾರ್ಜಿನಲ್ ರೈತರು, ದಲಿತ ರೈತರು, ಹಿಂದುಳಿದ ವರ್ಗದ ರೈತರುಗಳು-ಇವರುಗಳೇ ಹೆಚ್ಚಾಗಿ ಇದ್ದಾರೆ. ನಾನು ಮತ್ತೊಂದು ಭರವಸೆಯನ್ನು ಕೊಡುತ್ತೇನೆ. ಇದನ್ನು ವಿಶ್ವಬ್ಯಾಂಕ್‌ನವರು ನಮಗೆ ಭಕ್ಷೀಸು ಎಂದು ಕೊಡಬೇಕಾಗಿಲ್ಲ. ವಾಟರ್ ಚಾರ್ಜ್ ಎಂದು ಕೋ-ಆಪರೇಟಿವ್ ಸೊಸೈಟಿಯವರು ಹಾಕುತ್ತಾರೆ. ನಾವು ಯಾವ ಕೆರೆಗಳನ್ನು ರೀ-ಕನ್‌ಸ್ಟ್ರಕ್ಟ್ ಮಾಡುತ್ತೇವೆ. I think, it is necessary.

ಅವರು ರೈತ ಫಲಾನುಭವಿಗಳು ಮುನ್ನೂರು, ನಾಲ್ಕು ನೂರು ಜನರಿರಬಹುದು. ದೊಡ್ಡ ಕೆರೆಗಳಾದರೂ ಪುನಃಶ್ಚೇತನವಾದರೆ ಎಲ್ಲರೂ ವಾಟರ್ ಚಾರ್ಜ್ ಕೊಡುವುದಕ್ಕೆ ತಯಾರಿದ್ದಾರೆ. ಅವರು ಬೆಳೆಯನ್ನು ಬೆಳೆಯುವುದಕ್ಕೆ ಬೇಕಾಗುವಷ್ಟು ನೀರನ್ನು ಸಂಗ್ರಹಣೆ ಮಾಡಿ ಸರಿಯಾದಂತಹ ಟ್ಯೂಬುಗಳನ್ನು ಅಳವಡಿಸಿ ಅದರ ಮೂಲಕ ವ್ಯವಸ್ಥಿತವಾಗಿ ಈ ಒಣ ಭೂಮಿಯವರಿಗೆ ಕೊಡುವಂತಹ ಪ್ರಯತ್ನವನ್ನು ಮಾಡಿದರೆ ಖಂಡಿತವಾಗಿಯೂ ಈ ದೇಶದ ನೇಗಿಲ ಯೋಗಿಗೆ ಅನುಕೂಲವಾಗುತ್ತದೆ. ಇವರಿಗೆ ತೆರಿಗೆಯನ್ನು ಹಾಕುವಂತಹ ಕೆಲಸವನ್ನು ವಾಟರ್ user ಕೋ-ಆಪರೇಟಿವ್ ಸೊಸೈಟಿ ಎಂದು ಏನು ಮಾಡುತ್ತೇವೆ, ಅವರು ಪ್ರತಿಯೊಂದು ಕೆರೆಗಳ ಅಚ್ಚುಕಟ್ಟಿನ ಆಧಾರದ ಮೇಲೆ ತೆರಿಗೆಯನ್ನು ಹಾಕುವಂಥಾದ್ದು, ಮತ್ತು ಮೆಂಟೇನನ್ಸ್ ಕೂಡ ಅವರಿಗೆ ಸೇರಿದಂಥಾದ್ದು. ನಮ್ಮ ವಿಕೇಂದ್ರಿಕರಣ ತತ್ವದಲ್ಲಿ ಇದು ಒಂದು ಮುಖ್ಯವಾದಂತಹ ಅಂಶವಾಗಿದೆ, ಅದನ್ನು ನಾವು ಗುರುತಿಸಿದ್ದೇವೆ. ಇನ್ನು ನಾವು ವಿದ್ಯುತ್ ಉತ್ಪಾದನೆಗೆ ಹೆಚ್ಚು ಗಮನವನ್ನು ಕೊಡುತ್ತಿಲ್ಲವೆಂದು ಒಬ್ಬ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ನೀವು ಯಾವುದೋ ಕಮಿಟಿಯನ್ನು ಮಾಡಿದಿರಿ, ಅವರು ವರದಿಯನ್ನು ಕೊಟ್ಟರು. ಕೊಜೆಂಟ್ರಿಕ್ಸ್‌ನವರು ಬಂದರು, ಮತ್ತೆ ವಾಪಸ್ಸು ಹೋದರು. ನಮ್ಮ ದೇಶಕ್ಕೆ ಯಾರಾದರೂ ಬಂದರೆ ಅವರನ್ನು ಕಡ್ಡಾಯವಾಗಿ ಇಲ್ಲೆ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಇಲ್ಲಿಗೆ ಬಂದರು ಮತ್ತೆ ವಾಪಸ್ಸು ಹೋದರೂ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಮಾತ್ರ ಆ ಹೆಸರಿನಲ್ಲೆ ಮುಂದುವರೆಯುತ್ತಿದೆ. ಅದು ಚೈನಾ ಲೈಟಿಂಗ್ ಪವರ್ ಅಥವಾ ಪವರ್ ಅಂಡ್ ಲೈಟ್ ಎರಡರಲ್ಲಿ ಒಂದು, ಅವರು ವಾಪಸ್ಸು ಹೋದ ಬಗ್ಗೆ ಕೇಳಲಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಕೊಜೆಂಟ್ರಿಕ್ಸ್ ಕಂಪೆನಿಯವರು ವಾಪಸ್ಸು ಹೋದ ಮೇಲೆ ಅಗ್ರಿಮೆಂಟ್ ಆಗಿತ್ತು. ಅವರ ಜೊತೆಗೆ ಆಗಿದ್ದ ಅಗ್ರಿಮೆಂಟ್ ಇವರಿಗೆ ಟ್ರಾನ್ಸ್‌ಫರ್ ಮಾಡುವುದಕ್ಕಾಗುತ್ತದೆಯೆ ? The agreement is with Cogentrix. ನಾಳೆ ದಿವಸ ಯಾರಾದರೂ public litigation ಹಾಕಿ ಮತ್ತೆ ಡಿಲೇ ಆಗಬಹುದು. ಆಗ ಮತ್ತೆ ಹೊಸದಾಗಿ ಬಿಡ್ ಕರೆಯಲಾಗುತ್ತದೆಯೆ ? ಎಂಬ ಪ್ರಶ್ನೆಯನ್ನು ನಾನು ಕೇಳಿದ್ದು.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಪ್ರಕಾಶ್ ಹೆಗಡೆಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ legal niceties ಗೆ ಹೋಗುವುದಕ್ಕೆ ತಯಾರಿಲ್ಲ. ಯಾಕೆಂದರೆ ಅವರು ನಮ್ಮ ಮುಂದೆ ಬಂದಿದ್ದಾರೆ, ಜೊತೆಗೆ ಟಾಟಾ ಕಂಪೆನಿಯವರನ್ನು ಕರೆದುಕೊಂಡು ಬರುತ್ತೇವೆಂದು

ಹೇಳಿದ್ದಾರೆ. ಸರ್ಕಾರ ಯಾರಿಗೂ ಎಸ್ಕ್ರೋ ಅಕೌಂಟ್ ಕೊಡುವುದಿಲ್ಲವೆಂದು ತೀರ್ಮಾನ ಮಾಡಿದೆ, ಆದರೂ ಸಂತೋಷದ ವಿಚಾರವೇನೆಂದರೆ ಎಸ್ಕ್ರೋ ಅಕೌಂಟ್ ಕೊಡದಿದ್ದರೂ ಕೂಡ ಕೆಲವು ಖಾಸಗಿಯವರು ಪವರ್ ಪ್ರಾಜೆಕ್ಟ್ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ನಾವು ಅವರಿಗೆ ಮುಕ್ತವಾದಂತಹ ಅವಕಾಶವನ್ನು ಕೊಡುವಂಥಾದ್ದು ನಮ್ಮ ಜವಾಬ್ದಾರಿಯಾಗಿದೆ ಕೊಜೆಂಟ್ರಿಕ್ಸ್ ಕಂಪೆನಿಯ ವಿಚಾರದಲ್ಲಿ ಮುಂದೆ ಏನು ಬೆಳವಣಿಗೆಗಳು ಆಗುತ್ತದೆನ್ನುವ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಕೇಂದ್ರ ಸರ್ಕಾರದವರು ಕೌಂಟರ್‌ಗ್ಯಾರಂಟಿಯನ್ನು ಕೊಟ್ಟಿದ್ದಾರೆ. ಅವರ ನಿಲುವು ಏನು ಏನ್ನುವಂಥಾದ್ದನ್ನು ಕೂಡ ನಾವು ಗಮನಿಸಿಕೊಳ್ಳಬೇಕಾಗುತ್ತದೆ. ನಾವು ಈಗಾಗಲೇ ರಾಜ್ಯಸರ್ಕಾರದ ಚೌಕಟ್ಟಿನಲ್ಲಿ ಮಾಡಿದ್ದೇವೆ. ಜುಲೈ 31ನೇ ತಾರೀಖಿನಿಂದ ರಾಯಚೂರು ಥರ್ಮಲ್ ಸ್ಟೇಷನ್ 7ನೇ ಘಟಕದ ಕೆಲಸವನ್ನು ನಾವು ಪ್ರಾರಂಭ ಮಾಡುತ್ತೇವೆ. ಇದಕ್ಕೆ ಯಾರ ಪರವಾನಗಿಯೂ ಬೇಕಾಗಿಲ್ಲ, ನಾವು ಯಾರ ಹತ್ತಿರವೂ ಹಣವನ್ನು ಕೇಳಬೇಕಾಗಿಲ್ಲ. ನಾವು ಹಿಂದಿನ 6 ಘಟಕಗಳನ್ನು ಯಾವ ರೀತಿಯಾಗಿ ಹಣವನ್ನು ಶೇಖರಣೆ ಮಾಡಿ 1400 ಮೆಗಾವಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದೇವೆ, ಅದೇ ರೀತಿಯಲ್ಲಿ 210 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಬಹುದು. ಮತ್ತೆ ವಿಜಯನಗರದಲ್ಲಿ 500 ಮೆಗಾವಾಟ್ ಸಾಮರ್ಥ್ಯವಿರುವ ಘಟಕ ಪ್ರಾರಂಭವಾಗಿದೆ. ಇದು ಒಂದು ಸಾವಿರ ಮೆಗಾವಾಟ್ ಉತ್ಪಾದನೆಯವರೆಗೆ ಮಾಡುವಂತಹ ಪವರ್ ಜನರೇಶನ್ ಸೆಟ್ ಅಪ್ ಅನ್ನು ಸ್ಥಾಪನೆ ಮಾಡಬೇಕೆಂದು ಇದಕ್ಕೆ ಐ.ಸಿ.ಐ.ಸಿ.ಯವರು ಮುಂದೆ ಬಂದಿದ್ದಾರೆ. ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ಐ.ಸಿ.ಐ.ಸಿ.ಯವರು ಪವರ್ ಸೆಕ್ಟಾರ್‌ನಲ್ಲಿ ನಮ್ಮ ಜೊತೆಗೆ ಸಹಭಾಗಿಗಳಾಗುತ್ತೇವೆಂದು ಇನ್‌ಪ್ರಿನ್ಸಿಪಲ್ ಅಗ್ರಿಮೆಂಟ್‌ಗೆ ಬಂದಿದ್ದಾರೆ. ಅವರು ಈ ರೀತಿಯಾಗಿ ಕರ್ನಾಟಕ ರಾಜ್ಯದೊಂದಿಗೆ ಮಾತ್ರವೆನ್ನುವಂಥಾದ್ದನ್ನು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ. ಈ ಹಿಂದೆ ಐ.ಸಿ.ಐ.ಸಿಯವರು ಇಲ್ಲಿಗೆ ಬಂದಿಲ್ಲ, ಇದಕ್ಕೆ ಪ್ರಯತ್ನ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ನಮ್ಮ ಸರ್ಕಾರ ಪ್ರಯತ್ನ ಮಾಡಿತು, ಮತ್ತೆ ಯಶಸ್ವಿಯಾಯಿತೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಪವರ್ ಪ್ಲಾಂಟ್‌ಗೆ ಸಂಬಂಧಿಸಿದಂತೆ, ಎಲ್ಲಾ ಫಾರ್ಮಾಲಿಟೀಸ್ ಅನ್ನು ಕಂಪ್ಲೀಟ್ ಮಾಡಿ, ಫೈನಾನ್ಷಿಯಲ್ ಏಜೆನ್ಸಿ ಒಂದು ಮಾತ್ರ ಫಿಕ್ಸ್ ಆಗಿರಲಿಲ್ಲ. It was already done and every approval was got.

ಶ್ರೀ ಎಸ್.ಎಂ.ಕೃಷ್ಣ : ಐಸಿಐಸಿಯವರು ಕರೆದುಕೊಂಡು ಬಂದಿರುವುದು ಅದೇ ಉದ್ದೇಶದಿಂದ we are filling it. ಯಾರ ಜೊತೆ ಫೈನಾನ್ಸ್ ಮಾಡಬೇಕೆನ್ನುವುದು ತೀರ್ಮಾನವಾಗಿರಲಿಲ್ಲ ಅದನ್ನು ಮಾಡಿದ್ದೇನೆನ್ನುವುದನ್ನು ಮಾತ್ರ ಸದನಕ್ಕೆ ಒಪ್ಪಿಸುತ್ತಿದ್ದೇವೆ ಅಷ್ಟೆ. ಬಿಡದಿಯಲ್ಲಿ 210 ಮೆಗಾವಾಟ್ ಪವರ್ ಪ್ಲಾಂಟ್ ಬರುತ್ತಿದೆ. ಇಲ್ಲಿ ಇದನ್ನು ಮಾಡಬೇಕಾದ್ದು ಅನಿವಾರ್ಯವಾಗಿದೆ. ಕಾರಣ Bangalore is the biggest power consumption centre for us. ನಮ್ಮ ಕರ್ನಾಟಕ ರಾಜ್ಯದಲ್ಲಿ ದೊಡ್ಡ ಡಿಸ್-ಅಡ್ವಾಂಟೇಜ್ ಏನೆಂದರೆ ಎಲ್ಲಿ ಪವರ್ ಬಳಸಲಾಗುತ್ತಿದೆ ಅಲ್ಲಿ ಅದರ ಉತ್ಪಾದನೆಯಾಗುತ್ತಿಲ್ಲ. ಅದನ್ನು ಕಾಳಿ, ರಾಯಚೂರು, ರಾಮಗುಂಡಂ ಅಥವಾ ಕೇಂದ್ರ ಸರ್ಕಾರದಿಂದ ಪಡೆಯಬೇಕಾಗುತ್ತದೆ. ಅದನ್ನು ತರುವಾಗ ಸಾಕಷ್ಟು ಟ್ರಾನ್ಸ್‌ಮಿಷನ್ ಲಾಸ್ ಆಗುತ್ತದೆ, ಆದುದರಿಂದ ಹೆಚ್ಚು ಆದ್ಯತೆಯನ್ನು ಕೊಟ್ಟು ಕೆಪಿಸಿ ಹಾಗೂ ಮತ್ತೊಂದು ಸಂಸ್ಥೆಯ ಜೊತೆಯಲ್ಲಿ ಮಾಡಿಕೊಂಡಿರುವ It is a joint sector project which is being promoted. ಸರ್ಕಾರ 90 ಮೆಗಾವಾಟ್ ಮಾಡಬೇಕಾಗಿದೆ,

ಭೂಸ್ವಾಧೀನದ ಬಗ್ಗೆ ಸ್ವಲ್ಪ ಜಿಜ್ಞಾಸೆ ಇದೆ, ಅದನ್ನು ನೋಡಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರ ತಲಚೇರಿಯಿಂದ 460 ಮೆಗಾವಾಟ್ ರಾಮಗುಂಡಂನಿಂದ 75 ಮೆಗಾವಾಟ್ ಕೈಗಾದಿಂದ ಸುಮಾರು 54 ಮೆಗಾವಾಟ್ ಇತ್ತೀಚೆಗೆ ಪ್ರಾರಂಭವಾದುದರಿಂದ ಕೊಡುತ್ತಿದ್ದಾರೆ, ಕೈಗಾದಿಂದ ಎರಡು ಸೇರಿದರೆ ಒಟ್ಟು 124 ಮೆಗಾವಾಟ್ ಬರುತ್ತಿದೆ. ಇನ್ನು ITPS- Tanneerbavi, Atria, Tata, Royalseema, Peenya, China Power & Light.

ಇವೆಲ್ಲಾ ಇವೆ. ಒಟ್ಟಿನಲ್ಲಿ ನಮ್ಮ ಸಾಮರ್ಥ್ಯ ಮುಂದಿನ ಐದು ವರ್ಷಗಳಲ್ಲಿ 3000 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಬೇಕಾದ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಸಭಾನಾಯಕರ ಆಯವ್ಯಯ ಭಾಷಣದಲ್ಲಿ ಶೇಕಡ 30ರಷ್ಟು ಪವರ್ ಥೆಫ್ಟ್ ಇದೆ, and 35% transmission loss. ಇದೆಯೆಂದು ಕೇಂದ್ರ ಸಚಿವರಾದ ಮಾನ್ಯ ಕುಮಾರಮಂಗಳಂರವರು ತಮ್ಮ ಜೊತೆಯಲ್ಲಿದ್ದಾಗ ಇದನ್ನು ತಿಳಿಸಿದ್ದಾರೆ. ಬೇಡಿಕೆ ಇರುವುದು 3500 ಮೆಗಾವಾಟ್ ಆದರೆ ಉತ್ಪಾದನೆ ಶೇಕಡ 50, ಇದರ ಬಗ್ಗೆ ಏನು ಮಾಡುತ್ತೀರೆಂದು ತಮ್ಮ ಆಯವ್ಯಯ ಭಾಷಣದಲ್ಲಿ ಏನನ್ನು ಹೇಳಲಿಲ್ಲ. It is a juge loss to power now in this sector. ಶೇಕಡ 30ರಷ್ಟು ಮಾತ್ರ ಮೀಟರ್ ಅಳವಡಿಸಲಾಗಿದೆ. ಇನ್ನು ಶೇಕಡ 70ರಷ್ಟು ಮೀಟರ್ ಅಳವಡಿಸಿಲ್ಲ, a huge loss in this sector.

ಶ್ರೀ ಎಸ್.ಎಂ.ಕೃಷ್ಣ : ನಮ್ಮ ರಾಜ್ಯದಲ್ಲಿ ಶೇಕಡ 34, ದೆಹಲಿಯಲ್ಲಿ ಶೇಕಡ 54 ಇತರೆ ರಾಜ್ಯಗಳಲ್ಲಿ ಶೇಕಡ 40ರಷ್ಟು ಟ್ರಾನ್ಸ್‌ಮಿಷನ್ ಲಾಸ್ ಎಂದು ಹೇಳಲಾಗುತ್ತಿದೆ. ಎಲ್ಲಿಯವರೆಗೆ ಮೀಟರ್‌ಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದಿಲ್ಲ ಅಲ್ಲಿಯವರೆಗೆ ಯಾವ್ಯಾವ ಕ್ಷೇತ್ರಕ್ಕೆ ಶೇಕಡ ಎಷ್ಟೆಷ್ಟು ವಿದ್ಯುತ್ ಕೊಡುತ್ತಿದ್ದೇವೆ ಎನ್ನುವ ಫರ್ಮ್ ಡಾಟ ನಮಗೆ ಸಿಗುವುದಿಲ್ಲ. ಮಾಹಿತಿ ಲಭ್ಯವಾಗುವುದಿಲ್ಲ. ಎರಡನೆಯದಾಗಿ ಈ ಟ್ರಾನ್ಸ್‌ಮಿಷನ್ ಲಾಸ್ ಕೇವಲ ಕರ್ನಾಟಕಕ್ಕೆ ಸೀಮಿತವಾದ ಬೆಳವಣಿಗೆಯಲ್ಲ, ಇಡಿ ರಾಷ್ಟ್ರದಲ್ಲಿ ಪ್ರತಿಯೊಂದು ರಾಜ್ಯವನ್ನು ಆವರಿಸಿರುವ ಬೆಳವಣಿಗೆ, ಈ ಬೆಳವಣಿಗೆಗೆ ಅವಶ್ಯಕವಾಗಿ ಕಡಿವಾಣವನ್ನು ಹಾಕಬೇಕೆನ್ನುವ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ ಹೇಗೆ ಮಾಡಬೇಕೆನ್ನುವ ಬಗ್ಗೆ ನಾನಾ ಸಲಹೆಗಳು ಬರುತ್ತಿವೆ, ನಾವು ಆ ಎಲ್ಲಾ ಸಲಹೆಗಳನ್ನು ಗಮನಿಸುತ್ತೇವೆ. ಈಗ ನಮ್ಮ ಪವರ್ ರಿಫಾರ್ಮ್ಸ್‌ನಲ್ಲಿ ಹೆಚ್ಚು ಆದ್ಯತೆ ಪಡೆದಿರುವುದು ಈ ಟ್ರಾನ್ಸ್‌ಮಿಷನ್ ಲಾಸ್ ಅನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ತೀವ್ರವಾದ ಪ್ರಯತ್ನ ಮಾಡಬೇಕಾಗಿರುವುದಾಗಿದೆ. ಈ ಲಾಸ್ ಅನ್ನು ಕಡಿಮೆ ಮಾಡುವುದಕ್ಕೆ ಕೆಪಿಸಿಎಲ್-ನವರಿಗೆ ನಾವು ಸ್ಪಷ್ಟವಾದ ನಿರೂಪಣೆಯನ್ನು ಕೊಟ್ಟಿದ್ದೇವೆ. ಈ ಬೇಸಿಗೆ ವಿದ್ಯುತ್ ದೃಷ್ಟಿಯಿಂದ ಕಠಿಣವಾಗಿರುತ್ತದೆಂದು ಹೇಳಿದ್ದೇ. ಆದರೆ ಇವತ್ತು ನಾವು ಉಪಯೋಗಿಸುವಷ್ಟು ವಿದ್ಯುತ್ ಪ್ರಮಾಣ ರಾಜ್ಯದಲ್ಲಿ ಹಿಂದೆ ಇರಲಿಲ್ಲ. ಇವತ್ತು ಪ್ರತಿದಿವಸ 87.5 ಮಿಲಿಯನ್ ಯೂನಿಟ್ ವಿದ್ಯುತ್ ಉಪಯೋಗ ಮಾಡುತ್ತಿದ್ದರೆ, ಕಳೆದ ಸಾಲಿನಲ್ಲಿ ಪ್ರತಿ ವರ್ಷ 77.5 ಅಥವಾ 77.10 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಉಪಯೋಗ ಮಾಡುತ್ತಿದ್ದೆವು, ಈ ಅವಧಿಯಲ್ಲಿ 10 ಮಿಲಿಯನ್ ಯೂನಿಟ್ ಹೆಚ್ಚಾಗಿದೆ. ಆದರೂ ಕೂಡ ಲೋಡ್ ಶೆಡ್ಡಿಂಗ್ ಇಲ್ಲ, ಪವರ್ ಕಟ್ಟಿಲ್ಲ, ಆದರೆ ಗ್ರಾಮಾಂತರ ಪ್ರದೇಶಗಳಿಗೆ ಕೊಡುತ್ತಿರುವ ವಿದ್ಯುತ್ ಗುಣಮಟ್ಟದಲ್ಲಿ ಸುಧಾರಣೆಯಾಗಿಲ್ಲವೆನ್ನುವ ಅರಿವು ನನಗಿದೆ. ವೋಲ್ಟೇಜ್

ಫ್ಲಕ್ಚುಯೇಷನ್ ಇದೆ, ಪವರ್ ಯಾವಾಗ ಸಿಗುತ್ತದೆನ್ನುವುದರ ಬಗ್ಗೆ ದೃಢವಾದ ಮಾಹಿತಿ ಇಲ್ಲ. ಆದುದರಿಂದ ಇನ್ನು 7-8 ತಿಂಗಳಲ್ಲಿ ಈ ವೊಲ್ಟೇಜ್ ಸ್ಟೆಬಿಲಿಟಿಗೋಸ್ಕರ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಮಾನ್ಯ ಸದಸ್ಯರೊಬ್ಬರು ಟ್ರಾನ್ಸ್‌ಮಿಷನ್‌ಗೆ ಹೆಚ್ಚು ಗಮನಕೊಟ್ಟಿಲ್ಲವೆಂದು ಹೇಳುತ್ತಿದ್ದರು. ಇನ್ನೆರಡು ವರ್ಷಗಳಲ್ಲಿ ಈ ಟ್ರಾನ್ಸ್‌ಮಿಷನ್‌ಗೆ 6500 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ ಎಂದು ಆಯವ್ಯಯ ಭಾಷಣದಲ್ಲಿ ನಾನು ಹೇಳಿದ್ದೇನೆ. ಈ ವರ್ಷದ ನವೆಂಬರ್ ಒಳಗೆ 1800 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇವೆ, ಆ ಕೆಲಸ ಈಗ ನಡೆಯುತ್ತಿದೆ. ಎಲ್ಲೆಲ್ಲಿ. ಪ್ರೊಗ್ರಾಮ್ ತೆಗೆದುಕೊಂಡಿದ್ದೇವೆ ಅಲ್ಲೆಲ್ಲಾ ಕೆಲಸ ನಡೆಯುತ್ತಿರುವುದನ್ನು ನಾನು ನೋಡಿದ್ದೇನೆ. ಕೆಲವು ಮಂತ್ರಿಗಳು ಜಿಲ್ಲೆಗಳನ್ನು ರಿವ್ಯೂ ಮಾಡಲಿಲ್ಲ, ಮೂರ್‍ನಾಲ್ಕು ಜಿಲ್ಲೆಗಳಲ್ಲಿ ಅದನ್ನು ಮಾಡಿರಬಹುದು ಎನ್ನುವ ಸಾರಸಗಟಾದ ಹೇಳಿಕೆಯಲ್ಲಿ ಸತ್ಯವಿಲ್ಲವೆಂದು ನಾನು ಹೇಳಬಯಸುತ್ತೇನೆ. ಪ್ರತಿಯೊಬ್ಬ ಮಂತ್ರಿಯೂ ಕೂಡ ತನಗೆ ವಹಿಸಿರುವ ಜಿಲ್ಲೆಯ ರಿವ್ಯೂ ಅನ್ನು ಮಾಡುತ್ತಿದ್ದಾರೆನ್ನುವುದು ನನ್ನ ಸ್ಪಷ್ಟವಾದ ನಂಬಿಕೆ. ಮಾನ್ಯ ಮಂತ್ರಿಗಳಲ್ಲದೆ ಮುಖ್ಯಮಂತ್ರಿಗಳೂ ಕೂಡ ರಿವ್ಯೂ ಮಾಡುತ್ತಿದ್ದಾರೆನ್ನುವುದು ವಿಶೇಷ. ಈಗಾಗಲೇ ಸುಮಾರು 15 ಜಿಲ್ಲೆಗಳಲ್ಲಿ ನಾನೇ ರಿವ್ಯೂ ಮಾಡಿದ್ದೇನೆ, ಆಡಳಿತವನ್ನು ಟ್ಯೂನ್-ಅಪ್ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇನೆ. ಇನ್ನು ಸ್ಟಾಂಪ್ ಡ್ಯೂಟಿಯ ಬಗ್ಗೆ ಕೆಲವು ಸಲಹೆಗಳು ಬಂದಿವೆ, ಅದನ್ನು ನಾನು ಪರಿಶೀಲಿಸುತ್ತೇನೆ ಎಂದು ತಿಳಿಸಬಯಸುತ್ತೇನೆ. ಇದರಲ್ಲಿ ಹೊಸ ಸ್ಕೀಂಗಳು ಇಲ್ಲ, ಹಳೆಯ ಭಾಷಣ, ಬಂಡವಾಳವಿಲ್ಲದ ಬಡಾಯಿ ಭಾಷಣ, ಕನ್ನಡಿಯಲ್ಲಿನ ಗಂಟು, ರೂಪದಲ್ಲಿ ಸುಂದರವಾಗಿದೆ, ಭಾಷಣವನ್ನು ಚೆನ್ನಾಗಿ ಓದಿದರು ಎಂದು ಹೇಳಿರುವುದು, ಇವೆಲ್ಲಾ ಆಯವ್ಯಯದ ಬಗೆಗಿನ ಟೀಕೆಗಳಲ್ಲ. ಆಯವ್ಯಯ ಟೀಕೆಗೆ ನನ್ನ ಡಿಕ್ಷನರಿಯಲ್ಲಿ ಬೇರೆ ಅರ್ಥವೇ ಇದೆ. ಹೊಸ ಸ್ಕೀಂಗಳು ಇಲ್ಲವೆಂದು ಹೇಳಲಾಗಿದೆ, ಯುವಕಾಂ ಹೊಸ ಸ್ಕೀಂ ಅಲ್ಲವೇ, ಜಲಸಂವರ್ಧನೆ ಹೊಸ ಸ್ಕೀಂ ಅಲ್ಲವೇ? ಇನ್ನು ಹೆಸರುಗಳನ್ನು ಬಹಳ ಮೋಜಾಗಿ ಕೊಡಲಾಗಿದೆ ಎಂದು ಹೇಳಲಾಗಿದೆ ಹಾಗೆ ಕೊಡುವುದರಲ್ಲಿ ತಪ್ಪೇನು? ಹೆಸರಿನಲ್ಲಿ ತಪ್ಪನ್ನೇತಕ್ಕೆ ಹುಡುಕುತ್ತಿದ್ದೀರಿ, ಕಂಟೆಂಟ್‌ನಲ್ಲಿ ತಪ್ಪು ಹುಡುಕಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಬಂಗಾರಪ್ಪನವರ ಕಾಲದಲ್ಲಿ, ಆಶ್ರಯ, ಆರಾಧನೆ, ಅಕ್ಷಯ ಇಂತಹ ಯೋಜನೆಗಳಿದ್ದವು. ತಮ್ಮ ಕಾಲದಲ್ಲಿ ಸ್ತ್ರೀ ಶಕ್ತಿ, ಸ್ವಚ್ಛ, ಸ್ವಸ್ತಿ ಈ ರೀತಿಯ ಯೋಜನೆಗಳಿವೆ ಒಳ್ಳೆಯದು. ನಮ್ಮ ಕಾಲದಲ್ಲಿ ಬೇರೆ ರೀತಿಯ ಹೆಸರುಗಳನ್ನು ಇಟ್ಟುಕೊಂಡಿದ್ದೆವು.

11.40 ಎ.ಎಂ.

ಶ್ರೀ ಎಸ್.ಎಂ.ಕೃಷ್ಣ : ನೀವ್ಯಾರಾದರು ಹೆಸರು ಬದಲಾವಣೆ ಮಾಡಿಕೊಳ್ಳಲು ಸಲಹೆ ಮಾಡಿದರೆ ನಾನು ಅದನ್ನು ಮಾಡಲು ಸಿದ್ಧನಿದ್ದೇನೆ. ನಾನು ಸೃಷ್ಟಿ ಮಾಡಿದಂಥ ಯೋಜನೆಗೆ ನಾನು ಒಂದು ಹೆಸರನ್ನು ಇಟ್ಟೆ. ಈಗ ನೀವು ಆ ಹೆಸರು ಸರಿಯಿಲ್ಲ ಸ್ವಾಮಿ, ಬೇರೆ ಹೆಸರು ನಾನು ಕೊಡುತ್ತೇನೆ ಎಂದು ಹೇಳುವುದಾದರೆ ದಯವಿಟ್ಟು ಅದನ್ನು ಕಳುಹಿಸಿಕೊಡಿ ಅದನ್ನು ದಯಮಾಡಿ ಇಡುತ್ತೇನೆ. 'ಸ್ತ್ರೀ ಶಕ್ತಿ' ಎನ್ನುವ ಹೆಸರಿನ ಬಗ್ಗೆ ಮಾನ್ಯ ಶಂಕರಲಿಂಗೇಗೌಡರೇ ನೀವೇ ಹೇಳಿ ನೀವು ವಿದ್ವಾಂಸರು ನಿಮ್ಮ ನಾಲಿಗೆಯ ಮೇಲೆ ಸರ್ವಜ್ಞನ ಎಲ್ಲ ವಚನಗಳೂ ಇವೆ. 'ಸ್ತ್ರೀಶಕ್ತಿ' ಎನ್ನುವುದರಲ್ಲಿ ಏನು ತಪ್ಪಿದೆ? ಆ ಹೆಸರು ಚೆನ್ನಾಗಿದೆಯೇ ನಿಮಗೆ ಒಪ್ಪಿಗೆಯಾಗಿದೆಯೇ? ಆಗಿದ್ದರೆ ಸರಿಬಿಡಿ ಇನ್ನೊಂದು ಸ್ವಚ್ಛಗ್ರಾಮ

ಇದು ನಿರ್ಮಲ ಗ್ರಾಮದ ಕಲ್ಪನೆಗಿಂತಲೂ ದೊಡ್ಡ ಕಲ್ಪನೆ ನಿರ್ಮಲ ಗ್ರಾಮವನ್ನು ಹಮ್ಮಿಕೊಳ್ಳತಕ್ಕಂಥಾದ್ದು 'ಸ್ವಚ್ಛ-ಗ್ರಾಮ' ಆದ್ದರಿಂದ ನಮಗೆ ತೋಚಿದ ಹೆಸರುಗಳನ್ನು ನಾವು ಯೋಜನೆಗಳಿಗೆ ಇಟ್ಟಿದ್ದೇವೆ. ಅವುಗಳ ಕಂಟೆಂಟ್ಸ್ ಬಗ್ಗೆ ತಮಗೆ ಅನುಮಾನಗಳಿದ್ದರೆ ಆ ಅನುಮಾನಗಳನ್ನು ಪರಿಹರಿಸಲು ನಾನು ಪ್ರಯತ್ನ ಮಾಡುತ್ತೇನೆ. ಇನ್ನು ನೆಟ್‌ವರ್ಕ್ ಮಾಡಲಿಲ್ಲ ಎಂದು ಹೇಳಿದರು. ರಾಜ್ಯದಲ್ಲಿ ನೆಟ್‌ವರ್ಕ್‌ಗೆ ಕೇವಲ 2.5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ನಮ್ಮ ಕಾಲದಲ್ಲಿ ಅಷ್ಟು ಕೊಟ್ಟಿದ್ದೆವು ಎಂದು ಹೇಳಿದರು. ಬರತಕ್ಕಂಥ ಪ್ರತಿಯೊಂದು ಸಕ್ಸೆಸ್ಸೀವ್ ಗವರ್ನಮೆಂಟ್‌ಗಳೂ ಸಹ ಹಿಂದಿನ ಸರ್ಕಾರ ಏನು ಕೆಲಸ ಮಾಡಿದೆ ಆ ಕೆಲಸದ ಆಧಾರದ ಮೇಲೆ ತಾನೇ ಮುಂದಿನ ಸರ್ಕಾರ ಹೋಗಬೇಕು. ಆ 2.5 ಕೋಟಿ ರೂಪಾಯಿಗಳಲ್ಲಿ ಯಾವುದೇ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳಿದರು. ಅದನ್ನು ನಾವು ಉದ್ದೇಶಪೂರ್ವಕವಾಗಿ ಮಾಡಲಿಲ್ಲ. ಏಕೆಂದರೆ Private network have come forward to network the entire state. They are providing us big band-width and we are likely to get three virtual networks.

ಪುಗಸಟ್ಟೆ ಸಿಗತಕ್ಕಂಥ ನೆಟ್‌ವರ್ಕ್‌ಗಳನ್ನು ಸಂಧಾನದ ಮೂಲಕ ಪಡೆಯತಕ್ಕಂಥ ಜಾಣಾಕ್ಷತೆಯನ್ನು ಕೌಟಿಲ್ಯತೆಯನ್ನು ನಾವು ತೋರಿಸಿದರೆ, ಅದಕ್ಕೆ ನೀವು ದುಡ್ಡೇ ಕೊಡಲಿಲ್ಲ ಎಂದು ಹೇಳುವುದರಲ್ಲಿ ಏನು ಅರ್ಥವಿದೆ ? I can assure the Hon'ble Member from Malvalli that private networks have come forward. I think the negotiations between the State Government and the private networks are in the final stages, where we are going to get three private networks to operate in this area and I am sure that Hon'ble Member will be very happy to learn about it.

ಮಾನ್ಯ ಸೋಮಶೇಖರ್‌ರವರು ಮತ್ತೊಂದು ಮಾತನ್ನು ಹೇಳಿದರು. ಸಾಮರ್ಸ್ ಬಂದಿದ್ದರು ಅವರು ಮುಖ್ಯಮಂತ್ರಿಗಳನ್ನು ಅಪಾಯಿಂಟ್‌ಮೆಂಟ್ ಕೇಳಿದರು. ಅಪಾಯಿಂಟ್‌ಮೆಂಟ್ ಸಿಗಲಿಲ್ಲ, ಅವರು ತಕ್ಷಣ ಹೆಲಿಕಾಪ್ಟರ್‌ನಲ್ಲೋ ಏರೋಪ್ಲೇನ್‌ನಲ್ಲೋ ಹೈದರಾಬಾದ್‌ಗೆ ಹೋದರು ಹೈದರಾಬಾದ್‌ಗೆ ಹೋದ ತಕ್ಷಣ ಪಲಾವ್ ತೆಗೆದುಕೊಂಡು ಮಾನ್ಯ ಚಂದ್ರಬಾಬು ನಾಯ್ಡುರವರಿಗೆ ನೀವು ಹೇಳಿದ್ದನ್ನೆಲ್ಲ ಕೊಡುತ್ತೇವೆ ಎಂದು ಹೇಳಿದರೆಂದು ಹೇಳಿದರು. ನಾನು ಅದನ್ನು ಟೈಮ್ಸ್ ಆಫ್ ಇಂಡಿಯಾದಲ್ಲಿ ಓದಿದ್ದೆ ಅದು ಬಂದಿರುವ ಕಾಲಂನ ಹೆಸರು ಏನಿದೆ ಎಂದರೆ ಮಾನ್ಯ ಸಿಂಧ್ಯಾರವರೇ ದಯವಿಟ್ಟು ನೀವೇ ಹೇಳಿ, ಆ ಕಾಲಂನ ಹೆಸರು ಏನು ಎಂದು.

SRI B.SOMASHEKAR: This is a satire colum, I agree. This is some background in that. ಕೆಲವು ಸತ್ಯಾಂಶಗಳನ್ನು ತಿಳಿದುಕೊಂಡು ಅದನ್ನು ತಮಾಷೆಯಾಗಿ ಬರೆಯತಕ್ಕಂಥ ಕಾಲಂ ಅದು. ಅದನ್ನು ಯಾವ ಕಾಂಟೆಕ್ಸ್ಟ್‌ನಲ್ಲಿ ಬರೆದಿದ್ದಾರೆ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ. ಅದನ್ನು ಯಾವ ಬ್ಯಾಕ್‌ಗ್ರೌಂಡಿನಲ್ಲಿ ಬರೆದಿದ್ದಾರೆ ಎಂದು ನಾನು ತಿಳಿದುಕೊಂಡಿರುವುದು ಎಂದರೆ ಬಂಡವಾಳ ಹೂಡಿಕೆಗೆ 2-3 ಯೋಜನೆಗಳನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ತರಲು ಪ್ರಯತ್ನ ಮಾಡಿದ್ದಾರೆ. ಒಂದು ಪೇಪರ್‌ನಲ್ಲಿ ಬಂದಂಥ ಯೋಜನೆ Holland Based Company ಎಂದು ಕಾರ್ಪೋರೇಷನ್‌ನವರ ಹತ್ತಿರ ಬಂದು ನಾವು ಟ್ರ್ಯಾಕ್ಸ್ ಸ್ಟಕ್ಚರ್‌ಅನ್ನು

ಸ್ಕೀಮ್‌ಟ್ಮೆನ್ ಮಾಡುತ್ತೇವೆ ಅದಕ್ಕೆ ಐದು ವರ್ಷಗಳ ಕಾಲ ಸರ್ಕಾರದವರು ಏನೂ ಸಹಾಯ ಕೊಡಬೇಕಾಗಿಲ್ಲ ಇದರಲ್ಲಿ ನಾವು ಸುಮಾರು ಶೇ500-600ರಷ್ಟು ಆದಾಯವನ್ನು ಮಾಡುತ್ತೇವೆ. ಯೂರೋಪ್ ಒಂದರಲ್ಲೇ 80 ದೇಶಗಳಲ್ಲಿ ನಾವು ಇದನ್ನು ಮಾಡಿದ್ದೇವೆ, ಇದನ್ನು ನಾವು ಇಲ್ಲೂ ಏಕೆ ಪ್ರಾಯೋಗಿಕವಾಗಿ ತೆಗೆದುಕೊಳ್ಳಬಾರದು ಎಂದು ಬಂದಿದ್ದಕ್ಕೆ ಈ ಸರ್ಕಾರದಿಂದ ಯಾವುದೇ ರೀತಿಯಾದಂಥ ಸಹಕಾರ ಸಿಗಲಿಲ್ಲ. ಆದ್ದರಿಂದ ಅದು ಹೈದರಾಬಾದ್‌ಗೆ ಹೋಗಿದೆ ಎಂದು ಬಂದಂಥ ಒಂದು ವರದಿ ಇದೆ. ಅದನ್ನು ತಾವು ನಿರಾಕರಣೆ ಮಾಡುತ್ತೀರೋ ಹೇಗೆ ಎನ್ನುವುದನ್ನು ಹೇಳಿ. ಇನ್ನೊಂದು ಯುನೈಟೆಡ್ ಸ್ಟೇಟ್ಸ್ ಕನ್‌ಸೋರ್ಟಿಯಂನವರು 100 ಕಿಲೋಮೀಟರ್ ಹತ್ತಿರದಲ್ಲಿ ಒಂದು ಮೆಗಾಸಿಟಿ ಯೋಜನೆಯನ್ನು ಮಾಡಬೇಕು ಎನ್ನುವ ಬಗ್ಗೆ ಒಂದು ಸ್ಟೇಟ್‌ಮೆಂಟ್ ಬಂದಿತ್ತು. ಅದನ್ನು ಮಾಡುತ್ತೇವೆ ಎಂದು ತಾವೇ ಒಂದು ಬಾರಿ ಹೇಳಿದ್ದೀರಿ. ಎನ್.ಆರ್.ಐ. ಕನ್‌ಸೋರ್ಟಿಯಂನವರು ನಾವು ಇದನ್ನು ಮಾಡುತ್ತೇವೆ ಎಂದು ಬಂದಿದ್ದಕ್ಕೆ ನಮ್ಮ ಕರ್ನಾಟಕ ಸರ್ಕಾರದಿಂದ ಸರಿಯಾದಂಥ ಸಹಕಾರ ಸಿಗದೇ ಅವರು ಹೈದರಾಬಾದ್‌ಗೆ ಹೋಗಿದ್ದು ಅಲ್ಲಿ ಅವರಿಗೆ ಸುಮಾರು 100 ಕಿಲೋಮೀಟರ್ ದೂರದಲ್ಲಿ ಜಾಗ ಕೊಟ್ಟಿದ್ದಾರೆ. ಅಲ್ಲಿ ಅವರು ಅದನ್ನು ಮಾಡಿದ್ದಾರೆ. ಮತ್ತೊಂದು ಗ್ಲೋಬಲ್ ಇನ್‌ಸ್ಟಿಟ್ಯೂಷನ್ ಆಫ್ ಇಂಡಿಯಾದವರು ಐ.ಟಿ ಸೆಂಟರ್ ಮಾಡಬೇಕು ಎಂದು ಹೇಳಿದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಬಂದಿತ್ತು. ಈಗ ಅದು ಏನಾಗಿದೆ ? ಇದನ್ನೆಲ್ಲ ನೋಡಿದರೆ ಸರ್ಕಾರದಿಂದ ಸರಿಯಾದಂಥ ಸಹಕಾರ ಸಿಕ್ಕಿಲ್ಲವೆಂದು ತಿಳಿಯುತ್ತದೆಯು ಆ ಒಂದು ಕಾಂಟೆಕ್ಸ್ಟ್‌ನಲ್ಲಿ ಬರೆದಿದ್ದಾರೆ. ಅದು ನಿಜ ಎಂದು ನಾನು ಹೇಳಲಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ಸಾಮರ್ಸ್ಟ್ ಬಂದರು ಅವರು ಹೈದರಾಬಾದ್‌ಗೆ ಹೋದರು ಅಲ್ಲಿ ಬಂಡವಾಳ ಹೂಡಿದರು ನೀವು ಅನ್ಯಾಯವಾಗಿ ಅವರನ್ನು ಹೊರಗೆ ಕಳುಹಿಸಿಬಿಟ್ಟಿರಿ ಎಂದು ಹೇಳಿದಿರಿ. ಅದಕ್ಕಾಗಿ ಹೇಳಿದೆ.

ಶ್ರೀ ಬಿ.ಸೋಮಶೇಖರ್ : ತಾವು ಹೇಳಿದಿರಿ ಜಪಾನ್‌ನವರು ಅಗ್ರಿಕಲ್ಚರ್‌ಗೆ ವಾಟರ್ ಶೆಡ್ ಯೋಜನೆಗೆ 30 ಕೋಟಿ ರೂಪಾಯಿ ಬಂಡವಾಳವನ್ನು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಹೋಗುತ್ತದೆ ಎಂದು ಹೇಳಿ ಮಾಡುತ್ತೇವೆ ಎಂದು ಹೇಳಿದಿರಿ ಅದು ಆಗಲಿಲ್ಲ ಅದನ್ನು ನಾವು ಮಾಡಿದ್ದೇವೆ ಎಂದು ಹೇಳಿದಿರಿ. ಇಂಥ ವಿಚಾರಗಳ ಬಗ್ಗೆ ಪೇಪರ್ ಸ್ಟೇಟ್‌ಮೆಂಟ್ ಹೋದತಕ್ಷಣ ಮಾನ್ಯ ಚಂದ್ರಬಾಬು ನಾಯ್ಡುರವರು ಇ-ಮೇಲ್ ಕಳುಹಿಸಿ ಕೊಡುತ್ತಾರೆ ಅವರೇ ಖುದ್ದಾಗಿ ಮಾತನಾಡುತ್ತಾರೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ ನೀವು ಚೀಫ್ ಸೆಕ್ರೆಟರಿಗೆ ಹೇಳುವುದು ಅದಕ್ಕೆ ಅವರು ಒಂದು ಕಮಿಟಿ ಮಾಡುವುದು ನಮ್ಮ ಸರ್ಕಾರದಲ್ಲಿ ಈ ರೀತಿ ಆಗುತ್ತಿದೆ ಎನ್ನುವ ಒಂದು ಹಿನ್ನಲೆಯಲ್ಲಿ ಈ ಒಂದು ಹಾಸ್ಯ ಬಂದಿದೆ ಅಷ್ಟೇ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಸದಸ್ಯರು ನನಗೆ ಒಂದು ಇ-ಮೇಲ್ ಕಳುಹಿಸಿದರೆ ಇದರ ಬಗ್ಗೆ ನಾನು ಅವರಿಗೆ ಉತ್ತರ ಕೊಡುತ್ತೇನೆ. ಪ್ರತಿನಿತ್ಯ ನೂರಾರು ಇ-ಮೇಲ್‌ಗಳು ನನಗೂ ಬರುತ್ತವೆ. ಅವುಗಳಿಗೆ ಉತ್ತರವನ್ನು ಕೊಡಲು ನಾನು ಪ್ರಯತ್ನಪಡುತ್ತೇನೆ. ಜನ್ಯೂಯಿನ್ ಇನ್‌ವೆಸ್ಟರ್‌ಗಳು ಪ್ರಪಂಚದ ಯಾವುದೇ ಭಾಗದಿಂದ ಕರ್ನಾಟಕಕ್ಕೆ ಬಂದಾಗ ಅವರಿಗೆ ಬೇಕಾದಂಥ ಅವಶ್ಯಕವಾದಂಥ ಅನುಕೂಲತೆಗಳನ್ನು ನಾವು ಕಲ್ಪಿಸಿಕೊಡಬೇಕು ಎನ್ನತಕ್ಕಂಥಾದ್ದು ನೀವೇ ಹಾಕಿದಂಥ ಇಂಡಸ್ಟ್ರಿಯಲ್

ಪಾಲಿಸಿ ರೆಸೊಲ್ಯೂಷನ್ ಅದು ಒಂದು ಅತ್ಯಂತ ಉತ್ತಮವಾದ ಅಂಶ. ಆ ಅಂಶವನ್ನು ನಾವು ಇನ್-ಲೆಟರ್ ಮತ್ತು ಇನ್-ಪ್ರಿನ್ಸಿಪಲ್ ಆನರ್ ಮಾಡಿ ಅದನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ. ಆದರೆ ಇದು ಸೆಟ್ಟೈರ್ ಸ್ಟೇಟ್‌ಮೆಂಟ್. ಈ ಸಾಮರ್ಸ್ ಅನ್ನು ನಾನು ಫೈಲ್‌ನಲ್ಲಿ ಎಲ್ಲಾ ಹುಡುಕಿಸಿದೆ. ಮಾನ್ಯ ಸೋಮಶೇಖರ್‌ರವರು ಮಾಡಿದ ಒಂದು ಭಾಷಣದಿಂದ ಎರಡು ದಿವಸ ಇಬ್ಬರು ಅಧಿಕಾರಿಗಳಿಗೆ ಈ ಸಾಮರ್ಸ್ ಎಲ್ಲಿದ್ದಾನೆ ಎಂದು ಹುಡುಕುವ ಕೆಲಸವಾಯಿತು. ನನಗೆ ತಿಳಿದಿರುವುದು ಇಬ್ಬರು ಸಾಮರ್ಸ್‌ಗಳು ಮಾತ್ರ. ಒಬ್ಬರು ಲ್ಯಾರಿ ಸಾಮರ್ಸ್ whohappens to be the distinguished Secretary of the Treasure, United State Government. He came to India. There were only two States which he went. One was Delhi, the ohter halt was in Bangalore.

ಇನ್ನೊಬ್ಬರು ರಾನ್ ಸಾಮರ್ಸ್ ಕೊಜೆಂಟ್ರಿಕ್ಸ್‌ನವರು ಈ ಇಬ್ಬರು ಸಾಮರ್ಸ್‌ಗಳಲ್ಲದೆ ಬೇರೆ ಯಾವ ಸಾಮರ್ಸ್ ಕೂಡ ನಮ್ಮ ಜೊತೆಯಲ್ಲಿ ಕಾಂಟ್ಯಾಕ್ಟ್ ಅನ್ನು ಎಸ್ಟಾಬ್ಲಿಷ್ ಮಾಡಲು ಆಗಲಿಲ್ಲ. ಎರಡನೆಯದಾಗಿ ಕ್ರಿಸಾನ್‌ರವರ ಬಗ್ಗೆ ಹೇಳಿದಿರಿ. ಇವರು ಒಂದು ದೊಡ್ಡ ಸಿಟಿಯನ್ನು ಬಿಲ್ಡ್ ಮಾಡುತ್ತೇವೆ ಎಂದು ನಿಮ್ಮ ಸರ್ಕಾರ ಅಸ್ತಿತ್ವದಲ್ಲಿದ್ದಾಗಲೇ ಒಂದು ಪ್ರಸ್ತಾವನೆಯನ್ನು ನಿಮ್ಮ ಸರ್ಕಾರದ ಮುಂದಿಟ್ಟಿದ್ದರು. ಆ ಪ್ರಸ್ತಾವನೆ ನಮ್ಮ ಸರ್ಕಾರಕ್ಕೆ ಬಂದಾಗ ನಾವು ಅವರ ಜೊತೆಯಲ್ಲಿ ಒಂದು ಮೆಮೊರಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ (ಎಂ.ಒ.ಯು) ಸೈನ್ ಮಾಡಿದೆವು. ಅದರಲ್ಲಿ ಅವರು ಮೇಜರ್ ಯು.ಎಸ್.ಕಂಪನಿಗಳ ಒಂದು ಕನ್‌ಸೋರ್‌ಷಿಯಂ ಮಾಡಿಕೊಂಡು ಒಂದು ದೊಡ್ಡ ಪಟ್ಟಣವನ್ನು ನಿರ್ಮಾಣ ಮಾಡಬೇಕೆಂದು ಹೇಳಿದರು. ಆ ಪಟ್ಟಣಕ್ಕೆ ದೊಡ್ಡ ಪ್ರಮಾಣದ ಭೂಮಿ ಬೇಕಾಗಿದೆ. ಅದನ್ನು ಎಲ್ಲಿ ಒದಗಿಸಿಕೊಡಬೇಕು ? ಒಣಭೂಮಿಯನ್ನು ಕೊಡಬೇಕು ಎನ್ನುವುದು ನಮ್ಮ ದೃಷ್ಟಿ. ಈಗ ಬಂದಿರತಕ್ಕಂಥ ವರ್ತಮಾನದ ಪ್ರಕಾರ ಅವರು ಹೈದರಾಬಾದ್‌ಗೆ ಹೋಗಲಿಲ್ಲ. ಅವರು ಏಪ್ರಿಲ್ ಮೊದಲ ವಾರದಲ್ಲಿ ಇಲ್ಲಿಗೆ ಬರಲಿದ್ದಾರೆ. ಮೊದಲು ನಮ್ಮ ಜೊತೆ ಮಾತುಕತೆಯಾಡಲು ಒಂದು ದೊಡ್ಡ ತಂಡ ಬಂದಿತ್ತು ಈಗ ಏಪ್ರಿಲ್ ಷೆ^ದಲನೇ ವಾರದಲ್ಲಿ ಪುನಃ ಆ ನೆಗೋಷಿಯೇಷನ್ ಅನ್ನು ಆ ಎಂ.ಒ.ಯು ಅನ್ನು ಮುಂದುವರಿಸಲು ನಾವು ಮತ್ತೆ ಬೆಂಗಳೂರಿಗೆ ಬರುತ್ತಿದ್ದೇವೆ ಎನ್ನುವ ಮೆಸೇಜ್ ಅನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ.

ಇನ್ನು ಕೆಲವರು ಬೆಂಗಳೂರು ಸಿಟಿ ಬಗ್ಗೆ ಹೇಳಿದರು. ಬೆಂಗಳೂರು ನಗರಪಾಲಿಕೆಯ ಸೆಲ್ಫ್-ಅಸೆಸ್‌ಮೆಂಟ್ ಸ್ಕೀಂ ಬಗ್ಗೆ ದೊಡ್ಡ ದೊಡ್ಡ ಅನೌನ್ಸ್‌ಮೆಂಟ್ ಮಾಡಿದರು ಇನ್ನೂ ಏನು ಮಾಡಲು ಅವರಿಗೆ ಆಗಲಿಲ್ಲ ಎಂದು ಹೇಳಿದರು. ಇದು ಬೆಂಗಳೂರು ಮಹಾನಗರ ಪಾಲಿಕೆಯವರು ಹೊರಡಿಸಿರತಕ್ಕಂಥ ಫಾರ್ಮ್ ಬೆಂಗಳೂರಿನಲ್ಲಿ ಯಾರ್‍ಯಾರು ಆಸ್ತಿ ಇಟ್ಟುಕೊಂಡಿದ್ದಾರೆ ಅವರೆಲ್ಲರೂ ಈ ಫಾರ್ಮ್‌ನಲ್ಲಿ ತಾವೇ ಸ್ವತಃ ಭರ್ತಿ ಮಾಡಿ ನಗರಪಾಲಿಕೆಗೆ ಕೊಟ್ಟರೆ ಅದನ್ನು ಅವರು ಕೌಂಟರ್ ವೆರಿಫಿಕೇಷನ್ ಮಾಡಿ, this is a part of the progressive reforms.

ಇದರ ಬಗ್ಗೆ ಏನೂ ಮಾಡಿಲ್ಲವೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಅದಕ್ಕೋಸ್ಕರ ನಾವು ಮಾಡಿದ್ದೇವೆ ಎಂಬುದಕ್ಕೆ ಸಾಕ್ಷಿಯಾಗಿ ಈ ಫಾರ್ಮ್‌ನ್ನು ತೋರಿಸುತ್ತಿದ್ದೇನೆ. ಬೆಂಗಳೂರು ಸಿಟಿಯಲ್ಲಿ ಟ್ರಾಫಿಕ್ ಕನ್‌ಜೆಷನ್ ಬಹಳ ಇದೆ. ನಿಜ. ಅದನ್ನು ನಾವು ಕ್ರಮೇಣ ಕಡಿಮೆ ಮಾಡಬೇಕಾಗಿದೆ.

36 ಕಿ. ಮೀ. ಉದ್ದದ ರಿಂಗ್ ರೋಡ್ ಇದ್ದು ಅದನ್ನು ಜೂನ್ ತಿಂಗಳೊಳಗೆ ನಮ್ಮ ಸರ್ಕಾರ ಮೋಟರಬಲ್ ಆಗಿ ಮಾಡುತ್ತದೆ ಎನ್ನುವ ವಿಷಯಕ್ಕೆ ನಾನು ಈಗಲೂ ಬದ್ಧನಾಗಿದ್ದೇನೆ. ಇನ್ನು ಕಳೆದ 2-3 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸೈಟುಗಳನ್ನು ಕೊಟ್ಟಿರಲಿಲ್ಲ. ಮೊಟ್ಟಮೊದಲನೆಯದಾಗಿ 2500 ದಲಿತ ಕುಟುಂಬಗಳಿಗೆ ಸೈಟುಗಳನ್ನು ಕೊಟ್ಟರು ಎಂದು ಬಹಳ ಅಭಿಮಾನದಿಂದ ಹೇಳುತ್ತಿದ್ದೇನೆ. ಅದಕ್ಕೋಸ್ಕರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಪ್ಪರ್ ತುಂಗಾ ಪ್ರಾಜೆಕ್ಟ್‌ಗೆ 200 ಕೋಟಿ ರೂಪಾಯಿಗಳನ್ನು ಅಲಾಟ್ ಮಾಡಿದ್ದು ಆ ಕೆಲಸ ಬಹಳ ಭರದಿಂದ ಸಾಗುತ್ತಿದೆ. ಆ ಭಾಗದವರು ಅದರ ಕೆಲಸಕ್ಕೆ 500 ಕೋಟಿ ರೂಪಾಯಿಗಳನ್ನು ಕೇಳುತ್ತಾರೆ, ನಿಜ. ಆ ಭಾಗದಿಂದ ಬರತಕ್ಕಂಥ ಮಾನ್ಯ ಸದಸ್ಯರ ಆಕಾಂಕ್ಷೆಯಲ್ಲಿ ನಾನು ಕೂಡ ಭಾಗಿಯಾಗಿದ್ದೇನೆ. ಆದರೆ ಈ ವರ್ಷಕ್ಕೆ ನಮ್ಮ ಇತಿಮಿತಿಗಳಲ್ಲಿ ನಾವು ಇಷ್ಟನ್ನು ಮಾತ್ರ ಕೊಡಲಿಕ್ಕೆ ಸಾಧ್ಯವಾಗಿದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಎನ್. ಎನ್. ಪಾಟೀಲರು ಮಾತನಾಡುತ್ತಾ ಹೈಯರ್ ಎಜುಕೇಷನ್‌ಗೆ ಬಜೆಟ್‌ನಲ್ಲಿ 15 ಪರ್ಸೆಂಟ್ ಕಡಿತ ಮಾಡಿದ್ದೀರಿ, ಅದು ಸರಿಯಲ್ಲ ಎನ್ನುವ ವಿಚಾರವನ್ನು ಹೇಳಿದರು. ಹೈಯರ್ ಎಜುಕೇಷನ್ ಸಂಸ್ಥೆಯವರು ರಾಜ್ಯಸರ್ಕಾರದ ಮೇಲೆ ಒತ್ತಾಯ ತರುವುದರಿಂದ it should not be a charge ಎಂದು ಪದೇ ಪದೇ ನಾವು ಹೇಳುತ್ತಿದ್ದೇವೆ. ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್‌ಗೆ ನಮ್ಮ ಮೂಲ ಒತ್ತು ಕೊಡಬೇಕು ಎನ್ನುವುದರಲ್ಲಿ ನಂಬಿಕೆ ಇರತಕ್ಕಂಥವರು ನಾವು ಆಗಿದ್ದೇವೆ. ಆದ್ದರಿಂದ ಅದಕ್ಕೆ ಹೆಚ್ಚು ಒತ್ತು ಕೊಡಬೇಕಾಗಿದ್ದರೆ ಎಲ್ಲಾದರೂ ನಾವು ಹಣವನ್ನು ಉಳಿತಾಯ ಮಾಡಬೇಕಾಗುತ್ತದೆ. ದೊಡ್ಡ ದೊಡ್ಡ ವಿದ್ಯಾಸಂಸ್ಥೆಗಳನ್ನು (ಇನ್ಸ್‌ಟಿಟ್ಯೂಷನ್ಸ್) ನಡೆಸತಕ್ಕಂಥವರಿಗೆ ಯಾವುದಲ್ಲಾದರೂ ಏನಾದರೂ ಕಡಿಮೆ ಇದೆಯೇ ಸ್ವಾಮಿ ! ಅವರಿಗೆ ದೇವರು ಸಾಕಾದಷ್ಟು ಕೊಟ್ಟಿದ್ದಾರೆ. ಅವರು ಕೈ ಒಡ್ಡಿದರೆ ಅವರ ಕೈಗೆ ಬೇಕಾದಷ್ಟು ಬಂದು ಬೀಳುತ್ತದೆ. ಆ ದೃಷ್ಟಿಯಿಂದ ನಾವು ಈ 15 ಪರ್ಸೆಂಟ್ ಹಣವನ್ನು ಉಳಿತಾಯ ಮಾಡುವುದರ ಮೂಲಕ ಆ ಹಣವನ್ನು ಇನ್ನು ಎಲ್ಲಾ ವರ್ಗಾಯಿಸುವುದಿಲ್ಲ, ದಲಿತರು, ಹಿಂದುಳಿದವರು ಇರತಕ್ಕಂಥ ಯಾವ ಪ್ರದೇಶ ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್‌ನಿಂದ ವಂಚಿತವಾಗಿದೆಯೋ, ಅಲ್ಲಿ ವಿಶೇಷವಾದಂಥ ಶಾಲೆಗಳನ್ನು ತೆರೆಯುವುದಕ್ಕೆ ಆ ಹಣವನ್ನು ನಾವು ಉಪಯೋಗಿಸುತ್ತೇವೆ ಎನ್ನುವ ಮಾತನ್ನು ಹೇಳಿ, ನಾನು ಸಾಕಷ್ಟು ಸವಿಸ್ತಾರವಾಗಿ 2000-2001ನೇ ಇಸವಿಯ ಬಜೆಟ್ ಬಗ್ಗೆ ಬಂದಿರತಕ್ಕಂಥ ವಿಶ್ಲೇಷಣೆಗಳಿಗೆ ನಾನು ಉತ್ತರಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಎಲ್ಲಾ ಪಾಯಿಂಟ್ಸ್‌ನ್ನು ಕವರ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಬ್ರಾಡ್ ಸೆಕ್ಟರ್ಸ್‌ನ್ನು ನಾವು ಗಮನದಲ್ಲಿಟ್ಟುಕೊಂಡು ಅವುಗಳಿಗೆ ವಿಶೇಷವಾದಂಥ ಗಮನವನ್ನು ಕೊಡುತ್ತಿದ್ದೇವೆ. ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಆಗಬೇಕು ಎನ್ನತಕ್ಕಂಥಾದ್ದು ನಮ್ಮೆಲ್ಲರ ದೃಷ್ಟಿ ಆಗಿದೆ. ಕೇವಲ ಹುದ್ದೆಗಳನ್ನು ಅಬಾಲಿಷ್ ಮಾಡಿದ ಮಾತ್ರಕ್ಕೆ ಸರ್ಕಾರದ ಎಫಿಷಿಯೆನ್ಸಿ ಲೆವೆಲ್ ಎತ್ತರಕ್ಕೆ ಬೆಳೆಯುತ್ತದೆ ಎನ್ನುವುದರಲ್ಲಿ ನನಗೆ ನಂಬಿಕೆ ಇಲ್ಲ. ಹಾಗೆಯೇ ಶಿರಭಾರ ಆಗಿರತಕ್ಕಂಥ, ಬ್ಯುರಾಕ್ರಸಿ ಏನು ಇದೆ, ಆ ಭಾರವನ್ನು ಕಡಿಮೆ ಮಾಡಬೇಕೆನ್ನುವುದು ನಮ್ಮ ಸರ್ಕಾರದ ಇಚ್ಛೆಯಾಗಿದೆ. ಅದಕ್ಕೆ ಸ್ವಲ್ಪ ಟೈಮ್ ಬೇಕಾಗುತ್ತದೆ. ಇಷ್ಟು ಜನ ಅಡಿಷನಲ್ ಕಾರ್ಯದರ್ಶಿಗಳು ಏಕೆ ಇರಬೇಕು ಎನ್ನತಕ್ಕಂಥಾದ್ದಕ್ಕೆ ನನಗೆ ಕಳೆದ 6 ತಿಂಗಳಿನಿಂದ ಇವತ್ತಿನಿಂದ ಇವತ್ತಿನವರೆಗೆ ಕಾರಣಗಳು ಸಿಕ್ಕಿಲ್ಲ. I would like to be honet about it.

ಇಷ್ಟು ಐ. ಜಿ. ಗಳು ಬೇಕೆಂದು ನಿಮ್ಮ ಸರ್ಕಾರ ಇದ್ದಾಗಲೂ ಕಳೆದ ಐದು ವರ್ಷಗಳಲ್ಲಿ ನಿಮಗೆ ರೀಸನ್ಸ್ ಸಿಕ್ಕಿಲ್ಲ. ರೀಸನ್ಸ್ ಸಿಕ್ಕಿದ್ದರೆ ನಿಮ್ಮ ಸರ್ಕಾರದಲ್ಲಿ ನೀವೇ ಕೆಲವು ಹುದ್ದೆಗಳನ್ನು ಕಡಿಮೆ ಮಾಡುತ್ತಿದ್ದಿರಿ.

ಇನ್ನೂ ಒಂದೆರಡು ವರ್ಷ ನಿಮ್ಮ ಸರ್ಕಾರಕ್ಕೆ ಅವಕಾಶ ಸಿಕ್ಕಿದ್ದಿದ್ದರೆ ಐ.ಜಿ.ಗಳು, ಚೀಫ್ ಇಂಜಿನಿಯರುಗಳು, ಹಾಗೂ ಅಡಿಷನಲ್ ಚೀಫ್ ಸೆಕ್ರೆಟರಿಗಳ ಸಂಖ್ಯೆಯನ್ನು ನೀವೇ ಕಡಿಮೆ ಮಾಡಿಬಿಡುತ್ತಿದ್ದಿರಿ.

ಶ್ರೀ ಪಿ.ಜಿ.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಗವರ್ನಮೆಂಟ್ ಪ್ರೋಗ್ರಾಮ್ಸ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ತಾವು ಮಾತನಾಡುವಾಗ ಕೆಲವು ಸಂದರ್ಭಗಳಲ್ಲಿ ಈ ಕಡೆ ಕುಳಿತಿರುತಕ್ಕಂಥ ಮಾನ್ಯ ಸದಸ್ಯರುಗಳ ಬಗ್ಗೆ ಚುಚ್ಚಿ ಮಾತನಾಡುತ್ತಿದ್ದೀರಿ. ನಾವು ಚುಚ್ಚಿ ಮಾತನಾಡಿರುವುದರಿಂದ ಈಗ ನೀವು ಮಾತನಾಡಿದ್ದನ್ನು ವಾಪಸ್ಸು ರಿಸೀವ್ ಮಾಡಿಕೊಳ್ಳುವುದಕ್ಕೆ ತಯಾರು ಇರತಕ್ಕಂಥವರು ನಾವು. ರಾಜ್ಯದ ಹಿತದೃಷ್ಟಿಯಿಂದ ಯಾವ ಕಾರ್ಯಕ್ರಮ ಸರಿ ಇದೆ ಎನ್ನುವುದರ ಬಗ್ಗೆ ನಮ್ಮ ಪ್ರಾಮಾಣಿಕವಾದ ಅಭಿಪ್ರಾಯವನ್ನು ಹೇಳಿದ್ದೇವೆ. 1989ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದಾಗ ಆ ಸಂದರ್ಭದಲ್ಲಿ ಮಂಡನೆ ಮಾಡಿದಂಥ ಮೊದಲನೆ ಆಯವ್ಯಯ ಮಂಡನೆಯಲ್ಲಿ ಇವೆಲ್ಲವೂ ಪ್ರಸ್ತಾಪ ಆಗಿತ್ತು. ಆದರೆ 1994ರವರೆಗೆ ಹಿಂದೆ ಪ್ರಸ್ತಾಪ ಮಾಡಿರುವಂಥದ್ದು ಏನೂ ಆಗಿರಲಿಲ್ಲ. ನಮ್ಮ ಸರ್ಕಾರ 1994ರಲ್ಲಿ ಅಧಿಕಾರಕ್ಕೆ ಬಂತು 1996-97ರಲ್ಲಿ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಇವೆಲ್ಲವನ್ನೂ ಗುರುತಿಸಿ ಒಂದು ಹಂತಕ್ಕೆ ಬಂದಿದ್ದೆವು. ಇದೇ ಕಾರಣದಿಂದ ನಾವು ರೆಕ್ರೂಟ್‌ಮೆಂಟ್ ಕೂಡ ಮಾಡಿರಲಿಲ್ಲ.

ಶ್ರೀ ಎಸ್.ಎಂ.ಕೃಷ್ಣ : ಆದ್ದರಿಂದ ನಾವು ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್‌ಗೆ ಗಮನ ಕೊಡುತ್ತೇವೆ. ಎಲ್ಲಿ ಜಾಸ್ತಿ ಇದೆ ಕೊಬ್ಬು ಆ ಕೊಬ್ಬನ್ನು ಕಡಿಮೆ ಮಾಡಬೇಕು. ಹಿಂದಿನ ಸರ್ಕಾರ 5 ಪರ್ಸೆಂಟ್ ಸರ್ಕಾರಿ ಹುದ್ದೆಗಳನ್ನು ಕಡಿಮೆ ಮಾಡಬೇಕೆಂದು ಏನು ನಿರ್ಧರಿಸಿತ್ತು ಅದು ಎಲ್ಲಾ ಮಜಲುಗಳಿಗೂ ಅನ್ವಯವಾಗುತ್ತದೆ; including the top echelons of the government.

ನಮ್ಮ ಸರ್ಕಾರಿ ನೌಕರರು ಮಾಡತಕ್ಕಂಥ ಸಾಮಾನ್ಯ ದೂರು ಏನೆಂದರೆ, lower echelons ಕೆಳಗಡೆ ಇರತಕ್ಕಂಥ ಜನಗಳಿಗೆ ಅದನ್ನು ಅಪ್ಲೈ ಮಾಡಲಾಗುತ್ತಾ ಇದೆ, ಆದರೆ ಮೇಲ್ಗಡೆ ಹೋಗುತ್ತಾ ಹೋಗುತ್ತಾ ಇದೇ ನಿಯಮದ ಗ್ರಿಪ್ ಲೂಸನ್ ಆಗುತ್ತದೆ ಎಂದು ಹೇಳುತ್ತಾರೆ. ಅಂದರೆ ನಾವು ಇಲ್ಲಿ ಕೈಗೆ ಸಿಕ್ಕಿದಾಗ ಆ ಗ್ರಿಪ್ ಬಹಳ ಬಲವಾಗಿರುತ್ತದೆ, ಮೇಲಕ್ಕೆ ಹೋಗುತ್ತಾ ಆ ಗ್ರಿಪ್ ಲೂಸನ್ ಆಗುವುದರಿಂದ ಆ ಗ್ರಿಪ್‌ನ್ನು ಟೈಟನ್ ಮಾಡಿ ಎಂದು ಅವರು ಹೇಳಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಇನ್ನು ಮುಂದೆಯೂ ಈ ಬಜೆಟ್ ಮೇಲೆ ಬೇಕಾದಷ್ಟು ಟೀಕೆಗಳು ಮತ್ತು ಮಾತುಗಳು ಬರುತ್ತವೆ. ಆ ಮಾತುಗಳೆಲ್ಲವನ್ನು ನಾನು ಗಮನಿಸುತ್ತೇನೆ. ತಾವು ಕೊಟ್ಟಿರತಕ್ಕಂಥ ರಚನಾತ್ಮಕವಾದಂಥ ಸಲಹೆಗಳನ್ನು ನಾನು ಸ್ವಾಗತಿಸುತ್ತೇನೆ. ಆ ರಚನಾತ್ಮಕ ಸಲಹೆಗಳಿಂದ ನಮ್ಮ ಬಜೆಟನ್ನು ಇನ್ನೂ ಪರಿಷ್ಕರಣೆ ಮಾಡತಕ್ಕಂಥ ಅವಶ್ಯಕತೆ ಬಂದರೆ ಆ ಪರಿಷ್ಕರಣೆಗೂ ಕೂಡ ನಾನು ತಯಾರಾಗಿದ್ದೇನೆ. ಕೆಲವು ಭಾಗದಲ್ಲಿ ಸರ್ಕಾರಗಳು ಹಿಂದೆ ಮಾಡಿರತಕ್ಕಂಥ ಒಳ್ಳೆಯ ಕೆಲಸವನ್ನು ಕೂಡ ನಾನು ಪ್ರಶಂಸೆ ಮಾಡಿದ್ದೇನೆ. ಇದರ ಒಳ ಅರ್ಥ ಏನೆಂದರೆ- ಸರ್ಕಾರಗಳು ಬರಬಹುದು, ಹೋಗಬಹುದು. ಆದರೆ ಹಿಂದೆ ಮಾಡಿರತಕ್ಕಂಥ ಕೆಲಸವನ್ನು ನಾವು ಗುರುತಿಸದೇ ಹೋದರೆ ಮುಂದೆ ಬರತಕ್ಕಂಥವರು ನಾವು ಮಾಡತಕ್ಕಂಥ ಕೆಲಸವನ್ನು ಗುರುತಿಸಲಾರರು. ಅಂಥ ಒಂದು ಅಗ್ರಪಂಕ್ತಿ, ಉದಾಹರಣೆಯನ್ನು ನಾವು ಹಾಕಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ. ಇನ್ನು ಶಾಸಕರ ನಿಧಿ ಬಗ್ಗೆ ಹೇಳುವುದಾದರೆ ತ್ರಿ-ಟಯರ್ ಪಂಚಾಯತ್ ಸಿಸ್ಟಮ್ ಬಂದಮೇಲೆ ಶಾಸಕರು ಕೆಲವಾರು ಸಂದರ್ಭಗಳಲ್ಲಿ ಬಹಳ ಡಿಸ್-ಅಡ್ವಾಂಟೇಜಸ್

ಪೊಜಿಶನ್‌ನಲ್ಲಿ ಇದ್ದಾರೆ ಎನ್ನತಕ್ಕಂಥಾದ್ದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಆದ್ದರಿಂದಲೇ ಕೇಂದ್ರದಲ್ಲಿ ಪಾರ್ಲಿಮೆಂಟ್ ಮೆಂಬರ್ಸ್‌ಗೆ ಲೋಕಲ್ ಏರಿಯಾ ಡೆವಲಪ್‌ಮೆಂಟ್ ಫಂಡ್ಸ್ ಎನ್ನತಕ್ಕಂಥಾದ್ದು ಬಂದಿರುವುದು. ಆದುದರಿಂದ, ನಾವು ನಮ್ಮ ರಾಜ್ಯದಲ್ಲಿಯೂ ಕೂಡ ಲೆಜಿಸ್ಲೇಟರ್ಸ್ ಏರಿಯಾಸ್ ಡೆವಲಪ್‌ಮೆಂಟ್ ಫಂಡ್ ಎನ್ನುವುದನ್ನು ಸ್ಥಾಪನೆ ಮಾಡಬೇಕು, ಪ್ರಾರಂಭಿಸಬೇಕೆನ್ನುವುದು, ಅದಕ್ಕೆ ಎಷ್ಟು ಹಣವನ್ನು ವಿನಿಯೋಗ ಮಾಡಬೇಕು ಮತ್ತು ಅದನ್ನು ಹೇಗೆ ಪಡೆಯಬೇಕೆಂಬುದಕ್ಕೆ ನಾನು ತಮ್ಮೆಲ್ಲರನ್ನೂ ಕರೆದು ತಮ್ಮ ಜೊತೆಯಲ್ಲಿ ಸಮಾಲೋಚಿಸಿ, ಅನಂತರ ನಾನು ಕೆಲವೇ ದಿನಗಳಲ್ಲಿ ಇದರ ಬಗ್ಗೆ ನಿರ್ಧಾರವನ್ನು ಪ್ರಕಟಣೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀ ಎಸ್.ಎಸ್. ಪಾಟೀಲ್‌ರವರು ಬಸವಣ್ಣನವರ ವಚನವನ್ನು ಹೇಳಿ ನಮ್ಮನ್ನು ಅತ್ಯಂತ ಸಂಭಾವಿತರನ್ನಾಗಿ ಮಾಡಿದ್ದಾರೆ. ಅದರಿಂದ, ನಾನು ಡಿವಿಜಿಯವರ ಮಂಕುತಿಮ್ಮನ ಕಗ್ಗದ ಒಂದೇ ಒಂದು ಸಾಲು ಹೇಳುತ್ತೇನೆ:

ಇಳೆಯಿಂದ ಮೊಳಕೆಯು ಹೊಗೆ ಬಂದು ತಮಟೆಗಳು ಇಲ್ಲ
ಫಲ ಮಾಗುವೊಂದು ತುತ್ತೂರಿ ದನಿ ಇಲ್ಲ
ಬೆಳಕೀವ ಸೂರ್ಯಚಂದ್ರರ ಸದ್ದಿಲ್ಲ
ಹೊಲಿ ನಿನ್ನ ತುಟಿಗಳನ್ನು ಮಂಕುತಿಮ್ಮ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹಲವಾರು ಸ್ಪಷ್ಟೀಕರಣ ಮತ್ತು ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ, ಮೂಲಭೂತವಾಗಿ ನಾವು ಕೆಲವೊಂದು ಪ್ರಶ್ನೆಗಳನ್ನೆತ್ತಿದ್ದೆವು. ಅದರಲ್ಲಿ, ಮುಖ್ಯವಾಗಿ, ಎಕ್ಸೈಜ್ ಡ್ಯೂಟಿ ಬಗ್ಗೆ ಅದನ್ನು ಹೆಚ್ಚು ಮಾಡಿದರು. ಆದರೆ, ಸೆಕೆಂಡ್ಸ್ ಮತ್ತು ಇಲ್‌ಸಿಟ್ ಲಿಕ್ಕರ್ ಮಾರಾಟವಾಗುವ ಬಗ್ಗೆ, ಯಾವ ರೀತಿಯಾದ ಆಕ್ಷನ್ ತೆಗೆದುಕೊಳ್ಳುವ ಬಗ್ಗೆ ಯಾವುದೇ ಸ್ಪಷ್ಟೀಕರಣ ಕೊಡಲಿಲ್ಲ. ಪ್ರತಿವರ್ಷ ಎಕ್ಸೈಜ್ ಡ್ಯೂಟಿಯನ್ನು ಜಾಸ್ತಿ ಮಾಡುತ್ತಿದ್ದಾರೆ. ಆದರೆ ಸೆಕೆಂಡ್ಸ್ ಮಾತ್ರ ಹೋಗುತ್ತಿದೆ. ಇಲ್‌ಸಿಟ್ ಲಿಕ್ಕರ್ ಹಾಗೇ ಮಾರಾಟವಾಗುತ್ತಿದೆ.

(ಈ ಹಂತದಲ್ಲಿ ಕೆಲವು ಸದಸ್ಯರು ತಮ್ಮ ಸ್ಥಾನಗಳಿಂದ ಎದ್ದು ಹೋಗುತ್ತಿದ್ದರು)

ಅಧ್ಯಕ್ಷರು : ವೆರಿ ಸಾರಿ. ಮಾನ್ಯ ಸದಸ್ಯರುಗಳು ಕೇವಲ ಒಂದೂಮುಕ್ಕಾಲು ಗಂಟೆ ಕೂರಲು ಸುಸ್ತಾದರೆ ಹೇಗೆ ? ಮಾನ್ಯ ಮುಖ್ಯಮಂತ್ರಿಗಳು ಮೂರು ಗಂಟೆಗಳ ಕಾಲ ಕೂರುತ್ತಾರಲ್ಲ ! ಬಡ್ಜೆಟ್ ಪಾಸ್ ಮಾಡಬೇಕಾಗಿದೆ. ಹೀಗೆ ಎದ್ದು ಹೋದರೆ ಹೇಗೆ ? Can you not sit for another half an hour or 45 minutes ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳು ಸೆಕೆಂಡ್ಸ್ ಹಾವಳಿ ಕಡಿಮೆ ಮಾಡುವ ಸಲುವಾಗಿ ಇಲ್‌ಸಿಟ್ ಲಿಕ್ಕರ್ ಬಂದ್ ಮಾಡುವ ಸಲುವಾಗಿ ಸ್ಪಷ್ಟೀಕರಣ ಕೊಡಬೇಕು. ನನ್ನ ಕಳಕಳಿ ಏನೆಂದರೆ, ಇಲ್‌ಸಿಟ್ ಲಿಕ್ಕರ್ ಅನ್ನು ಬಂದ್ ಮಾಡುವುದು, ಸೆಕೆಂಡ್ಸ್ ಕಡಿಮೆ ಮಾಡಿದರೆ ಬಹುಶಃ ಕಾನೂನುಬದ್ಧವಾಗಿ ನಡೆಯುವ ಇದಕ್ಕೆ ಹೆಚ್ಚಿನ ಸ್ಕೋಪ್ ಸಿಗುತ್ತದೆ ಮತ್ತು ಸರ್ಕಾರಕ್ಕೆ ಹೆಚ್ಚಿನ ರೆವಿನ್ಯೂ ಬರುತ್ತದೆ. ಇದರ ಮೂಲಕ ಹೆಚ್ಚಿನ ರೆವಿನ್ಯೂ ಗಳಿಸುವ ಸಾಧ್ಯತೆ ಇದೆ. ಅದರ ಬಗ್ಗೆ ಸರ್ಕಾರದವರು

ಚಿಂತನೆ ಮಾಡಬೇಕಾಗಿದೆ ಮತ್ತು ಒಂದು ಸ್ಪಷ್ಟೀಕರಣ ಕೊಡಬೇಕಾಗಿದೆ. ಎಕ್ಸೈಸ್ ಸಾಲ ಬಾಕಿ ಏನಿದೆ, ಅದರ ಮೇಲೆ 162 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವ ವಿಚಾರ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು, 1946-47ನೇ ಇಸವಿಯಿಂದ ಇಲ್ಲಿಯವರೆಗೆ ಮೊಬಿಲೈಜ್ ಆಗಿ ಬಂದ ಸಾಲವೆಂದು ಹೇಳಿದರು. 142 ಕೋಟಿ ರೂಪಾಯಿಗಳು ಅದರ ಮೇಲೆ ಇವತ್ತು 162 ಕೋಟಿ ರೂಪಾಯಿಗಳಾಗಿದೆ. ಅದರ ಬಗ್ಗೆ ಡೀಟೇಲ್ಸ್ ಅನ್ನು ಅವರು ಈ ಸದನದ ಗಮನಕ್ಕೆ ತಂದರೆ ಅದರ ಬಗ್ಗೆ ಬೆಳಕು ಚೆಲ್ಲಲು ಸಾಧ್ಯ. ಬರೀ ಸಮಾಜಕ್ಕೆ ರಾಂಗ್ ಸಿಗ್ನಲ್ ಹೋಗುತ್ತಿದೆ. 162 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡುತ್ತಿದ್ದೇವೆ, ಸಹಕಾರ ಸಂಘಗಳ ಮೂಲಕ ಮಾಡುವ ಸಾಲಕ್ಕೆ, ಇವತ್ತು ಕ್ರಾಪ್ ಲೋನ್‌ಗೆ ನಾವು ಬಡ್ಡಿಯನ್ನು ಮನ್ನಾ ಮಾಡುವುದಿಲ್ಲ ಅಥವಾ ಸಾಲ ಮಾಡಿರುವ ಯಾರೋ ಒಬ್ಬ ರೈತನನ್ನು ಜೈಲಿಗೆ ಹಾಕುವ ಕೆಲಸ ಎಷ್ಟೋ ತಾಲೂಕುಗಳಲ್ಲಿ ಆಗುತ್ತಿದೆ. ಅವರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದಕ್ಕಾಗುವುದಿಲ್ಲ, ಆಶ್ರಯ ಯೋಜನೆಯಲ್ಲಿ ಮನೆ ಕಟ್ಟಿದ್ದು, ಅವರ ಸಾಲ ವಸೂಲಿ ಮಾಡಲು ತರಾತುರಿ ಕ್ರಮ ಕೈಗೊಳ್ಳುತ್ತೇನೆ, ಆದರೆ ಎಕ್ಸೈಸ್ ಲಾಬಿಯಿಂದ 162 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡಲು ಹೊರಟಿದ್ದಾರೆಂದರೆ ಸಮಾಜಕ್ಕೆ ರಾಂಗ್ ಸಿಗ್ನಲ್ ಹೋಗುತ್ತಿದೆ. ಇದರ ಬಗ್ಗೆ ಹೆಚ್ಚು ಬೆಳಕು ಚೆಲ್ಲಿ 1946-47ನೇ ಇಸವಿಯಿಂದ ಇಂಥ ಎಷ್ಟು ಕೇಸ್ ಪೆಂಡಿಂಗ್‌ನಲ್ಲಿವೆ ? ಎಲ್ಲಿಂದ ಬಾಕಿ ಇವೆ? ಎನ್ನುವ ಡೀಟೇಲ್ಸ್ ಅನ್ನು ಸದನಕ್ಕೆ ಕೊಟ್ಟರೆ ಅದರ ಬಗ್ಗೆ ನಾವು ಹೆಚ್ಚಿನ ವಿಚಾರ ಮಾಡಬಹುದು. ಇಲ್ಲದಿದ್ದರೆ, ಸರ್ಕಾರ ಆ ಲಾಬಿಗೆ ಸಹಾಯ ಮಾಡಲು ಹೊರಟಿದೆ ಎಂಬ ತಪ್ಪು ಕಲ್ಪನೆ ಸಮಾಜಕ್ಕೆ ಹೋಗುತ್ತದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬೆಳಕು ಚೆಲ್ಲಬೇಕೆಂದು ಹೇಳುತ್ತಿದ್ದೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಏಕರೂಪ ಮಾರಾಟ ತೆರಿಗೆ ತರುವ ಸಂದರ್ಭದಲ್ಲಿ ಆಲ್ ಇಂಡಿಯಾ ಲೆವೆಲ್‌ನಲ್ಲಿ ನಮ್ಮ ಅಕ್ಕಪಕ್ಕದ ರಾಜ್ಯಗಳನ್ನು ಕಂಪೇರ್ ಮಾಡುವುದು. ಉದಾಹರಣೆಗೆ, ಫೀಡ್ಸ್ ಐಟಂ ಪ್ರೊಡಕ್ಷನ್‌ಗೆ ನಮ್ಮಲ್ಲಿ 2 ಪರ್ಸೆಂಟ್ ಇದೆ. ಆದರೆ, ಪಕ್ಕದ ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಸೊನ್ನೆ ಲೆವೆಲ್‌ನಲ್ಲಿದೆ. ನಾಳೆ ಫೀಡ್ಸ್ ಸಮಸ್ಯೆ ಏನಾಗುತ್ತದೆಂದರೆ, ಇಲ್ಲಿ ಪ್ರೊಡಕ್ಷನ್ ಮಾಡುವವರಿಗೆ ಇಲ್ಲಿ ಮಾರ್ಕೆಟ್ ಇರುವುದಿಲ್ಲ. ಅಲ್ಲಿಂದ ಮಾರ್ಕೆಟಾಗುತ್ತದೆ. ಕೆಲವರು, ಹೀಗಾದರೆ ನಾಳೆ ಫ್ಯಾಕ್ಟರಿ ಮುಚ್ಚಿಕೊಂಡು ಬೇರೆ ಕಡೆ ಹೋಗಬೇಕಾಗುತ್ತದೆಂದು ಹೇಳಿದರು. ಇಂಥ ಐಟಂಗಳ ಬಗ್ಗೆ ಅಧಿಕಾರಿಗಳು ವಿಚಾರ ಮಾಡಿ, ಏಕರೂಪ ಮಾರಾಟ ತೆರಿಗೆ ತರುವ ಸಂದರ್ಭದಲ್ಲಿ ಅಕ್ಕಪಕ್ಕದ ಮಹಾರಾಷ್ಟ್ರ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಯಾವ ಐಟಂ ಮೇಲೆ ಯಾವ ರೀತಿ ತೆರಿಗೆ ಇದೆ, ಅದನ್ನು ಅಧ್ಯಯನ ಮಾಡಿ, ಅದೇ ರೀತಿ ನಮ್ಮ ಏಕರೂಪ ಮಾರಾಟ ತೆರಿಗೆ ಮಾಡಿರೆ, ನಮ್ಮ ರಾಜ್ಯದಲ್ಲಿ ಇದ್ದ ಪ್ರೊಡಕ್ಷನ್‌ಗೆ ನಮ್ಮಲ್ಲಿ ಮಾರ್ಕೆಟ್ ಸಿಗುತ್ತದೆ. ಇಲ್ಲದಿದ್ದರೆ, ನಾವು ಪಕ್ಕದ ರಾಜ್ಯಗಳಿಗೆ ಹೋಗುವ ಪ್ರಸಂಗ ಬರುತ್ತದೆ. ಈ ಬಗ್ಗೆ ಸರ್ಕಾರ ನೇರವಾಗಿ ವಿಚಾರ ಮಾಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಇನ್ನು ಸ್ಟಾಂಪ್ ಡ್ಯೂಟಿ ಬಗ್ಗೆ ಹೇಳುವುದಾದರೆ, ಇದು ಹೆಚ್ಚಿನ ರೀತಿಯಲ್ಲಿ ಆದಾಯ ಬರುವ ಇಲಾಖೆ. ಕಂದಾಯ ಇಲಾಖೆ ಮೂಲಕ ಸ್ಟಾಂಪ್ ಡ್ಯೂಟಿಯನ್ನು ನಾವು ಕಲೆಕ್ಷನ್ ಮಾಡುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮೊದಲೇ 10 ಪರ್ಸೆಂಟ್ ಇತ್ತು. ಪಟ್ಟಣ ಪ್ರದೇಶ ಇರಬಹುದು, ಬೇರೆ ಬೇರೆ ಪ್ರದೇಶಗಳಲ್ಲಿ ಬೆಂಗಳೂರು ಹೊರತುಪಡಿಸಿ 10 ಪರ್ಸೆಂಟ್ ಇದ್ದದ್ದನ್ನು ಯಾವುದೇ ರಿಜಿಸ್ಟ್ರೇಷನ್ ಫೀ ಮೇಲೆ 9 ಪರ್ಸೆಂಟ್ ಮಾಡಿದ್ದಾರೆ. ಒಳ್ಳೆಯ ಕೆಲಸ ಮಾಡಿದ್ದಾರೆ. ಅದೇ ಪ್ರಕಾರ ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ 8 ಪರ್ಸೆಂಟ್ ಮಾಡಿರುವುದು ಒಂದು ಹಂತದಲ್ಲಿ ಒಳ್ಳೆಯದು. ಆದರೆ, ಮತ್ತೊಂದು ಸಮಸ್ಯೆ ಎಂದರೆ,

ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ 20 ಪರ್ಸೆಂಟ್ ವಾಲ್ಯುಯೇಷನ್ ಜಾಸ್ತಿ ಮಾಡುತ್ತಾರೆ. 4-5 ವರ್ಷಗಳಿಂದ ರಿಯಲ್ ಎಸ್ಟೇಟ್ ಡೌನ್ ಆಗುತ್ತಿದೆ. ಬೆಂಗಳೂರು, ಹುಬ್ಬಳ್ಳಿ ಧಾರವಾಡ, ಬೆಳಗಾಂ, ಮೈಸೂರು ಜಿಲ್ಲೆಗಳಲ್ಲಿ ಪ್ರಾಪರ್ಟಿ ವಾಲ್ಯೂ ಜಾಸ್ತಿ ಇತ್ತು. ಒಂದೊಂದು ಫ್ಲಾಟ್‌ಗೂ ಪ್ರಾಪರ್ಟಿ ವ್ಯಾಲ್ಯೂ ಕಡಿಮೆಯಾಗುತ್ತಿದೆ. ಆದರೆ, ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದ್ದ ವ್ಯಾಲ್ಯುಯೇಷನ್ ಇವತ್ತಿಗೂ ಹಾಗೆಯೇ ಇದೆ. ಅದು ಇನ್‌ಕ್ರೀಸ್ ಆಗುತ್ತಿದೆ. ಉದಾಹರಣೆಗೆ, ಒಂದು ನಗರದಲ್ಲಿ 80 ಸಾವಿರ ರೂಪಾಯಿಗಳು ಇರುತ್ತದೆ. ಫ್ಲಾಟ್ ಖರೀದಿಸಿದರೆ, ಮಾರ್ಕೆಟ್ ವ್ಯಾಲ್ಯೂ 80 ಸಾವಿರ ರೂಪಾಯಿಗಳು ಇರುತ್ತದೆ. ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ವ್ಯಾಲ್ಯುಯೇಷನ್ ಒಂದು ಲಕ್ಷ ರೂಪಾಯಿಗಳು ಇರುತ್ತದೆ. ಹೀಗಾದರೆ, ಸ್ಟಾಂಪ್ ಡ್ಯೂಟಿ ಕಡಿಮೆ ಮಾಡಿದರೂ, ವ್ಯಾಲ್ಯು ಜಾಸ್ತಿ ಇರುವುದರಿಂದ, ಡ್ಯೂಟಿ ಜಾಸ್ತಿಯಾಗುತ್ತದೆ. ಎಷ್ಟೋ ಜನರು ಮತ್ತೂ 20 ರೂಪಾಯಿಯ ಸ್ಟಾಂಪ್ ಪೇಪರ್‌ನಲ್ಲಿ ತೆಗೆದು ಸೇಲ್ ಡೀಡ್ ಮಾಡುತ್ತಿದ್ದಾರೆ. ಕಾನೂನು ಬದ್ಧವಾಗಿ ಆಗುವುದಿಲ್ಲವೆಂದರೂ, ಜನರು, ಇಲ್ಲ, ಸಬ್-ರಿಜಿಸ್ಟ್ರಾರ್ ಆಫೀಸ್‌ಗೆ ಎಷ್ಟು ಹಣ ತುಂಬ ಬೇಕಾಗುತ್ತದೆ, ಅದಾಗುವುದಲ್ಲಿ, ಒಂದು ಫ್ಲಾಟ್‌ಗೆ 80 ಸಾವಿರ ಇದ್ದದ್ದನ್ನು 1 ಲಕ್ಷ ರೂಪಾಯಿಗಳ ಮೇಲೆ ವ್ಯಾಲ್ಯುಯೇಷನ್ ಮೇಲೆ ಕೊಡಲಾಗುವುದಿಲ್ಲವೆನ್ನುವುದನ್ನು ನಾವು ಕೇಳಿದ್ದೇವೆ. ಮಾನ್ಯ ಕಂದಾಯಮಂತ್ರಿಗಳು ಇದರ ಬಗ್ಗೆ ಹೇಳಿಕೆ ನೀಡಿದ್ದು, ಹಿಂದಿನ ಕಂದಾಯ ಮಂತ್ರಿಗಳಾದ ಮಾನ್ಯ ಸೋಮಶೇಖರ್‌ರವರೂ ಇಲ್ಲಿ ಇದ್ದಾರೆ. ಅವರೂ ಸಹ ಇದರ ಬಗ್ಗೆ ಕನ್‌ಸಿಡರ್ ಮಾಡಿದ್ದರು. ಬೆಂಗಳೂರಿನಲ್ಲಿ ಪ್ರಾಪರ್ಟಿ ಡಿ-ವ್ಯಾಲ್ಯುಯೇಷನ್ ಮಾಡಿದ್ದರು.

ಆದರೆ, ಬೇರೆ ಬೇರೆ ನಗರಗಳಲ್ಲಿ ಇದು ಆಗಲಿಲ್ಲ. ನಮ್ಮ ಮಾನ್ಯ ಕಂದಾಯ ಮಂತ್ರಿಗಳು, ಇದನ್ನು ಕನ್‌ಸಿಡರ್ ಮಾಡಿ, ಡಿ-ವ್ಯಾಲ್ಯುಯೇಷನ್ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ, ಒಂದು, ಎರಡು ಪರ್ಸೆಂಟ್ ಏನು ಕಡಿಮೆ ಮಾಡಿದ್ದಾರೆ. ಅದರ ಜೊತೆ ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿದ್ದ ಪ್ರಾಪರ್ಟಿ ವ್ಯಾಲ್ಯುಯೇಷನ್ ಅನ್ನು ಡಿ-ವ್ಯಾಲ್ಯುಯೇಷನ್ ಮಾಡಿದರೆ ಮಾತ್ರ ಜನ ಸಾಮಾನ್ಯರಿಗೆ ಪ್ರಯೋಜನವಾಗುತ್ತದೆ. ಹೆಚ್ಚಿನ ಸೇಲ್ ಡೀಡ್‌ಗಳಿಂದ ನಮ್ಮಲ್ಲಿ ರಿಜಿಸ್ಟ್ರೇಷನ್ ಆಗಲು ಹೆಚ್ಚಿನ ಸ್ಕೋಪ್ ಬರುತ್ತದೆ. ಮತ್ತೆ ಇನ್‌ಕಂ ಅಷ್ಟೇ ಉಳಿಯುತ್ತದೆ. ಸರ್ಕಾರಕ್ಕೆ ನಾನು ಕೇಳುವುದೇನೆಂದರೆ, ಪ್ರತಿ ಆರು ತಿಂಗಳಿಗೊಮ್ಮೆ ಪ್ರತಿಯೊಬ್ಬ ಸಬ್-ರಿಜಿಸ್ಟ್ರಾರ್‌ಗೆ ಪ್ರತಿಯೊಬ್ಬ ಕಂದಾಯಾಧಿಕಾರಿಗಳಿಗೆ ನೀವು ಡೈರೆಕ್ಷನ್ ಕೊಡುತ್ತೀರೋ ಹೇಗೆ ಎನ್ನುವ ಪ್ರಶ್ನೆ ಬರುತ್ತದೆ. ಯಾರೋ ಸೇಲ್ ಡೀಡ್ ಮಾಡಿಕೊಂಡು ಹೋದರೆ, ಕಂಪಲ್ ಸರಿಯಾಗಿ ಆರು ತಿಂಗಳಿಗೊಮ್ಮೆ 20 ಏರಿಸುತ್ತಾರೆ. ಜನರು ಹೇಗೆ ವ್ಯವಹಾರ ಮಾಡಬೇಕು? ಪ್ರಾಪರ್ಟಿ ವ್ಯಾಲ್ಯುಯೇಷನ್, ಮಾರ್ಕೆಟ್ ವಾಲ್ಯೂ ಜಾಸ್ತಿಯಾದರೆ ಮಾಡಲಿ ಅಥವಾ ಇಷ್ಟು ಪರ್ಸೆಂಟ್ ಎಂದು ಫಿಕ್ಸ್ ಮಾಡಲಿ. ಕಂದಾಯ ಇಲಾಖೆಯ ಮೇಲಿಂದ ರಿಜಿಸ್ಟ್ರಾರ್‌ರವರು, ಐ.ಜಿ.ಯವರು ಸಬ್-ರಿಜಿಸ್ಟ್ರಾರ್‌ಗೆ ನೋಟೀಸ್ ಕೊಡುತ್ತಾರೆ. ಈ ವರ್ಷ ಟಾರ್ಗೆಟ್ ಇಷ್ಟು ಫಿಕ್ಸ್ ಮಾಡಿದ್ದೇವೆ, ಸ್ಟಾಂಪ್ ಡ್ಯೂಟಿ ಕಲೆಕ್ಷನ್ ಇಷ್ಟು ಆಗಲೇಬೇಕೆಂದೂ, 20 ಪರ್ಸೆಂಟ್ ಜಾಸ್ತಿ ಮಾಡಲೇಬೇಕೆಂದು ಹೇಳಿದಾಗ, ಅವರು 20 ಪರ್ಸೆಂಟ್ ಜಾಸ್ತಿ ಮಾಡುತ್ತಾರೆ.

12. 10 ಪಿ.ಎಂ.

ತಾವು ಪ್ರತಿ ಆರು ತಿಂಗಳಿಗೊಮ್ಮೆ ಸ್ಟಾಂಪ್ ಶುಲ್ಕ ಏರಿಸುವುದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಇದರಿಂದಾಗಿ ಮುದ್ರಾಂಕದ ಶುಲ್ಕ ಕಡಿಮೆಯಾಗುವುದರ ಜೊತೆಗೆ ನೋಂದಣಿ ಸಂಖ್ಯೆಯೂ ಕೂಡ ಕಡಿಮೆಯಾಗುತ್ತದೆ. ಆದ್ದರಿಂದ, ಈ ದಿಸೆಯಲ್ಲಿ ಹೆಚ್ಚಿನ ಗಂಭೀರವಾದ ಚಿಂತನೆ ಆಗಬೇಕಾಗಿದೆ. ಮತ್ತೊಂದು ಪ್ರಮುಖವಾದ ವಿಷಯ ಏನೆಂದರೆ, ಮಾನ್ಯ ಸೋಮಶೇಖರ್‌ರವರು ಕೂಡ ಈ ವಿಚಾರದ ಬಗ್ಗೆ ಪ್ರಸ್ತಾಪಿಸಿದರು, ಏಕೆಂದರೆ ಇದನ್ನು ಹಿಂದಿನ ಸರ್ಕಾರದವರು ಮಾಡಿದ್ದರು. ಏನೆಂದರೆ, ದಾನ ಪತ್ರ, ಪಾಟ್ನಿ ಪತ್ರ, ಹಕ್ಕುಬಿಟ್ಟ ಪತ್ರ. ಒಂದೇ ಕುಟುಂಬದ ಅಣ್ಣ ತಮ್ಮಂದಿರು ಆಸ್ತಿ ವಿಚಾರವಾಗಿ ತಮ್ಮ ನಡುವೆ ಮಾಡಿಕೊಳ್ಳುವಂತಹ ವ್ಯವಸ್ಥೆಗೆ ಪಾಟ್ನಿ ಪತ್ರ, ಹಕ್ಕುಬಿಟ್ಟ ಪತ್ರ ಎಂದು ಕರೆಯುತ್ತಾರೆ, ಈ ರೀತಿ ಕೊಟ್ಟಂಥ ಆಸ್ತಿಗಳಿಗೆ ಮಾರುಕಟ್ಟೆಯ ಶುಲ್ಕವನ್ನು ವಿಧಿಸುವುದಾದರೆ ಹೇಗೆ ? ಉದಾಹರಣೆಗೆ ತಂದೆ ನನ್ನ ಮಗಳಿಗೆ ಹತ್ತಿಪ್ಪತ್ತು ಲಕ್ಷದ ಆಸ್ತಿಯನ್ನು ಉಚಿತವಾಗಿ ಕೊಟ್ಟಿರುತ್ತಾನೆ, ಇಂಥ ಸನ್ನಿವೇಶದಲ್ಲಿ ಈ ಆಸ್ತಿಯ ಮೇಲೆ ಮುದ್ರಾಂಕದ ಶುಲ್ಕ ಸುಮಾರು ನಲವತ್ತು ಸಾವಿರ, ಎಂಬತ್ತು ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದರೆ ಹೇಗೆ? ಈ ರೀತಿ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಮೇಲ್ಕಾಣಿಸಿದ ಎಲ್ಲಾ ಪತ್ರಗಳು ಸುಮಾರು ಹತ್ತಿಪ್ಪತ್ತು ರೂಪಾಯಿಗಳ ಬೆಲೆಯ ಸ್ಟ್ಯಾಂಪ್ ಪೇಪರ್ ಮೇಲೆ ನಡೆದಿರುತ್ತವೆ, ಮುಂದೆ ಇವುಗಳಿಂದ ಕಾನೂನು ತೊಡಕುಗಳು ಬರಬಹುದು. ಇದಕ್ಕಾಗಿ ಹಿಂದಿನ ಸರ್ಕಾರದಲ್ಲಿ ಮಾನ್ಯ ಸೋಮಶೇಖರ್‌ರವರು ಇದಕ್ಕೆ ಫಿಕ್ಸೆಡ್ ಅಮೌಂಟ್ ಮಾಡಿದ್ದರು, ಎರಡು, ಮೂರು, ಐದು ಸಾವಿರ ರೂಪಾಯಿಗಳೆಂದು ಫಿಕ್ಸ್ ಮಾಡಿದ್ದರು. ಆದ್ದರಿಂದ, ಹಿಂದಿನ ಪದ್ಧತಿಯನ್ನೇ ಅಳವಡಿಸಿಕೊಂಡರೆ ಹೆಚ್ಚಿನ ನೋಂದಣಿಯಾಗುವುದರ ಜೊತೆಗೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ. ಆದ್ದರಿಂದ, ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಹೆಚ್ಚಿನ ಚಿಂತನೆ ಮಾಡಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಮೂರು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯದಾಗಿ ಈ ಸರ್ಕಾರದ ಅಬಕಾರಿಯ ನೀತಿ ಬಗ್ಗೆ ಹೇಳಿದ್ದಾರೆ. ಈ ವಿಚಾರದ ಬಗ್ಗೆ ಈಗಾಗಲೇ ನಾನು ನನ್ನ ಭಾಷಣದಲ್ಲಿ ಸಾಕಷ್ಟು ಹೇಳಿದ್ದೇನೆ. ಇಷ್ಟೊಂದು ದೊಡ್ಡ ಪ್ರಮಾಣದ ತೆರಿಗೆಯನ್ನು ಆ ಸೆಕ್ಟರ್‌ಗೆ ಹಾಕಿರುವುದೇ ಸಾಕ್ಷಿಯಾಗಿದೆ.

ನಮ್ಮ ರಾಜ್ಯದ ಸಂಪನ್ಮೂಲದ ಸಂವರ್ಧನೆಗೆ ಏನು ಮಾಡಬೇಕೋ ಅದನ್ನು ನಾವು ಮಾಡಲೇಬೇಕಾಗಿದೆ. ಅದೇ ರೀತಿ ಈ ಸೆಕೆಂಡ್ಸ್ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಎನ್ನುವ ಮಾನ್ಯ ಸದಸ್ಯರ ವಾದವನ್ನು ನಾನು ಒಪ್ಪುತ್ತೇನೆ. ಈ ಸೆಕೆಂಡ್ಸ್ ಹಾವಳಿಯನ್ನು ನಿರ್ದಾಕ್ಷಿಣ್ಯವಾಗಿ ಕಡಿಮೆ ಮಾಡಬೇಕು ಎನ್ನುವುದೇ ನನ್ನ ಪ್ರಯತ್ನ. ಉತ್ತರೋತ್ತರವಾಗಿ ಈ ಹಾವಳಿಯನ್ನು ಸಂಪೂರ್ಣವಾಗಿ ಅಳಿಸಿ ಹಾಕಬೇಕು ಎನ್ನುವ ತಮ್ಮ ಸಾಮಾಜಿಕ ಕಳಕಳಿ ಏನಿದೆ ಅದರಲ್ಲಿ ನಾನು ಕೂಡ ಭಾಗಿಯಾಗುತ್ತೇನೆ. ಈ ನಿಟ್ಟಿನಲ್ಲಿ ನಾವು ಆ ದಿಕ್ಕಿನಲ್ಲಿ ಹಾಕಿರತಕ್ಕಂಥ ಪ್ರಥಮ ಹೆಜ್ಜೆ ಎಂದು ನಾನು ತಮ್ಮಲ್ಲಿ ಹೇಳಬಯಸುತ್ತೇನೆ. illicit liquor ನಮ್ಮ ಜನಗಳ ಆರೋಗ್ಯವನ್ನು ಕೆಡಿಸುತ್ತದೆ, ಆದ್ದರಿಂದ illicit liquor ಮಾರತಕ್ಕಂಥದ್ದರ ಮೇಲೆ ಸಂಪೂರ್ಣ ನಿಯಂತ್ರಣ ಹಾಕಬೇಕು, ಇದಕ್ಕೆ ಈಗಾಗಲೇ ನಾನು ಸೂಚನೆ ಕೊಟ್ಟಿದ್ದೇನೆ. ಇಲ್‌ಸಿಟ್ ಲಿಕ್ಕರ್‌ಗೆ ಸಂಪೂರ್ಣ ನಿಯಂತ್ರಣ ಹಾಕುವುದರ ಜೊತೆಗೆ ಇನ್ನು ಮುಂದೆ ಇದನ್ನು ಸಂಪೂರ್ಣವಾಗಿ ಇದಕ್ಕೆ ವಿದಾಯ ಹೇಳಬೇಕು ಎನ್ನುವ ತಮ್ಮ ಯೋಜನೆಯನ್ನು ನಾನು ಒಪ್ಪುತ್ತೇನೆ. ಮೂರನೆಯದಾಗಿ 1942ರಿಂದ ಬಾಕಿ ಉಳಿದಿರತಕ್ಕ 142 ಕೋಟಿ ರೂಪಾಯಿಗಳ ಬಗ್ಗೆ ಹೇಳಿದ್ದೀರಿ.

ಕಳೆದ ಐವತ್ತು ವರ್ಷಗಳ ಅವಧಿಯಲ್ಲಿ ಇದರ ಮೇಲೆ ಕೇಳಿರತಕ್ಕಂಥ ಪ್ರಶ್ನೆಗಳನ್ನು ನೋಡಿದರೆ, ಅವುಗಳದ್ದೇ ಒಂದು ದೊಡ್ಡ ಪುಸ್ತಕವನ್ನು ಪ್ರಿಂಟ್ ಮಾಡಿಸಬಹುದು. ಇದಕ್ಕಾಗಿ 1992ರಲ್ಲಿ 'ಕರ-ಸಮಾಧಾನ' ಯೋಜನೆ ಮಾಡಬೇಕು ಎನ್ನುವ ಒಂದು ಪ್ರಯತ್ನ ನಡೆಯಿತು. ಅವತ್ತೇ ಇದನ್ನು ಮುಗಿಸಿ ಬಿಟ್ಟಿದ್ದರೆ ಈವತ್ತು ಈ ಪ್ರಶ್ನೆ ಬರುತ್ತಿರಲಿಲ್ಲ. ಇವತ್ತು ಈ ಪ್ರಶ್ನೆಗೆ ಇತಿಶ್ರೀ ಹಾಡಬೇಕು ಎನ್ನುವ ದೃಷ್ಟಿಯಿಂದ ನಾನು ಈ ಪ್ರಶ್ನೆಯನ್ನು ಕೈಗೆತ್ತಿಕೊಂಡಿದ್ದೇನೆ. ವರ್ಷೆ ವರ್ಷೇ ಇದರ ಬಡ್ಡಿ ಏರುತ್ತಿದೆಯೇ ಹೊರತು, ಇದರಲ್ಲಿ ಯಾರ ಹೆಸರಿಗೆ ನಿಂತಿದೆಯೋ ಅವರು ಯಾರೂ ಪತ್ತೆ ಇಲ್ಲ. ಇದನ್ನು ನಾವು ಮೊದಲು ಕಂಡುಹಿಡಿಯಬೇಕು. ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆಂದರೆ, ಆದಾಯ ತೆರಿಗೆಯನ್ನು ಕಟ್ಟದೇ ಇರತಕ್ಕಂಥವರು, ಕಳ್ಳ ಹಣವನ್ನು ಇಟ್ಟಿರತಕ್ಕಂಥವರು, ಇಂಥವರಿಗೆ ನಾವು ಇಂತಿಷ್ಟು ದಿನಗಳ ಕಾಲಾವಕಾಶ ಕೊಡುತ್ತೇವೆ, ಅಷ್ಟರೊಳಗೆ ನಿಮ್ಮ ಬಗ್ಗೆ ಡಿಕ್ಲೇರ್ ಮಾಡಿಕೊಂಡು ಹರಿಶ್ಚಂದ್ರರಾಗಿ ಎಂದು ಕೇಂದ್ರ ಸರ್ಕಾರದವರು ಮಾಡುತ್ತಾರೆ. ಇದಕ್ಕೆ ನಾವು ಏನು ಹೇಳುತ್ತೇವೆಂದರೆ, ನೀವು ಕೊಡಬೇಕಾದ ಹಣಕ್ಕೆ ಬಡ್ಡಿ ಇಲ್ಲದೇ ನಾವು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಐವತ್ತು ವರ್ಷಗಳಿಂದಲೂ ಈ ಅಕೌಂಟ್ ನಡೆಯುತ್ತಿದೆ, ಇದನ್ನು ಕ್ಲೋಜ್ ಮಾಡಿಬಿಡಿ, ಇದಕ್ಕಾಗಿ ನಾವು ನಿಮಗೆ ಮೂರು ತಿಂಗಳ ಕಾಲಾವಕಾಶ ಕೊಡುತ್ತೇವೆ. ಮೂರು ತಿಂಗಳು ಕಳೆದಾದ ಮೇಲೆ ಎಷ್ಟು ಬಂತು, ಎಷ್ಟು ಉಳಿಯಿತು, ಎಂಬಿತ್ಯಾದಿ ಸಂಪೂರ್ಣ ವಿವರಗಳನ್ನು ಸದನದ ಮುಂದೆ ಮಂಡಿಸುತ್ತೇನೆ. ಕೊನೆಯದಾಗಿ, ಮುದ್ರಾಂಕದ ಶುಲ್ಕದ ಬಗ್ಗೆ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದೀರಿ, ಇದನ್ನು ಕೂಡ ನಾನು ಗಮನಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಡಿ.ವಿ.ಜಿ. ಯವರು ರಚನೆ ಮಾಡಿರತಕ್ಕಂಥ 'ಮಂಕುತಿಮ್ಮನ ಕಗ್ಗ'ದ ವಿಚಾರವನ್ನು ಪ್ರಸ್ತಾಪಿಸಿದರು.

ಇಳೆಯಿಂದ ಮೊಳಕೆಯ ಹೊಗೆ ಬಂದು ತಮಟೆಗಳು ಇಲ್ಲ
ಫಲ ಮಾಗುವೊಂದು ತುತ್ತೂರಿ ದನಿ ಇಲ್ಲ

ಎನ್ನತಕ್ಕಂಥ ವಿಚಾರವನ್ನು ಅವರು ಹೇಳಿದರು. ಇದು ನನಗೆ ಅರ್ಥವಾಗಲಿಲ್ಲ, ಬಹುಶಃ ಮಾನ್ಯ ಸದಸ್ಯರುಗಳಿಗೆಲ್ಲಾ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಅರ್ಥ ಹೇಳಬೇಕಾಗಿತ್ತು. ಅದಕ್ಕಾಗಿ ನಾನು ಇದನ್ನು ತರಿಸಿಕೊಂಡು ಓದಿದೆ, ಇದರ ಅರ್ಥ ಏನೆಂದರೆ,

"ಭೂಮಿಯಲ್ಲಿ ನೆಟ್ಟ ಬೀಜದಿಂದ ಚಿಗುರೊಡೆಯುವಾಗ
ಕಾಯಿ ಹಣ್ಣು ಆಗುವಾಗ, ಯಾವ ವಾದ್ಯ ಘೋಷವು
ಕೇಳಿ ಬರುವುದಿಲ್ಲ, ಸೂರ್ಯ ಚಂದ್ರರು ಉದಯಿಸುವಾಗ
ಯಾವ ಸದ್ದು ಇಲ್ಲ, ಅಂಥಾದರಲ್ಲಿ ನಿನ್ನ ಸ್ವಪ್ರಶಂಸೆಯು
ಹಾಸ್ಯಾಸ್ಪದವಾಗಿ ಕಾಣುವುದಿಲ್ಲವೆ? ಆದುದರಿಂದ ನಿನ್ನ
ತುಟಿಯನ್ನು ಹೊಲಿದುಕೊಂಡು ಮೌನವಾಗಿ
ಇರುವದು ಸರಿ"

ಇದರ ಅರ್ಥ ಏನೆಂದರೆ, ನಾನು ಮಾಡಿರುವುದೇ ಸರಿ, ಆದುದರಿಂದ, ನನ್ನ ಪ್ರಶಂಸೆಯನ್ನು ನಾನು ಮಾಡಿಕೊಳ್ಳುವುದಿಲ್ಲ, ತುಟಿ ಮುಚ್ಚಿಕೊಂಡು ಇರುತ್ತೇನೆ ಎಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ತುಟಿ ಮುಚ್ಚಿಕೊಂಡು ಇರಬೇಡಿ.

ಶ್ರೀ ಎಸ್.ಎಂ.ಕೃಷ್ಣ : ಇನ್ನು ಮುಂದೆ ಅದು ನನಗೆ ಅಪ್ಲೈ ಆಗುತ್ತದೆ.

ಶ್ರೀ ವೈ.ಕೆ.ರಾಮಯ್ಯ : ಅದರರ್ಥ ಅದು ಅಲ್ಲ. ಅದರರ್ಥ ಏನೆಂದರೆ, "ಎಲ್ಲವನ್ನೂ ನಾ ಮಾಡಿದೆ ಎನ್ನುವ ಹಮ್ಮು ಏಕೋ ಮಂಕುತಿಮ್ಮ".

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ ನಾನು ಎರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸ ಬಯಸುತ್ತೇನೆ. ಮೊದಲನೆಯದಾಗಿ ಒರಿಸ್ಸಾ ಚಂಡಮಾರುತ ಪ್ರವಾಹಕ್ಕೆ ರಾಜ್ಯದಿಂದ ಏನು ಪರಿಹಾರ ಕೊಟ್ಟಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಇಡೀ ರಾಜ್ಯದ ಜನತೆಗೆ ಈ ಸದನ ಮೂಲಕ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಎರಡನೇಯದಾಗಿ ಏಲಕ್ಕಿ ಮತ್ತು ಕಾಫಿಯನ್ನು ನಾಲ್ಕು ತಿಂಗಳು ಕೊಂಡುಕೊಂಡು ವಿದೇಶಕ್ಕೆ ರಫ್ತು ಮಾಡತಕ್ಕಂಥವರಿಗೆ ನಾವು ತೆರಿಗೆ ವಿನಾಯ್ತಿ ನೀಡಿದ್ದೇವೆಂದು ಹೇಳಿದರು. ಅದರಂತೆ ಅಡಿಕೆ, ತೆಂಗು, ಮಾವು, ಇವುಗಳಿಗೆ ಈ ವಿನಾಯ್ತಿಯನ್ನು ವಿಸ್ತರಣೆ ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ ? ಎನ್ನುವುದನ್ನು ತಿಳಿಸಬೇಕು. ಮೂರನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಪವರ್ ಬಗ್ಗೆ ಬಹಳವಾಗಿ ಮಾತನಾಡಿದ್ದಾರೆ. ಸರ್ಕಾರಕ್ಕೆ ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಫಾರಿಕ್ ಕಮಿಟಿಯ ವರದಿ ಏನು ಇದೆ. ಮೀಟರಿಂಗ್ ಸಿಸ್ಟಂ- ಇಂಥ ಎಷ್ಟೋ ವಿಚಾರಗಳ ಬಗ್ಗೆ ಏಪ್ರಿಲ್ 10ರ ನಂತರ ನೀವು ಒಂದು ಅವಕಾಶ ಮಾಡಿಕೊಟ್ಟು ಅದನ್ನು ಮಂಡಿಸಿದರೆ ಒಳ್ಳೆಯದು. ಇದರ ಬಗ್ಗೆ ವಿವರಗಳನ್ನು ತಾವು ಮಂಡಿಸಬೇಕು, ಅದರಂತೆ ಫಾರಿಕ್ ಕಮಿಟಿಯ ವರದಿಯನ್ನು ತಿಳಿದುಕೊಂಡರೆ ಈ ರಾಜ್ಯದ ಜನತೆಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಮೂರು ಪ್ರಶ್ನೆಗಳನ್ನು ಮಾನ್ಯಮುಖ್ಯಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀಎಸ್.ಎಂ.ಕೃಷ್ಣ : ಫಾರಿಕ್ ಕಮಿಟಿ ಮಾಡಿರತಕ್ಕಂಥ ಶಿಫಾರಸ್ಸುಗಳ ಪ್ರತಿಯನ್ನು ಈ ಮನೆಯ ಸದಸ್ಯರೆಲ್ಲರಿಗೂ ಇವತ್ತೇ ಹಂಚತಕ್ಕಂಥ ವ್ಯವಸ್ಥೆಯನ್ನು ನಾನು ಮಾಡಿಸುತ್ತೇನೆ. ಒರಿಸ್ಸಾದ ಚಂಡಮಾರುತದ ಬಗ್ಗೆ ತಾವು ಪ್ರಸ್ತಾಪಿಸಿದ್ದೀರಿ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕದ ಜನತೆಯನ್ನು ಹಾಗೂ ನಮ್ಮ ಶಾಸಕರನ್ನು, ಎಲ್ಲರನ್ನೂ ಕೂಡ ಅಭಿನಂದಿಸಬೇಕಾಗಿದೆ. ಒಂದು ರಾಜ್ಯ ನೈಸರ್ಗಿಕ ವಿಕೋಪಕ್ಕೆ ಸಿಕ್ಕಿ ತೊಂದರೆಗೆ ಒಳಪಟ್ಟಾಗ ನಾವು ಕೂಡ ಅದರಲ್ಲಿ ಭಾಗವಹಿಸುತ್ತೇವೆ ಎನ್ನತಕ್ಕಂಥ ಸಂದೇಶವನ್ನು ನಮ್ಮ ರಾಜ್ಯದ ಜನತೆ ಇತರರಿಗೆ ನೀಡಿದೆ. ಇದರಡಿಯಲ್ಲಿ ಅಂದಾಜು ಇಪ್ಪತ್ತು ಕೋಟಿ ರೂಪಾಯಿಗಳು ಹಾಗೂ ವಸ್ತು ಸಂಗ್ರಹವನ್ನು ಸಂಕಷ್ಟದಲ್ಲಿರುವವರಿಗೆ ಕಳುಹಿಸಿದ್ದೇವೆ. ಇದರ ವಿವರ ನನ್ನ ಹತ್ತಿರ ಇದೆ. ಮುಖ್ಯಮಂತ್ರಿಗಳ (ಒರಿಸ್ಸಾ ಚಂಡಮಾರುತ) ಪರಿಹಾರ ನಿಧಿಗೆ 22-3-2000ದವರೆವಿಗೂ ಸಂಗ್ರಹವಾದ ಹಣದ ವಿವರ. ರೂ. 16,40,90,240-00. ಇದರಲ್ಲಿ ಸರ್ಕಾರಿ ನೌಕರರಿಂದ ರೂ.ಒಂಬತ್ತು ಕೋಟಿ ತೊಂಬತ್ತೆಂಟು ಲಕ್ಷ, ಸಾರ್ವಜನಿಕರಿಂದ ರೂ.ಆರು ಕೋಟಿ ನಲವತ್ತೆರಡು ಲಕ್ಷ, ನಲವತ್ತೆಂಟು ಸಾವಿರದ ಆರುನೂರ ನಲವತ್ತೈದು ವಿವಿಧ ಕಂಪನಿಗಳಿಂದ ಸುಮಾರು ಒಂದು ಕೋಟಿ ಎಪ್ಪತ್ತೇಳು ಲಕ್ಷ ರೂಪಾಯಿಗಳು ಸಂಗ್ರಹವಾಗಿದೆ. ಅದರಲ್ಲಿ 14 ಕೋಟಿ ರೂಪಾಯಿಗಳಷ್ಟು ಉಳಿದ ಹಣ ನಮ್ಮ ಹತ್ತಿರ ಇದೆ. ವಿಧಾನ ಸೌಧದಲ್ಲಿರುವ ಮೈಸೂರು ಬ್ಯಾಂಕ್ ಶಾಖೆಯಲ್ಲಿ 10 ಕೋಟಿ 3 ಲಕ್ಷ ರೂಗಳನ್ನು ಇಡಲಾಗಿದೆ. ಬ್ಯಾಂಕ್‌ನಲ್ಲಿ ಇನ್ನೂ ಉಳಿದ ಹಣವಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ, ಒಂದು ಜಿಲ್ಲೆಯನ್ನು ದತ್ತು ಮಾಡಿಕೊಂಡಿದ್ದೇವೆಂದು ಹೇಳಿದ್ದೀರಿ. ಅಲ್ಲಿ ಸರ್ಕಾರ ಬದಲಾಗಿದೆ. ಅಡಾಪ್‌ಷನ್ ಅನ್ನು

ಕಂಟಿನ್ಯೂ ಮಾಡಿಕೊಳ್ಳುತ್ತೀರಾ ? ಸಂಗ್ರಹವಾಗಿರುವ ಈ ಹಣವನ್ನು ಏಕೆ ಇನ್ನು ಅಲ್ಲಿಗೆ ಕಳುಹಿಸಿಲ್ಲ? ಅಲ್ಲೇನಾದರೂ ಮಿಸ್-ಅಪ್ರೋಪ್ರಿಯೇಷನ್ ಆಗಿದೆಯೇ ? ಸರಿಯಾದ ರೀತಿಯಲ್ಲಿ ಹಣ ಉಪಯೋಗವಾಗುತ್ತಿಲ್ಲವೆ ? ಇದರಲ್ಲಿ ಬೇರೇನಾದರೂ ಉದ್ದೇಶ ಇದೆಯೇ ?

ಶ್ರೀ ಎಸ್.ಎಂ.ಕೃಷ್ಣ : ಕಷ್ಟದಲ್ಲಿರುವವರ ಸಹಾಯಕ್ಕೆ ನಾವು ಹೋಗಿದ್ದೆವು. ಅಲ್ಲಿ ಚುನಾವಣೆಗಳು ಬಂತು. ಆ ಚುನಾವಣೆಗಳ ಸಮಯದಲ್ಲಿ ನಾವು ಈ ಕೆಲಸಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಒಂದು ಜಿಲ್ಲೆಯನ್ನು ನಾವು ದತ್ತು ತೆಗೆದುಕೊಂಡಿದ್ದೇವೆ. ನಮ್ಮ ಉದ್ದೇಶವೇನೆಂದರೆ, ಉಳಿದ ಹಣದ ಆಶ್ರಯದಲ್ಲಿ ಅಲ್ಲಿ ಮುಂದಾಗಬಹುದಾದ ಅನರ್ಥಗಳನ್ನು ಗಮನದಲ್ಲಿಟ್ಟುಕೊಂಡು ಶಾಲಾ-ಕಾಲೇಜುಗಳ ಕಟ್ಟಡಗಳನ್ನು ಕಟ್ಟಿಸಿ ಆ ಸರ್ಕಾರಕ್ಕೆ ಕರ್ನಾಟಕದ ಕೊಡುಗೆಯನ್ನಾಗಿ ಕೊಡಬೇಕೆಂಬುದಾಗಿದೆ. ಅದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ. ಈಗ ಅಲ್ಲಿ ಹೊಸ ಸರ್ಕಾರ ರಚನೆಯಾಗಿದೆ. ಆದ್ದರಿಂದ, ಆ ಮುಖ್ಯಮಂತ್ರಿಗಳ ಜೊತೆಯಲ್ಲಿ ವಿಷಯ ಪ್ರಸ್ತಾಪಿಸಿ, ಈ ಹಣವನ್ನು ಒರಿಸ್ಸಾ ಜನರ ಬಳಕೆಗಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಹೇಳುತ್ತೇವೆ. ಕಾಫಿ ವಿಚಾರದ ಬಗ್ಗೆ ವಿಚಾರ ಮಾಡಿ ನಂತರ ತಮಗೆ ತಿಳಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ನಮ್ಮ ಒತ್ತಾಯವೇನೆಂದರೆ, ಕೇವಲ ಏಲಕ್ಕಿ, ಕಾಫಿ, ಅಲ್ಲ, ಎಕ್ಸ್‌ಪೋರ್ಟಾಗುತ್ತಿರುವುದು. ಫ್ರೂಟ್ಸ್ ಪಲ್ಪ್ ಆಗುತ್ತದೆ, ಬೆಂಡಾಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ : ಫ್ರೂಟ್ಸ್ ಬಗ್ಗೆ ನಾನು ಈಗಾಗಲೇ ಹೇಳಿ ಒಪ್ಪಿದ್ದೇನೆ. ಅಡಿಕೆ ವಿಚಾರದಲ್ಲಿ ನಾನು ತಿಳಿಯಬೇಕಾಗಿದೆ. ಅಡಿಕೆ ಎಲ್ಲಿ ಎಕ್ಸ್‌ಪೋರ್ಟಾಗುತ್ತದೆಯೇ ಗೊತ್ತಿಲ್ಲ. ಅಡಿಕೆ ಎಕ್ಸ್‌ಪೋರ್ಟಾಗುವುದು ಗುಟ್ಕಾಗೆ, ಜಿಲ್ಲಿಗೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಅದು ಇಂಟರ್ನಲ್ ಕನ್‌ಸಂಪ್ಷನ್. ನೀವು ವಿದೇಶಕ್ಕೆ ಹೋಗುವ ಬಗ್ಗೆ ಹೇಳಿರುವುದು.

ಶ್ರೀ ಎಸ್.ಎಂ.ಕೃಷ್ಣ : ತಾವು ಹೇಳುವುದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೇ, ನಿನ್ನೆ ಮುಂಗಡಪತ್ರದ ಮೇಲಿನ ಚರ್ಚೆ ನಡೆಯುವ ಕಾಲಕ್ಕೆ ನಮ್ಮ ವಿಜಯನಗರ ಎಡದಂಡೆ ಕೆನಾಲ್ ದುರಸ್ಥಿ ಬಗ್ಗೆ ಹೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಲಿಲ್ಲ. ಹೆಚ್‌ಕೆಡಿಬಿಗೆ ವಾರ್ಷಿಕ ಅನುದಾನವನ್ನು ಈ ಸಾರಿ 60 ಕೋಟಿ ರೂಪಾಯಿಗಳಷ್ಟು ಕೊಡುತ್ತೇವೆಂದು ಹೇಳಿದ್ದರು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಲಿಲ್ಲ. ಯಾವ ಭಾಗದಲ್ಲಿ ಶಿಕ್ಷಣದ ಮಟ್ಟ ಕುಸಿದಿದೆ, ಹಾಗೆಯೇ ಹಾವೇರಿ, ಕೊಪ್ಪಳ ಜಿಲ್ಲೆಗಳಲ್ಲಿ ಲಾ ಅಥವಾ ಡಿಗ್ರಿ ಕಾಲೇಜುಗಳನ್ನು ತೆರೆಯುವ ಬಗ್ಗೆ ಹೇಳಿದ್ದೆ, ಅದರ ಬಗ್ಗೆಯೂ ಉತ್ತರ ನೀಡಿಲ್ಲ. ತುಂಗಭದ್ರಾ ಪ್ರಾಜೆಕ್ಟ್‌ನಲ್ಲಿ ಹೂಳು ತುಂಬಿ 31 ಟಿಎಂಸಿ ನೀರು ನಿಲ್ಲಲು ಅದರಲ್ಲಿ ಸಾಧ್ಯವಿಲ್ಲ. ಅದಕ್ಕೆ ತಾವೇನು ಪರಿಹಾರ ಕಂಡುಹಿಡಿಯುತ್ತೀರಿ ? ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುತ್ತೀರಾ ಅಥವಾ ಪ್ಯಾರಲಲ್ ಕೆನಾಲ್ ನಿರ್ಮಾಣ ಮಾಡುತ್ತೀರಾ ಎಂಬ ಬಗ್ಗೆ ಹೇಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಯವರು ದಯಮಾಡಿ ಈ 4 ವಿಷಯಗಳ ಬಗ್ಗೆ ಉತ್ತರ ನೀಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಇವುಗಳೆಲ್ಲವುಗಳಿಗೂ ಸಂಬಂಧಪಟ್ಟ ಮಂತ್ರಿಗಳು ಇಲಾಖಾ ಬೇಡಿಕೆಯ ಮೇಲಿನ ಚರ್ಚೆ ಸಂದರ್ಭದಲ್ಲಿ ಉತ್ತರ ನೀಡುತ್ತಾರೆ. ಬಜೆಟ್‌ನಲ್ಲಿ ಇದಕ್ಕೆ ಉತ್ತರ ಸಿಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ವಾಟರ್ ರೇಟ್ ಅನ್ನು ಜಾಸ್ತಿ ಮಾಡುವುದು ಅನಿವಾರ್ಯವೆಂದು ಅವರು ಪ್ರಸ್ತಾಪಿಸಿದ್ದಾರೆ. ಈಗಲೇ ರೈತರ ಬೆಳೆಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಹವಾಮಾನ ವೈಪರೀತ್ಯ ಮತ್ತು ಬೇರೆ ಬೇರೆ ರೋಗಗಳಿಂದ ಸಾಕಷ್ಟು ಹಾನಿಯನ್ನು ಈಗಾಗಲೇ ನಮ್ಮ ರಾಜ್ಯದಲ್ಲಿ ರೈತರು ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೀವು ನೀರಿನ ತೆರಿಗೆಯನ್ನು ಜಾಸ್ತಿ ಮಾಡಿದರೆ, ರೈತರ ಮೇಲೆ ದೊಡ್ಡ ಹೊರೆ ಹಾಕಿದ ಹಾಗಾಗುತ್ತದೆ. ಅದರಿಂದಾಗಿ, ಇದನ್ನು ಸದ್ಯಕ್ಕೆ ಸ್ಥಗಿತ ಮಾಡುವ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ. ಅದರ ಜೊತೆಗೆ, ತಾವು ಅಪ್ಪರ್ ತುಂಗಾ ಪ್ರಾಜೆಕ್ಟ್ ಹಣದ ಬಗ್ಗೆ ಪ್ರಸ್ತಾಪಿಸಿದ್ದೀರಿ. ಹೀಗೆ, ಹಣ ಕೊಡುವಾಗ ದಯಮಾಡಿ ಅದರ ಮೇಲ್ಗಡೆ ಇರುವ ನಾವು ಮುಳುಗಿ ಹೋಗುತ್ತಿದ್ದೇವೆ, ನಮಗೆ ಪರಿಹಾರ, ಪುನರ್ವಸತಿ ಮೊದಲು ಕೊಡಬೇಕು. ಈಗಾಗಲೇ ಡ್ಯಾಮ್ ಕೆಲಸ ಶುರುವಾಗಿದೆ. ಎಸ್ಕಲೇಷನ್ ಕೆಲಸ ಶುರುವಾಗಿದೆ. ನಮಗೆ ಪರಿಹಾರ, ಪುನರ್ವಸತಿ ಮಾಡುವ ಸಲುವಾಗಿ, ಮೊದಲು ಹಣವನ್ನು ನಿಗದಿಪಡಿಸಬೇಕು. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಇದರಿಂದ ತ್ಯಾಗ ಮಾಡುವ ಜನರಿಗೆ ಮೊದಲು ಸೌಲಭ್ಯ ಕಲ್ಪಿಸಿಕೊಡಬೇಕು.

ಅಧ್ಯಕ್ಷರು : ಒಬ್ಬರು 5-6 ಕ್ಲಾರಿಫಿಕೇಷನ್ ಕೇಳಿದರೆ, ಸಮಯವಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಇದರ ಜೊತೆಗೆ, ನಮ್ಮ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ, ಸಾಕಷ್ಟು ದೊಡ್ಡ ಘಟನೆ ಸಂಭವಿಸಿದ್ದು, ಅದನ್ನು ತಡೆಗಟ್ಟುವ ದೃಷ್ಟಿಯಿಂದ ಗೃಹ ಇಲಾಖೆಗೆ ವಿಶೇಷ ಒತ್ತನ್ನು ಹಣವನ್ನು ಕೊಡಬೇಕಾಗಿತ್ತು. ಈ ನಿಟ್ಟಿನಲ್ಲಿ ತಾವು ಏನೂ ಪ್ರಸ್ತಾಪಿಸಲಿಲ್ಲ. ಗೃಹ ಇಲಾಖೆಯನ್ನು ವಿಶೇಷ ವ್ಯವಸ್ಥೆ ಮಾಡಿ, ಮತ್ತು ಬಲಪಡಿಸುವ ದೃಷ್ಟಿಯಿಂದ ನಿಮ್ಮ ಕಾರ್ಯಕ್ರಮಗಳೇನು ಅದರ ಬಗ್ಗೆ ತಿಳಿಸಬೇಕು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ : ಕೊಡಗು ಮತ್ತಿತರ ಜಿಲ್ಲೆಗಳಲ್ಲಿ ಅಭಿವೃದ್ಧಿಗೋಸ್ಕರ, ಸ್ಪೆಷಲ್ ಪ್ಯಾಕೇಜ್‌ಗಾಗಿ ರಸ್ತೆ, ಶಿಕ್ಷಣ, ಆಸ್ಪತ್ರೆಗೆ ಬಜೆಟ್‌ನಲ್ಲಿ ಹಣ ಕೊಡಬೇಕೆಂದು ನಾವು ಕೇಳಿದ್ದೇವೆ. ಅದಕ್ಕೆ ತಾವು ಉತ್ತರ ನೀಡಬೇಕು.

ಶ್ರೀ ಬಿ.ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಕೆಲವು ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಉದಾರವಾಗಿ ಆಯಿತು, ಒಪ್ಪಿದ್ದೇವೆ ಎಂದು ಹೇಳಿದ್ದಾರೆ. ಸಂತೋಷ. ಪಲ್ಸ್ ಬಗ್ಗೆ ಕೂಡ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದಿದ್ದಾರೆ. ಹಾಗೆಯೇ, ಸ್ಟಾಂಪ್ ಡ್ಯೂಟಿ ಬಗ್ಗೆಯೂ ಅದೇ ರೀತಿ ನಿಖರವಾಗಿ ಹೇಳಬೇಕು. ಏಕೆಂದರೆ, ಸರ್ಕಾರದಿಂದ ರಿಟ್ರಾಗೇಟೀವ್ ಸ್ಟೆಪ್ ಆಗುತ್ತದೆ. ಹೊಸದಾಗಿ ಏನೂ ಕೊಡಬೇಕಿಲ್ಲ. ಸಮಾಜದಲ್ಲಿ ತಂದೆ ಹೆಣ್ಣು ಮಗಳಿಗೆ, ತನ್ನ ಹೆಂಡತಿಗೆ ದಾನ ಕೊಡುವುದಕ್ಕೆ ರಿಜಿಸ್ಟ್ರೇಷನ್ ಆಗುತ್ತಿರಲಿಲ್ಲ. ರಿಜಿಸ್ಟ್ರೇಷನ್ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು, ರಿಜಿಸ್ಟ್ರೇಷನ್ ಇತ್ತು. ಜನರು ನೆಮ್ಮದಿಯಿಂದಿದ್ದರು. ಮತ್ತೆ, ಇದನ್ನು ನೀವು ಮಾರ್ಕೆಟ್ ವ್ಯಾಲ್ಯು ಮೇಲೆ ಸ್ಟಾಂಪ್ ಡ್ಯೂಟಿ ಹಾಕಿರುವುದು ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಮತ್ತೆ ಹೆರಾಸ್‌ಮೆಂಟ್ ಶುರುವಾಗುತ್ತದೆ. ಆದ್ದರಿಂದ, ಅದರ ಬಗ್ಗೆ

ನಿಖರವಾಗಿ ಹೇಳಬೇಕು. ಎಂದೇನು ಮಾಡಿದ್ದೀರಿ, ಅದನ್ನು ರಿಸ್ಟೋರ್ ಮಾಡುತ್ತೇವೆಂದು ಹೇಳಬೇಕು. ಎರಡನೆಯದಾಗಿ 20 ಸಾವಿರ ವಿದ್ಯಾರ್ಥಿಗಳನ್ನು ಇನ್‌ಫರ್ಮೇಷನ್ ಟೆಕ್ನಾಲಜಿಯಲ್ಲಿ ಸೇರಿಸುತ್ತೇವೆ ಎಂದಿದ್ದೀರಿ. ಇನ್ನೊಂದು ಕಡೆ, ಉನ್ನತ ಶಿಕ್ಷಣಕ್ಕಾಗಿ ನೀಡುವ ಅನುದಾನದಲ್ಲಿ ನಾವು 15 ಪರ್ಸೆಂಟ್ ಕಡಿತ ಮಾಡಿದ್ದೇವೆಂದಿದ್ದೀರಿ. ಉನ್ನತ ಶಿಕ್ಷಣವನ್ನು ಖಾಸಗೀಕರಣಗೊಳಿಸುವ ದಿಕ್ಕಿನಲ್ಲಿ ಹೋಗುತ್ತಿದ್ದೀರೋ ಏನೋ ಎಂದು ಕಾಣಿಸುತ್ತಿದೆ. ಬಡವರು, ಹಳ್ಳಿಯಿಂದ ಬರುವ ಪರಿಶಿಷ್ಟ ಜಾತಿಯವರು ಹಾಗೂ ಪರಿಶಿಷ್ಟ ಪಂಗಡದವರು ಖಾಸಗೀಕರಣದಲ್ಲಿ ಈ ಉನ್ನತ ಶಿಕ್ಷಣ ಸೌಲಭ್ಯ ಪಡೆಯುವುದಕ್ಕಾಗುವುದಿಲ್ಲ. ಟೈಪ್‌ರೈಟಿಂಗ್ ಕಲಿಕೆ ಇವತ್ತು ಮುಗಿದಿದೆ. ದಲಿತರು, ಹಿಂದುಳಿದವರು ಟೈಪ್‌ರೈಟಿಂಗ್ ಅನ್ನು ಇನ್ನೂ ಕಲಿತಿಲ್ಲದಿರುವಾಗ, ನಾವು ಅವರಿಗೆ ಕಂಪ್ಯೂಟರ್ ಕಲಿಸಲು ಹೋಗಿದ್ದೇವೆ. ಈ ವಿದ್ಯಾರ್ಥಿಗಳು ಅದರಿಂದ ವಂಚಿತರಾಗುತ್ತಿದ್ದಾರೆ ಏನೋ ಎನ್ನುವ ಭಯವಿರುವುದರಿಂದ 20 ಸಾವಿರ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ಹಳ್ಳಿಗಾಡಿನ ಜನರಿಗೆ, ದಲಿತರಿಗೆ, ರೈತರ ಮಕ್ಕಳಿಗೆ ಅನುಕೂಲ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು. 15 ಪರ್ಸೆಂಟ್ ಕಡಿತ ಮಾಡುತ್ತೇವೆನ್ನುತ್ತೀರಿ, ಇನ್ನೊಂದು ಕಡೆ ಕಾಲೇಜು ವಿದ್ಯಾರ್ಥಿಗಳಿಗೆ ಫೀಸ್ ಜಾಸ್ತಿ ಮಾಡಿದ್ದೇವೆನ್ನುತ್ತೀರಿ. ಅದನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡಲೇಬೇಕು. ಹಾಗೆಯೇ ಉನ್ನತ ಶಿಕ್ಷಣಕ್ಕೆ 15 ಪರ್ಸೆಂಟ್ ಕಡಿತ ಮಾಡಿದ್ದೀರಿ.

ಶ್ರೀ ಎಸ್.ಎಂ.ಕೃಷ್ಣ : ಸರ್ಕಾರ ಕೊಡುವ ಅನುದಾನವನ್ನು ಕಡಿಮೆ ಮಾಡಿರುವುದು.

ಶ್ರೀ ಬಿ.ಸೋಮಶೇಖರ್: ಯುಜಿಸಿಗೆ 1996ನೇ ಇಸವಿಯಿಂದ 135 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅದನ್ನು ಸ್ವಲ್ಪ ರೆಸ್ಟೋರ್ ಮಾಡಬೇಕು.

ಶ್ರೀ ಎಸ್.ಎಂ.ಕೃಷ್ಣ : ಸರ್ಕಾರೀ ಕಾಲೇಜಿನಲ್ಲಿ ಯಾವ ಬದಲಾವಣೆಯೂ ಇಲ್ಲ. ಸರ್ಕಾರೀ ಕಾಲೇಜಿನಲ್ಲಿ ಅದು ಹಾಗೆಯೇ ಮುಂದುವರೆಯುತ್ತದೆ.

ಶ್ರೀ ಬಿ.ಸೋಮಶೇಖರ್ : 20 ಸಾವಿರ ಕೋಟಿ ರೂಪಾಯಿಗಳ ಸಾಲ ತೆಗೆದುಕೊಂಡಿದ್ದೀರಿ. ಅದಕ್ಕೆ ಒಂದು ವರ್ಷದ ಬಡ್ಡಿ ಎಷ್ಟಾಗುತ್ತದೆ? ನಮ್ಮ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್ ಕಡಿಮೆಯಾಗುತ್ತದೆಂದು ಹೇಳಿದ್ದೀರಿ, ಸರ್ಕಾರದಲ್ಲಿ 5 ಪರ್ಸೆಂಟ್ ಹುದ್ದೆ ಕಡಿತ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ನಾವು ತೀರ್ಮಾನಿಸಿದ್ದೇವೆ. ಯಾವ್ಯಾವ ಹುದ್ದೆಗಳನ್ನು ರದ್ದು ಮಾಡಬೇಕೆಂಬುದನ್ನು ಐಡೆಂಟಿಫೈ ಸಹ ಮಾಡಿದ್ದೇವೆ. ಅದರ ಬಗ್ಗೆ ಎಷ್ಟು ಬೇಗ ತೀರ್ಮಾನವಾಗುತ್ತದೆಂಬುದರ ಬಗ್ಗೆ ಹೇಳಬೇಕು. ಅದು ಬಹಳ ಒಳ್ಳೆಯ ಹೆಜ್ಜೆಯಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್ : ಕೇವಲ ಸರ್ಕಾರಿ ಶಾಲೆಗಳಲ್ಲಿ ಪುಕ್ಕಟೆಯಾಗಿ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತೇವೆ ಎಂದು ಹೇಳಿದ್ದೀರಿ. ಖಾಸಗಿ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೂ ಆ ಸವಲತ್ತು ಕೊಡಬೇಕೆಂದು ನಾನು ಹೇಳಿದ್ದೇನೆ. ಅದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು. ವಿದ್ಯಾ ಸಂಸ್ಥೆಗಳಿಗೆ ಕೆಲವು ಭೂಮಿ ದಾನ ಕೊಡುತ್ತಾರೆ. ಜಮೀನು ದಾನ ಕೊಡುತ್ತಾರೆ. ಆ ದಾನ ಪತ್ರಗಳಿಗೆ ತಾವು ಸ್ಟಾಂಪ್ ಡ್ಯೂಟಿಯನ್ನು ಎಗ್ಜೆಂಪ್ಟ್ ಮಾಡುತ್ತೀರಾ ?

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೇ, ಈ ಬಾರಿ ಆಯವ್ಯಯ ಮಂಡನೆಯ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಾಫಿ, ಏಲಕ್ಕಿ, ಮೆಣಸು ಬೆಳೆಗಾರರಿಗೆ ಇದರ ಬಗ್ಗೆ ಸ್ವಲ್ಪ

ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ. ಇನ್ನೂ ಮಾಡತಕ್ಕಂಥದ್ದು ಕೆಲವು ಬಾಕಿ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಕಾರಣವೇನೆಂದರೆ ಕಾಫಿ ಬೆಳೆಗಾರರು ಎಲ್ಲಾ ಕೃಷಿಕರಂತೆ ತುಂಬಾ ತೊಂದರೆಗೆ ಸಿಕ್ಕಿಕೊಂಡಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚಿನ ದಿನಗಳಲ್ಲಿ ಕಾಫಿ ಬೆಳೆಗಾರರು ಅತ್ಯಂತ ಸಂಕಟದ ಪರಿಸ್ಥಿತಿಯಲ್ಲಿ ಇದ್ದಾರೆ. ಆದರೂ ಅವರಿಗೆ ಏನು ಅನುಕೂಲತೆಯನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಎರಡನೆಯದಾಗಿ ಪವರ್ ಶೆಡಿಂಗ್ ಬಗ್ಗೆ ಹೇಳುವುದಾದರೆ, ಲೋಡ್ ಶೆಡ್ಡಿಂಗ್ ಇಲ್ಲ, ಪವರ್ ಕಡಿತ ಇಲ್ಲ ಇದರ ಬಗ್ಗೆ ಈಗ ತಾನೇ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು. ಮಲೆನಾಡು ಪ್ರದೇಶದಲ್ಲಿ ಲೋಡ್ ಶೆಡ್ಡಿಂಗ್ ಮತ್ತು ಪವರ್ ಕಡಿತ ಇಲ್ಲ, ಪವರ್ ಇಲ್ಲ, ಈ ತರಹ ಮೂರು ಭಾಗವಿದೆ. ಏಕೆಂದರೆ 24 ಗಂಟೆಗಳಲ್ಲಿ 8 ಗಂಟೆಗಳ ಕಾಲ ಪವರ್ ಯಾವ ಸಂದರ್ಭದಲ್ಲಿ ಬರುತ್ತದೆಂದು ನಾವು ಕಾದುಕೊಂಡು ಉಪಯೋಗಿಸುವಂತಹ ಪರಿಸ್ಥಿತಿ ಇದೆ. ನಾವು ಅವರನ್ನು ಕೇಳಿದಾಗ, ಅವರು ಸಿಬ್ಬಂದಿಯ ಕೊರತೆ ಇದೆ ಎನ್ನುವ ಕಾರಣವನ್ನು ಹೇಳುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಸ್ಥಿತಿಯನ್ನು ಸರಿಪಡಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಮೂರನೆಯದಾಗಿ ತಾವು ಮನೆಯನ್ನು ಕಟ್ಟುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಮಲೆನಾಡಿನಲ್ಲಿ ಈಗಾಗಲೇ ಮಳೆಗಾಲ ಪ್ರಾರಂಭವಾಗುತ್ತಿದೆ, ಇಲ್ಲಿಯವರೆವಿಗೂ ಆಶ್ರಯ ಬಗರ್ ಹುಕುಂ, ಇಂತಹ ಸಮಿತಿಗಳು ಆಗಲಿಲ್ಲ. ಈ ಕಮಿಟಿಗಳು ಆಗದೆ ಇದ್ದರೆ ಮಲೆನಾಡಿನಲ್ಲಿ ಮತ್ತೆ ಮನೆಯನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಈಗಾಗಲೇ ಮಾರ್ಚಿ ತಿಂಗಳು ಪ್ರಾರಂಭವಾಗಿರುವುದರಿಂದ ಇನ್ನು 6 ತಿಂಗಳುಗಳ ನಂತರ ನಾವು ಏನೇ ಇದ್ದರೂ ನವೆಂಬರ್ ತಿಂಗಳಿನ ನಂತರ ಹೋಗಬೇಕಾಗುತ್ತದೆ, ತಕ್ಷಣ ಈ ಕಮಿಟಿಗಳ ರಚನೆಯನ್ನು ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ಕಳೆದ ನವೆಂಬರ್ ತಿಂಗಳಿನಲ್ಲಿ ನಮ್ಮಿಂದ ಎಲ್ಲಾ ಪಟ್ಟಿಗಳನ್ನು ತರಿಸಿಕೊಂಡಿದ್ದಾರೆ ಆದರೆ ಇಲ್ಲಿಯವರೆವಿಗೆ ಕಮಿಟಿಗಳು ಯಾವುದೂ ರಚನೆಯಾಗಲಿಲ್ಲ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಮಾಹಿತಿಯನ್ನು ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ಹೊಸದಾಗಿ 7 ಜಿಲ್ಲೆಗಳನ್ನು ಹಿಂದಿನ ಸರ್ಕಾರವು ರಚನೆ ಮಾಡಿದ್ದರು. ಈಗ ಹೊಸ ಸರ್ಕಾರ ಬಂದ ಮೇಲೆಯೂ ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅದರ ಸಮಗ್ರ ಅಭಿವೃದ್ಧಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಮುಂಗಡಪತ್ರದಲ್ಲಿ ಆ ಬಗ್ಗೆ ಸ್ಪಷ್ಟವಾಗಿ ಏನು ಪ್ರಸ್ತಾಪ ಮಾಡದೆ ಇರುವುದರಿಂದ ಹೊಸ ಜಿಲ್ಲಾ ಕೇಂದ್ರಗಳಿಗೆ ಸಾಕಷ್ಟು ಒತ್ತುಕೊಟ್ಟು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡದೆ ಇದ್ದರೆ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳು, ಆ ಜಿಲ್ಲಾ ಕೇಂದ್ರಗಳಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ವಿಶೇಷ ಗಮನವನ್ನು ಕೊಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ) : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನನ್ನ ಕೆಲವು ಬೇಡಿಕೆಗಳಲ್ಲಿ ಪ್ರೈಮರಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಈ ಸರ್ಕಾರ ಮಹಿಳೆಯರಿಗೆ ಶಿಕ್ಷಣದಲ್ಲಿ ಹೆಚ್ಚು ಆದ್ಯತೆಯನ್ನು ಕೊಡುವ ಸರ್ಕಾರವು ಧಾರವಾಡದಲ್ಲಿರುವಂತಹ ಸರ್ಕಾರಿ ಹೆಣ್ಣು ಮಕ್ಕಳ ಶಿಕ್ಷಕಿಯರ ತರಬೇತಿ ಸಂಸ್ಥೆಯ ಶತಮಾನೋತ್ಸವ ಆಚರಿಸುವಂತಹ ಇಂತಹ ಒಂದು ಸಂಸ್ಥೆಗೆ ಕಟ್ಟಡಗಳ ಅವಶ್ಯಕತೆ ಇದೆ ಎನ್ನುವಂಥಾದ್ದನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿದ್ದೇನೆ. ಅದರ ಬಗ್ಗೆ

ಅವರು ಉತ್ತರವನ್ನು ಕೊಡಬೇಕು, ಮತ್ತು ಅದನ್ನು ಪೂರೈಸಿಕೊಡಬೇಕು. ಇನ್ನು ಎರಡನೆಯದಾಗಿ ಈ ಒಂದು ಸಾಫ್ಟ್‌ವೇರ್ ಟೆಕ್ನಾಲಜಿಯ ಸಲುವಾಗಿ ಅವರು ಪಾರ್ಕ್ ಮಾಡಬೇಕಾಗಿದೆ ಅದರ ಬಗ್ಗೆಯೂ ಸಹ ನಾನು ನಿನ್ನೆ ದಿನ ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆಯೂ ಸಹ ಉತ್ತರವನ್ನು ಕೊಡಬೇಕು. ಉತ್ತರಕರ್ನಾಟಕ ಧಾರವಾಡದ ಒಂದೇ ಒಂದು ಮಾನಸಿಕ ಆಸ್ಪತ್ರೆ ಇದ್ದು, ನಿಮ್ಹಾನ್ಸ್ ಮಾದರಿಯಲ್ಲಿ ಅದನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿದರೆ ಅದು ಹೆಚ್ಚು ಉತ್ತರ ಕರ್ನಾಟಕ ಭಾಗದ ಜನರ ಮಾನಸಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ. 160 ವರ್ಷಗಳ ಹಿಂದೆ ಪ್ರಾರಂಭವಾದ ಮಾನಸಿಕ ಆಸ್ಪತ್ರೆಯಾಗಿದೆ. ಇದರ ಬಗ್ಗೆಯೂ ಸಹ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಈಗಾಗಲೇ ಮಾತನಾಡಿದ್ದೀರಿ, ಮತ್ತೆ ಅದನ್ನು ಸುಮ್ಮನೆ ರಿಪೀಟ್ ಮಾಡುತ್ತಿದ್ದೀರಿ ಅಷ್ಟೆ. ನಾನು ನಿನ್ನೆಯೇ ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ವಿಶ್ವಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ಭೇಟಿ ಮಾಡಲು 1 ಗಂಟೆಗೆ ಹೋಗಬೇಕಾಗಿದೆ. ಇದನ್ನು ತಾವುಗಳೆಲ್ಲರೂ ಅರ್ಥಮಾಡಿಕೊಳ್ಳಬೇಕು. ಇದನ್ನು ತಾವುಗಳೆಲ್ಲರೂ ಒಪ್ಪಿಕೊಂಡು ಮತ್ತೆ ವಿಷಯವನ್ನು ಪುನರಾವರ್ತನೆ ಮಾಡಿದರೆ ಹೇಗೆ?

ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ದಾರುಣಸ್ಥಿತಿಯ ಅಧ್ಯಯನ ಮಾಡಿದ ನಂತರ ಬೃಹತ್ ಉದ್ಯಮಗಳನ್ನು ತರುತ್ತೇವೆಂಬ ಸರ್ಕಾರದ ಘೋಷಣೆ ಏನಿದೆ, ಅದನ್ನು ಅನುಷ್ಠಾನಕ್ಕೆ ತರಲಿಕ್ಕೆ ಮತ್ತು ಅಲ್ಲಿ ಅಧ್ಯಯನಕ್ಕೆ 3 ಕೋಟಿ ರೂಗಳ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು : ಇದರ ಬಗ್ಗೆ ಡಿಮ್ಯಾಂಡ್ಸ್ ಬಂದಾಗ ತಾವು ಮಾತನಾಡಬೇಕು.

ಶ್ರೀ ಎನ್. ಯೋಗೀಶ್ ಭಟ್ : ಇದರ ಬಗ್ಗೆ ನಾನು ಕ್ಲಾರಿಫಿಕೇಷನ್‌ನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ಅವರು ಏನು ಕ್ಲಾರಿಫಿಕೇಷನನ್ನು ಕೊಟ್ಟಿಲ್ಲ, ಮೀನುಗಾರಿಕಾ ಬೋಟುಗಳಿಗೆ ಡೀಸೆಲ್ ಮಾರಾಟ ತೆರಿಗೆ ರಹಿತವಾಗಿ ಅದನ್ನು ಸರಬರಾಜು ಮಾಡುವುದರ ಬಗ್ಗೆಯೂ ಕೂಡ ಹೇಳಿಲ್ಲ.

ಅಧ್ಯಕ್ಷರು : ಇದರ ಬಗ್ಗೆ ಮೊನ್ನೆಯ ದಿನ ಡಿಸ್‌ಕಸ್ ಆಗಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಂಗಳೂರು ಹಾಗೂ ಉಡುಪಿಯಲ್ಲಿ ಸಾಫ್ಟ್‌ವೇರ್ ಪಾರ್ಕ್ ತರುವ ಬಗ್ಗೆಯೂ ಕೂಡ ಹೇಳುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಗೆ ಯಾವುದೇ ಥರ್ಮಲ್ ಪ್ಲಾಂಟ್‌ಗಳು ಬೇಡ, ನ್ಯಾಚುರಲ್ ಬೇಸ್ಡ್ ಇರುವಂತಹ ಥರ್ಮಲ್ ಪ್ಲಾಂಟ್‌ಗಳು ಇದ್ದರೆ ಒಳ್ಳೆಯದು. ಯಾವುದೇ ಪವರ್ ಪ್ಲಾಂಟ್‌ಗಳು ಬೇಡ ಎಂದು ಒತ್ತಾಯವನ್ನು ಕೂಡ ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಸುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾದರೆ, ನಾನ್ ಬ್ಯಾಂಕಿಂಗ್ ಫೈನಾನ್ಸ್ ಕಮೀಷನ್‌ಗೆ ಇದಕ್ಕೆ ಸಂಬಂಧಪಟ್ಟ ಹಾಗೆ, ಯಾವುದು ಕಂಪನಿಗಳು ಇದೆ, ಅದನ್ನು ಕೂಡ ಒಂದು ವ್ಯಾಪ್ತಿಯಲ್ಲಿ ಮಸೂದೆಯನ್ನು ತರಬೇಕು ಎಂದು ಒತ್ತಾಯವನ್ನು ಕೂಡ ಮಾಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಸೋಮಶೇಖರ್‌ರವರು ಇಲ್ಲಿ ಎರಡು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ 20 ಸಾವಿರ ಗ್ರ್ಯಾಜ್ಯುಯೆಟ್ಸ್‌ನ್ನು ನೀವು ಹೇಗೆ ಜಾಸ್ತಿ ಮಾಡುತ್ತೀರಿ? ಎಂದು ಹೇಳುತ್ತಿದ್ದರು. ಇನ್‌ಫರ್ಮೇಷನ್ ಟೆಕ್ನಾಲಜಿ ವಿಚಾರದಲ್ಲಿ what we have in mind is.ಈಗ 77 ಇಂಜಿನಿಯರ್ ಕಾಲೇಜುಗಳು ನಮ್ಮಲ್ಲಿ ಇದೆ. ಆ 77 ಇಂಜಿನಿಯರಿಂಗ್

ಕಾಲೇಜುಗಳಲ್ಲಿ ಇನ್‌ಟೇಕ್ ಇಷ್ಟು ಎಂದು ಹೇಳಿ ಗುರುತಿಸಲ್ಪಟ್ಟಿದೆ. There are various disciplines like Mechanical Engineering, Civil Engineering, Electrical Engineering, Computer Engineering etc.

ಇನ್ನು ಏನೇನೋ ಇರುತ್ತದೆ. ಆದ್ದರಿಂದ we would like to increase each particular discipline because the demand in the next 10 years, as on today ಡಿಮ್ಯಾಂಡ್ ನಮಗೆ ಬರತಕ್ಕಂಥಾದ್ದು not for Civil Engineers, not for Mechanical Engineers, not even for Electrical Engineers, the demand will be for Electronics Engineers, 'Software Engineers, Technology engineers, Pharmaceutical Engineers. ಆದ್ದರಿಂದ ಈ ಡಿಸ್‌ಪ್ಲಿನ್ಸ್‌ನಲ್ಲಿ ಇನ್‌ಟೇಕ್‌ನ್ನು ಜಾಸ್ತಿ ಮಾಡುವುದರ ಮೂಲಕ ಮಾರುಕಟ್ಟೆಯಲ್ಲಿ ಕರ್ನಾಟಕದಲ್ಲಿ ಕಲಿತಂಥ ವಿದ್ಯಾರ್ಥಿಗಳು ಏನಿದ್ದಾರೆ, ಅವರಿಗೆ ಅವಕಾಶಗಳು ಸಿಗುತ್ತದೆ. Admissions to all these institutions are governed by the Supreme Court and the Government does not have any control except 5% and even that 5% is subject to so many conditions. ಆ ದೃಷ್ಟಿಯಿಂದ ಆ ಡಿಸಿಪ್ಲೀನ್‌ನಲ್ಲಿನ ಇನ್‌ಟೇಕ್‌ನ್ನು ಜಾಸ್ತಿ ಮಾಡುವುದರ ಮೂಲಕ ಮಾರುಕಟ್ಟೆಯಲ್ಲಿ ನಮ್ಮ ಪದವೀಧರರು ನೇಮಕಾತಿಗಳಿಗೆ ಲಭ್ಯವಾಗಲಿ ಎನ್ನತಕ್ಕಂಥಹ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಇನ್ನು ಎರಡನೆಯದಾಗಿ, ನಾನು 15 ಪರ್ಸೆಂಟ್ ಏನು ಅನುದಾನವನ್ನು ಕಡಿಮೆ ಮಾಡುತ್ತಿದ್ದೇನೆಂದರೆ, ಯಾರು ಅನುದಾನವನ್ನು ಪಡೆಯುತ್ತಿಲ್ಲ ಅವರಿಗೆ ಅಪ್ಲೈ ಆಗುವುದಿಲ್ಲ. ಇದು ಒಂದು ಸೀಮಿತವಾದಂತಹ ಅನುದಾನಕ್ಕೆ ಒಳಪಟ್ಟಿರತಕ್ಕಂತಹ ಹೈಯರ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗೆ ಮಾತ್ರ ಅದು ಅಪ್ಲೈ ಆಗುತ್ತದೆ. ಗೌರ್ನಮೆಂಟ್‌ಗೆ ಇದು ಅಪ್ಲೈ ಆಗುವುದಕ್ಕೆ ಸಾಧ್ಯವೇ ಇಲ್ಲ. ಬಡವರೆಲ್ಲರೂ ಸರ್ಕಾರಿ ಶಾಲೆಗಳಲ್ಲಿ ಕಲಿಯತಕ್ಕಂಥವರು ಬಹುತೇಕವಾಗಿ ಇದ್ದಾರೆ, some exceptions are here and there.

ಎಲ್ಲಿ ಶಾಲೆಗಳಿಲ್ಲ, ಕಾಲೇಜುಗಳಿಲ್ಲ, ಅಲ್ಲಿ ಪ್ರೈವೇಟ್ ಕಾಲೇಜುಗಳಿಗೆ ಹೋಗಬಹುದು. ಆದರೆ ಬಹುತೇಕ ಸರ್ಕಾರಿ ಕಾಲೇಜುಗಳಲ್ಲಿ ಇವರಿಗೆಲ್ಲಾ ಶಿಕ್ಷಣವನ್ನು ಕೊಡುತ್ತಿದ್ದೇವೆ. ತಾವು ಏನು ಸ್ಟ್ಯಾಂಪ್ ಡ್ಯೂಟಿಯ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದೀರಿ, ಅದರ ಬಗ್ಗೆ ನಾನು ಯೋಚನೆಯನ್ನು ಮಾಡಿ ಮತ್ತೆ ಸದನದ ಮುಂದೆ ಬರುತ್ತೇನೆ. ನೀವು ಹೇಳುತ್ತಿರುವುದರಲ್ಲಿ ಸಾಕಷ್ಟು ಆಧಾರವಿದೆಯೆಂದು ನನಗನಿಸುತ್ತದೆ. ಇನ್ನು ಮಾನ್ಯ ಅರಗಜ್ಞಾನೇಂದ್ರರವರು ರಿಹ್ಯಾಬಿಲ್ಲಿಟೇಷನ್ ಬಗ್ಗೆ ಹೇಳಿದ್ದಾರೆ. ಏನು ತಮುಳುಗಡೆಯಾಗುತ್ತದೆ . ಭೂಮಿ ನಮ್ಮ ಇತ್ತೀಚಿನ ಪ್ರಾಜೆಕ್ಟ್ ಫಿಲಾಸಫಿ ಏನು ಎಂದು ಹೇಳಿದರೆ, ಮೊದಲು ರಿಹ್ಯಾಬಿಲ್ಲಿಟೇಟ್ ಮಾಡಿ ಅನಂತರ ನೀವು ಕೆಲಸವನ್ನು ಶುರು ಮಾಡಿ ಎಂದು ಹೇಳುವಂತದ್ದು. That is the direction of the lending institutions also.

ಆದ್ದರಿಂದ ಅದು ಉಲ್ಟಾ ಆಗಿರುವುದರಿಂದ ಅದನ್ನು ಸರಿಪಡಿಸುವ ಭರವಸೆಯನ್ನು ತಮಗೆ ಕೊಡುತ್ತಿದ್ದೇನೆ. ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ಎರಡು-ಮೂರು ವಿಚಾರಗಳನ್ನು ಹೇಳಿದ್ದಾರೆ. ನಿಮ್ಹಾನ್ಸ್ ಸಂಸ್ಥೆ ಅಲ್ಲಿ ಆಗಬೇಕೆಂದು ಹೇಳಿದ್ದಾರೆ. ಅದನ್ನು ಸಂಬಂಧಪಟ್ಟಂತಹ ಡಿಪಾರ್ಟ್‌ಮೆಂಟ್ಸ್ ಡಿಮ್ಯಾಂಡ್‌ಗಳು ಬಂದಾಗ ಈ ಕೋರಿಕೆಯನ್ನು ನಾವು ಗಮನಿಸಬಹುದಾಗಿದೆ.

ನಮ್ಮ ಕಾಂಗ್ರೆಸ್ ಸಂಸ್ಥೆಯು 100 ವರ್ಷದ ಇತಿಹಾಸವನ್ನು ಪಡೆದಿದ್ದು, ನೀವು ಹೇಳುತ್ತಿರುವಂತಹ ಸಂಸ್ಥೆಗೆ 100 ವರ್ಷಗಳ ಇತಿಹಾಸವಿದೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ತಾವು ಏನು ಮಾಡಬೇಕೆಂದು ಹೇಳುತ್ತಿದ್ದೀರಿ ?

ಶ್ರೀ ಚಂದ್ರಕಾಂತ್ ಬೆಲ್ಲದ್ : ಮಹಿಳಾ ಶಿಕ್ಷಕಿಯರ ತರಬೇತಿ ಸಂಸ್ಥೆಗೆ ಕಟ್ಟಡಗಳ ಅವಶ್ಯಕತೆ ಇದೆ.

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ಕೇಳುವುದೇ ಅಪರೂಪ. ಅದನ್ನು ಹುಡ್ಕೋ ಯೋಜನೆಯ ಜೊತೆಯಲ್ಲಿ ಸೇರಿಸಿ ಅಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿಕೊಡುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಮುಖ್ಯಮಂತ್ರಿಗಳು ಕೊಡಗು ಜಿಲ್ಲೆಯ ಬಗ್ಗೆ ಏನು ಹೇಳಲಿಲ್ಲವಲ್ಲಾ ?

ಶ್ರೀ ಎಸ್.ಎಂ.ಕೃಷ್ಣ : ನಾನು ಏನು ಜಿಲ್ಲಾ ಪಂಚಾಯಿತಿ ಆಯವ್ಯಯವನ್ನು ಇಲ್ಲಿ ಮಂಡಿಸಿದ್ದೇನೆ ಎಂದು ತಾವು ತಿಳಿದುಕೊಂಡಿದ್ದೀರಾ ? ಕೊಡಗು ಜಿಲ್ಲೆ ಕರ್ನಾಟಕ ರಾಜ್ಯದ ಒಂದು ಭಾಗ.

12.40 ಪಿ.ಎಂ.

ಅಧ್ಯಕ್ಷರು : 2000-2001ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮತಕ್ಕೆ ಹಾಕುವುದು.

ಬೇಡಿಕೆಗಳ ಸಂಖ್ಯೆಗಳು 1 ರಿಂದ 63

ಅಧ್ಯಕ್ಷರು : 2000-2001ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯಮಂತ್ರಿ ಹಾಗೂ ಅರ್ಥಸಚಿವರು) : ಮಾನ್ಯ ಅಧ್ಯಕ್ಷರೆ, 'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 1 ರಿಂದ 63ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊತ್ತವನ್ನು ಮಂಜೂರು ಮಾಡುವುದು.'

ಅಧ್ಯಕ್ಷರು : ಮಂಡಿಸಲಾಯಿತು.

ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ

"ದಿನಾಂಕ : 31.3.2000ದಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 2, 3, 4, 5, 6, 7, 8, 9, 10, 11, 12, 13, 14, 15, 17, 18, 19, 20, 21, 22, 24, 25, 26, 27, 28, 29, 30, 31, 32, 33, 34, 35, 36, 37, 38, 39, 40, 42, 44, 45, 47, 48, 49, 51, 52, 53, 54, 55, 56, 57, 58, 61, 63 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ